ಸಂಪುಟ: 15 Volume | ಸಂಚಿಕೆ: 02 Issue | ಪುಟಗಳು 08 Pages | ಗುರುವಾರ 02 ಏಪ್ರಿಲ್ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

**ಬೆಳಗು**


ಕಲಿಕೆ ವಿಷಯ ಬರೀ ತಿಳುವಳಿಕೆಯ ಮಟ್ಟದಲ್ಲಿ ಉಳಿಯದೆ ಹೆಚ್ಚು ಅರ್ಥಪೂರ್ಣ ಮಾಡಬಲ್ಲ ಮನುಷ್ಯನೊಬ್ಬ ಬೇಕು. ಆತನೇ ಕೋಚ್ ಅಥವಾ ಗುರು.

–ಪಿ. ಲಂಕೇಶ್

ಇಂದು ಪೊಲೀಸ್ ಧ್ವಜ ದಿನಾಚರಣೆ 6

ರೈತರು ಕೆಜಿವೀಲ್ಸ್ ಹೊಡೆಯಬೇಡಿರಿ 7

ಅನುಭವ ಮಂಟಪಕ್ಕೆ ಮತ್ತೆ 55 ಕೋಟಿ 8



Real star, ನಾಯಕ ನಟ ಉಪೇಂದ್ರ ಅವರು ಎಲ್ಲಮ್ಮ ನುಡಿ ಯುಗಾದಿ ವಿಶೇಷಾಂಕವನ್ನು ಬೆಂಗಳೂರಲ್ಲಿ ಲೋಕಾರ್ಪಣೆ ಗೊಳಿಸಿದರು. ಪ್ರಧಾನ ಸಂಪಾದಕ ಡಾ.ಮಹ್ಮದ್ ಬಾಷ ಗೂಳ್ಯಂ ಇದ್ದರು.

## ಭಕ್ತರ ಮನ ಸೆಳೆದ ಬೆಂಗಳೂರಿನ ಕರಗ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕನ್ನಡ ನೆಲದ ಶ್ರೇಷ್ಠ ಪರಂಪರೆಯ ಪ್ರತೀಕ, ನಾಡು–ನುಡಿ ಮತ್ತು ಸಂಸ್ಕೃತಿಯ ಕಳಸಪ್ರಾಯವಾದ ಐತಿಹಾಸಿಕ, ಜಗದ್ವಿಖ್ಯಾತ 'ಬೆಂಗಳೂರು ಕರಗ' ಮಹೋತ್ಸವ ನಡೆದಿದೆ. ಈ ಸಂದರ್ಭದಲ್ಲಿ ಬೆಂಗಳೂರಿನ ಕೆ.ಆರ್. ಮಾರ್ಕೆಟ್, ಚಿಕ್ಕಪೇಟೆ, ಚಾಮರಾಜನಗರ ಸೇರಿದಂತೆ ಅನೇಕ ಕಡೆ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಭಕ್ತರ ದಂಡು, ಕರಗ ಕಂಡು ಪುನೀತರಾಗಿದ್ದಾರೆ. ಭಕ್ತಿಪೂರ್ವಕ ಶುಭಾಶಯಗಳನ್ನೂ ಕೋರಿದ್ದಾರೆ.

ಈ ಕರಗ ಬರೀ ಉತ್ಸವ ಅಷ್ಟೇ ಅಲ್ಲ, ನಾಡಪ್ರಭು ಶ್ರೀ ಕೆಂಪೇಗೌಡರು ಕಟ್ಟಿದ ಬೆಂಗಳೂರು ಮಹಾನಗರದ ಅಸ್ಮಿತೆಯಾಗಿದೆ. ಅದರ ಅನನ್ಯತೆಯ ಸಂಕೇತವಾಗಿದೆ. ಈ ಶುಭ ಸಂದರ್ಭದಲ್ಲಿ ಶ್ರೀ ಧರ್ಮರಾಯಸ್ವಾಮಿ ದೇವರ ಕೃಪೆಯಿಂದ ಎಲ್ಲೆಡೆ ಸುಖಶಾಂತಿ, ನೆಮ್ಮದಿ ಸಮೃದ್ಧಿ ನೆಲೆಸಲಿ ಎಂದು ಭಕ್ತರು ಹಾರೈಸಿದ್ದಾರೆ.



## ನಿಷ್ಠಾವಂತ ಕಾರ್ಯಕರ್ತರೇ ಪಕ್ಷದ ಆಸ್ತಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಪ್ರಾಮಾಣಿಕವಾಗಿ, ಬದ್ಧತೆಯಿಂದ, ಪಕ್ಷ ಸಂಘಟನೆ ಮತ್ತು ಪ್ರಚಾರ ಕಾರ್ಯಗಳಲ್ಲಿ ಶ್ರಮಿಸುತ್ತಿರುವ ನಮ್ಮ ಕಾರ್ಯಕರ್ತರ ನಿಷ್ಠೆ ಹಾಗೂ ಸಮರ್ಪಣಾ ಮನೋಭಾವವೇ ನಮ್ಮ ಅತಿದೊಡ್ಡ ಶಕ್ತಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ತಿಳಿಸಿದ್ದಾರೆ.

ಬಾಗಲಕೋಟೆ ಉಪಚುನಾವಣೆಯ ಹಿನ್ನೆಲೆಯಲ್ಲಿ ಪಕ್ಷದ ಅಭ್ಯರ್ಥಿ ಪರವಾಗಿ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಪಕ್ಷದ ವಿಸ್ತಾರಕರೊಂದಿಗೆ ಸಭೆ ನಡೆಸಿ, ಚುನಾವಣಾ ಕಾರ್ಯತಂತ್ರಗಳ ಕುರಿತು ಅವರು ಸಮಾಲೋಚನೆ ಕೈಗೊಂಡರು. ಆಡಳಿತ ಪಕ್ಷದ ಅಧಿಕಾರ ಬಲ, ಧನ ಬಲಗಳ ಸವಾಲನ್ನು ಸಮರ್ಪಕವಾಗಿ ಎದುರಿಸಿ, ಜನಬಲವೇ ಅಂತಿಮ ಎಂಬುದನ್ನು ಸಾಬೀತುಪಡಿಸಲು ಅವರು ಮನವಿ ಮಾಡಿದರು. ಸಭೆಯಲ್ಲಿ ಬಾಗಲಕೋಟೆ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ್, ಸಂಸದ ನಾರಾಯಣ ಸಾ ಭಾಂಡಗೆ, ಶಾಸಕರಾದ ಪಿ.ಹೆಚ್.ಪೂಜಾರ್, ಜಗದೀಶ್ ಗುಡಗಂಟಿ, ಶೈಲೇಂದ್ರ ಬೆಲ್ದಾಳೆ, ಸೇರಿ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ವಿಸ್ತಾರಕರು, ಅನೇಕ ಪ್ರಮುಖ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಪಾಲ್ಗೊಂಡಿದ್ದರು.



## ಗೃಹಸಚಿವರ ವಿರುದ್ಧ ಪೋಸ್ಟ್: ಕೇಸ್

**ಬೆಂಗಳೂರು:** ಗೃಹ ಸಚಿವ ಜಿ.ಪರಮೇಶ್ವರ ಅವರ ವಿರುದ್ಧ ಸಾಮಾಜಿಕ ಮಾಧ್ಯಮದಲ್ಲಿ ಆಕ್ಷೇಪಾರ್ಹ ಪೋಸ್ಟ್ ಹಾಕಿರುವ ಬಗ್ಗೆ ಸೈಬರ್ ಅಪರಾಧ ಠಾಣೆಯ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿದ್ದಾರೆ. ಪರಮೇಶ್ವರ್ ಅವರಿಗೆ ಸಂಬಂಧಿಸಿದ ನೆಲಮಂಗಲ ತಾಲೂಕಿನ ಟಿ. ಬೇಗೂರುದಲ್ಲಿರುವ ವೈದ್ಯಕೀಯ ಕಾಲೇಜಿನಲ್ಲಿ ನಡೆದ ಘಟನೆಯನ್ನು ಉಲ್ಲೇಖಿಸಿ ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪಾರ್ಹ ಪೋಸ್ಟ್ ಹಾಕಿ, ಹಿಂದೂ ಜಾಗೃತನಾಗು ಹೆಸರಿನ ಎಕ್ಸ್ ಖಾತೆಯಲ್ಲಿ ಈ ಆಕ್ಷೇಪಾರ್ಹ ಪೋಸ್ಟ್ ಹಾಕಲಾಗಿತ್ತು. ಇದರ ಬೆನ್ನಲ್ಲೇ ಆರೋಪಿಗಳ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡಿರುವ ಪೊಲೀಸರು, ತನಿಖೆ ನಡೆಸುತ್ತಿದ್ದಾರೆ.

## ಸಚಿವರ ಆರೋಗ್ಯ ಏರುಪೇರು

**ಬೆಂಗಳೂರು:** ಸಾಂಖ್ಯಿಕ ಮತ್ತು ಅಂಕಿ ಸಂಖ್ಯೆ ಖಾತೆ ಸಚಿವ ಡಿ ಸುಧಾಕರ್ ಅವರ ಆರೋಗ್ಯದಲ್ಲಿ ಕಳೆದ ರಾತ್ರಿ ವ್ಯತ್ಯಯವಾಗಿದೆ. ದಿಢೀರ್ ಅನಾರೋಗ್ಯ ಕಾಣಿಸಿಕೊಂಡ ಸಚಿವ ಸುಧಾಕರ್ ಅವರನ್ನು ಬೆಂಗಳೂರಿನ ಯಶವಂತಪುರದ ಮಣಿಪಾಲ ಆಸ್ಪತ್ರೆಗೆ ದಾಖಲಾಗಿದ್ದಾರೆ. ತೀವ್ರ ನಿಗಾ ಘಟಕದಲ್ಲಿ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದ್ದು ಹೆಚ್ಚಿನ ವಿವರ ಲಭ್ಯವಾಗಬೇಕಿದೆ.

## ಮೂರವಾರದಲ್ಲಿ ಯುದ್ಧ ಅಂತ್ಯ: ಟ್ರಂಪ್

**ವಾಷಿಂಗ್ಟನ್:** ಮಧ್ಯಪ್ರಾಚ್ಯದಲ್ಲಿನ ಯುದ್ಧ ತಾರಕ್ಕೇರುತ್ತಿರುವ ನಡುವೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೊಸ ಹೇಳಿಕೆ ನೀಡಿದ್ದಾರೆ. ಶ್ವೇತಭವನದ ಓವಲ್ ಆಫೀಸ್‌ನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿ, ನಾವು ಈಗಾಗಲೇ ಮಿಲಿಟರಿ, ರಾಜತಾಂತ್ರಿಕ ಮಾರ್ಗಗಳೆರಡನ್ನೂ ಅನುಸರಿಸುತ್ತಿದ್ದು, ಕೇವಲ 2–3 ವಾರ ಮಾತ್ರ ಯುದ್ಧವನ್ನು ಮುಂದುವರೆಸಲಿದ್ದೇವೆ. ಬಳಿಕ ಅದನ್ನು ಶೀಘ್ರವೇ ಮುಗಿಸಿ ಅಲ್ಲಿಂದ ತೊರೆಯುತ್ತೇವೆ ಎಂದಿದ್ದಾರೆ.



# ಕೈ ಶಸ್ತ್ರ ಕಮಲ ಟೀಕಾಸ್ತ್ರ

## ದಿನೇ ದಿನೆ ರಂಗೇರ ತೊಡಗಿದ ಉಪಚುನಾವಣೆ | ಬಿಜೆಪಿ–ಕಾಂಗ್ರೆಸ್ ನಾಯಕರ ನಡುವೆ ವಾಕ್ಸಮರ


• ಮಲ್ಲಮ್ಮ ನುಡಿ ವಾರ್ತೆ ದಾವಣಗೆರೆ/ಬಾಗಲಕೋಟೆ

ಉಪಚುನಾವಣೆ ದಿನೇ ದಿನೆ ರಂಗೇರ ತೊಡಗಿದೆ. ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರ ಪರಸ್ಪರ ವಾಕ್ಸಮರ ತೀವ್ರಗೊಂಡಿದೆ. ಇದೇವೇಳೆ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ಪ್ರತಿಪಕ್ಷ ನಾಯಕ ಆರ್ ಅಶೋಕ್ ಅವರು ಕಾಂಗ್ರೆಸ್ ವಿರುದ್ಧ ಟೀಕಾಸ್ತ್ರ ಬಿಟ್ಟಿದ್ದಾರೆ.

**ಬಿಜೆಪಿ ಬಗ್ಗೆ ಸಿಎಂ ಟೀಕೆ:** ಬಾಗಲಕೋಟೆ, ದಾವಣಗೆರೆ ದಕ್ಷಿಣ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಭರ್ಜರಿ ಪ್ರಚಾರ ನಡೆಸುತ್ತಿದ್ದು, ಇದರ ಬೆನ್ನಲ್ಲೇ ಬಿಜೆಪಿ ನಾಯಕರು ಆಡಳಿತ ಪಕ್ಷ ಫಲಿತಾಂಶದ ಬಗ್ಗೆ ಆತಂಕದಲ್ಲಿದೆ ಎಂದು ಟೀಕಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿದ ಸಿಎಂ, ಈ ಮಾತುಗಳು ಬಿಜೆಪಿಯ ಭಯವನ್ನು ತೋರಿಸುತ್ತವೆ ಎಂದು ತಿರುಗೇಟು ನೀಡಿದ್ದಾರೆ.

**ನಂಬುಗೆ, ವಿಶ್ವಾಸ ದ್ರೋಹ:** ನಂಬಿಕೆ ಮತ್ತು ವಿಶ್ವಾಸ ದ್ರೋಹಕ್ಕೆ ಮತ್ತೊಂದು ಹೆಸರೇ ಸಿದ್ದರಾಮಯ್ಯ. ಮುಖ್ಯಮಂತ್ರಿಯಾದ ನಂತರ, ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಹಗಲು ದರೋಡೆ – ವರ್ಗಾವಣೆ, ಕಮಿಷನ್ ಮತ್ತು ಹಗರಣಗಳಲ್ಲಿ ನಿರತವಾಗಿದೆ ಮಾಜಿ ಸಿಎಂ ಬಿ.ಎಸ್ ಯಡಿಯೂರಪ್ಪ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.





### ರೈತರಿಗಿಲ್ಲ ಪರಿಹಾರ

ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರ ಸಿಎಂ ಸ್ಥಾನ ಕುರಿತ ಹೇಳಿಕೆಗಳ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಸಿದ್ದರಾಮಯ್ಯ ಅವರು, ಬಾಗಲಕೋಟೆ ಜಿಲ್ಲೆಯಲ್ಲಿ ಪ್ರಮುಖ ಅಭಿವೃದ್ಧಿ ಕೆಲಸಗಳು ಆಗಿಲ್ಲ. ವೈದ್ಯಕೀಯ ಕಾಲೇಜು ಸ್ಥಾಪನೆ ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಯಡಿ ರೈತರಿಗೆ ಪರಿಹಾರ ನೀಡುವ ವಿಷಯಗಳಿಗೆ ಈ ಹಿಂದಿನ ಬಿಜೆಪಿ ಸರ್ಕಾರ ಆದ್ಯತೆ ನೀಡಿಲ್ಲ ಎಂದು ದೂರಿದ್ದಾರೆ.

### ಜನರಿಂದಲೇ ತಕ್ಕಪಾಠ

ಪ್ರಸ್ತುತ ಸರ್ಕಾರ ಅತ್ಯಂತ ಭ್ರಷ್ಟ ಸರ್ಕಾರ ಎಂದು ಹೇಳಿದ ಯಡಿಯೂರಪ್ಪ, ದಾವಣಗೆರೆ ಮತ್ತು ಬಾಗಲಕೋಟೆ ಉಪಚುನಾವಣೆಯಲ್ಲಿ ಜನರು ಪಕ್ಷಕ್ಕೆ ಪಾಠ ಕಲಿಸುತ್ತಾರೆ. ಕಾಂಗ್ರೆಸ್ ಸರ್ಕಾರ ತನ್ನ ಖಾತರಿ ಯೋಜನೆಗಳ ಹೆಸರಲ್ಲಿ ರಾಜ್ಯವನ್ನು ದಿವಾಳಿ ಮಾಡಿದೆ. ರಸ್ತೆಗಳು ದಯನೀಯ ಸ್ಥಿತಿಯಲ್ಲಿವೆ. ಒಂದು ಕಿಲೋಮೀಟರ್ ರಸ್ತೆ ಕೂಡ ನಿರ್ಮಿಸಲಾಗುತ್ತಿಲ್ಲ. ರೈತರಿಗೆ ವಿದ್ಯುತ್ ನೀಡಲಾಗುತ್ತಿಲ್ಲ ಎಂದಿದ್ದಾರೆ.

### ವಿಜಯೇಂದ್ರ ವಿರುದ್ಧ ಗರಂ

ರಾಜ್ಯದ ಹಣಕಾಸಿನ ಬಗ್ಗೆ ಶ್ವೇತಪತ್ರ ಹೊರಡಿಸಬೇಕು ಎಂದ ವಿಜಯೇಂದ್ರ ಅವರ ಆಗ್ರಹಕ್ಕೆ ಪ್ರತಿಕ್ರಿಯೆ ನೀಡಿದ ಸಿಎಂ, ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿ ಬಗ್ಗೆ ಶ್ವೇತಪತ್ರ ಹೊರಡಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಒತ್ತಾಯಿಸಿರುವುದು ಆರ್ಥಿಕ ಕ್ಷೇತ್ರದ ಬಗೆಗಿನ ಅವರ ಅಜ್ಞಾನ, ಆಡಳಿತದ ಅನುಭವದ ಕೊರತೆ ಮತ್ತು ರಾಜಕೀಯ ಹತಾಸೆಯನ್ನು ತೋರಿಸುತ್ತದೆ ಎಂದು ತಿರುಗೇಟು ನೀಡಿದ್ದಾರೆ.

### ಹಗರಣಗಳ ಸರಮಾಲೆ

ತಿಹಾಸದಲ್ಲಿ ಅತಿ ಭ್ರಷ್ಟ ಸರ್ಕಾರ ಇದಾಗಿದೆ. ಮುಡಾ ಹಗರಣ, ವಾಲ್ಮೀಕಿ ನಿಗಮದ ಹಗರಣಗಳನ್ನು ನಡೆಸಿದೆ. ತೆರಿಗೆ ಭಯೋತ್ಪಾದನೆ ಶುರುವಾಗಿದೆ. ಸಿಎಂ ಮೊದಲ ಬಜೆಟ್‌ನಲ್ಲಿ ಅಬಕಾರಿ ತೆರಿಗೆ ಹೆಚ್ಚಳ ಮಾಡಿದ್ದರು. ಬಳಿಕ ಹಾಲು, ವಿದ್ಯುತ್ ದರ ಹೆಚ್ಚಿಸಿದ್ದಾರೆ. 3 ವರ್ಷದಲ್ಲಿ 60 ಸಾವಿರ ಕೋಟಿ ಹೊಸ ತೆರಿಗೆಯನ್ನು ಜನರ ಮೇಲೆ ಹೇರಿದ್ದಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ.

## ಯುದ್ಧದಿಂದಾಗಿಯೇ ಎಲ್ಲೆಲ್ಲೂ ದರ ಹೆಚ್ಚಳ..!

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಆರ್ಥಿಕ ವರ್ಷ ಆರಂಭದ ದಿನವಾದ ಇಂದು ಏಪ್ರಿಲ್ 1ರಿಂದ ಅನ್ವಯವಾಗುವಂತೆ 19 ಕೆಜಿ ವಾಣಿಜ್ಯ ಎಲ್ಪಿಜಿ ಗ್ಯಾಸ್ ಸಿಲಿಂಡರ್ ಬೆಲೆ ಹೆಚ್ಚಾಗಿದೆ. ದೆಹಲಿಯಲ್ಲಿ 19 ಕೆಜಿ ವಾಣಿಜ್ಯ ಎಲ್ಪಿಜಿ ಸಿಲಿಂಡರ್ ಬೆಲೆ 195.50 ರೂಪಾಯಿ ಹೆಚ್ಚಳವಾಗಿದೆ. ಕೊಲ್ಕತ್ತಾದಲ್ಲಿ ಇದೇ ಸಿಲಿಂಡರ್ ಬೆಲೆ 218 ರೂಪಾಯಿ ಏರಿಕೆಯಾಗಿದೆ. ಗೃಹ ಬಳಕೆಯ ಅಡುಗೆ ಅನಿಲದ ದರಗಳಲ್ಲಿ ಯಾವುದೇ ಬದಲಾವಣೆ ಇಲ್ಲ. ಈಖಿಐ ಸಿಲಿಂಡರ್ ಬೆಲೆ ಏರಿಕೆಯಾಗಿದೆ. 5 ಕೆಜಿ ಫ್ರೀ ಟ್ರೇಡ್ ಎಲ್ಪಿಜಿ ಸಿಲಿಂಡರ್ ಬೆಲೆ ಇಂದಿನಿಂದ 51 ರೂಪಾಯಿ ಹೆಚ್ಚಾಗಿದೆ. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದಿಂದಾಗಿ ಸರಬರಾಜು ವ್ಯತ್ಯಯ ಹಾಗೂ ಕೊರತೆಯ ಕಾರಣವಾಗಿ ತೈಲ ಮಾರುಕಟ್ಟೆಯಲ್ಲಿ ಅಸ್ಥಿರತೆ ಉಂಟಾಗಿದೆ. ಕಳೆದ ತಿಂಗಳು ಸರ್ಕಾರವು 14.2 ಕೆಜಿ ಗೃಹ ಬಳಕೆಯ, 19 ಕೆಜಿ ವಾಣಿಜ್ಯ ಎಲ್ಪಿಜಿ ಸಿಲಿಂಡರ್ ಬೆಲೆಗಳನ್ನು ಕ್ರಮವಾಗಿ 60 ರೂಪಾಯಿ ಮತ್ತು 144.5 ರೂಪಾಯಿ ಹೆಚ್ಚಿಸಿತ್ತು.

## ಸಣ್ಣ ವ್ಯಾಪಾರಕ್ಕೂ ಟ್ರೇಡ್ ಲೈಸೆನ್ಸ್: ಪ್ರತಿಭಟನೆ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ತಾಲೂಕಿನ ಸಾಣಾಪೂರದಲ್ಲಿ ಸಣ್ಣಪುಟ್ಟ ವ್ಯಾಪಾರ ವಹಿವಾಟು ಮಾಡಲು ಗ್ರಾ.ಪಂ.ಟ್ರೇಡ್ ಲೈಸೆನ್ ಕೊಡದಂತೆ ಹಂಪಿ ಅಭಿವೃದ್ಧಿ ಪ್ರಾಧಿಕಾರ ನಿಯಮವನ್ನು ರೂಪಿಸಿದೆ. ಇದರಿಂದ ಕೂಡಲೇ ಟ್ರೇಡ್ ಲೈಸೆನ್ಸ್ ಕೊಡಲು ಅನುಕೂಲ ಮಾಡಿಕೊಡಬೇಕೆಂದು ಆಗ್ರಹಿಸಿ ಸಾಣಾಪೂರ ಗ್ರಾಮಸ್ಥರು, ಮಹಿಳೆಯರು ಗ್ರಾ.ಪಂ. ಕಚೇರಿ ಎದುರು ಪ್ರತಿಭಟನೆ ನಡೆಸಿ ಪಿಡಿಓ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.




ಸಾಣಾಪೂರ ಗ್ರಾಮದ ರಸ್ತೆಯ ಅಕ್ಕಪಕ್ಕದಲ್ಲಿರುವ ಮನೆಗಳಲ್ಲಿ ಚಹಾದಂಗಡಿ, ತಂಪುಪಾನೀಯ, ಕಿರಾಣಿ, ಎಳೇನೀರು, ಕಾರಕುಟ್ಟುವ ಮಿಷನ್ ಸೇರಿ ಸಣ್ಣಪುಟ್ಟ ವ್ಯಾಪಾರ ಮಾಡಲು ಗ್ರಾ.ಪಂ. ಹಾಗೂ ಜೆಸ್ಕಾಂ ಅಧಿಕಾರಿಗಳು ನೋಟೀಸ್ ಕೊಟ್ಟು ವಿದ್ಯುತ್ ಸಂಪರ್ಕ ಕಡಿತ ಮಾಡುತ್ತಿದ್ದಾರೆ.

## ಬಿಸಿಲ ಝಳ, ಕಚೇರಿ ವೇಳೆ ಬದಲು

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮೇ ತಿಂಗಳ ಆರಂಭಕ್ಕೂ ಮುನ್ನವೇ ಸೂರ್ಯ ಝಳ ಹೆಚ್ಚಾಗತೊಡಗಿದೆ. ಶಿವಮೊಗ್ಗ, ತೀರ್ಥಹಳ್ಳಿ, ಕೊಪ್ಪ ಸೇರಿದಂತೆ ಮಲೆನಾಡಿನ ಪ್ರದೇಶದಲ್ಲೂ ಸೆಖೆ ತನ್ನ ಪ್ರತಾಪ ತೋರತೊಡಗಿದೆ. ವಿಶೇಷವಾಗೊ ಕಲಬುರಗಿ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಹೆಚ್ಚುತ್ತಿರುವ ಬಿಸಿಲಿನ ಝಳವನ್ನು ಪರಿಗಣಿಸಿ, ರಾಜ್ಯ ಸರ್ಕಾರವು ಸರ್ಕಾರಿ ಕಚೇರಿಗಳ ಕೆಲಸದ ವೇಳಾಪಟ್ಟಿಯಲ್ಲಿ ಮಹತ್ವದ ಬದಲಾವಣೆ ಮಾಡಿದೆ. ಕಲಬುರಗಿ, ಬೆಳಗಾವಿ ವಿಭಾಗದ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಏಪ್ರಿಲ್, ಮೇ ತಿಂಗಳ ಅವಧಿಗೆ ಕಚೇರಿ ಸಮಯವನ್ನು ಬೆಳಗ್ಗೆ 8:00 ರಿಂದ ಮಧ್ಯಾಹ್ನ 1:30 ರವರೆಗೆ ನಿಗದಿಪಡಿಸಿ ಆದೇಶ ಹೊರಡಿಸಿದೆ.



**ಕಚೇರಿ ಸಮಯ ಬದಲಾವಣೆಗೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ರಾಜ್ಯ ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಿಗೆ ಮತ್ತು ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಇದಕ್ಕೆ ಸ್ಪಂದನೆ ಸಿಕ್ಕಿದೆ. ಕಲಬುರಗಿ ಕಲಬುರಗಿ ವಿಭಾಗದ ಎಲ್ಲ ಜಿಲ್ಲೆಗಳು ಮತ್ತು ಬೆಳಗಾವಿ ವಿಭಾಗದ ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ಏಪ್ರಿಲ್ ಮೇ ಯಲ್ಲಿ ಸರಕಾರಿ ಕಚೇರಿಗಳ ಬದಲಾವಣೆ ಮಾಡಿ ಆದೇಶ ಹೊರಡಿಸಿರುವುದಕ್ಕೆ ಸರಕಾರಿ ನೌಕರರ ಸಂಘ ಸ್ವಾಗತಿಸುತ್ತದೆ.**

–ಬಸವರಾಜ ಬಳೂಂಡಗಿ, ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ

## ಪತ್ರಿಕೆಗಳು ನಾಡ ಜನರ ಜೀವನಾಡಿ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ಪತ್ರಿಕೆಗಳು ಜನರ ಜೀವನಾಡಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ವಿಶೇಷವಾಗಿ ಮಲ್ಲಮ್ಮ ನುಡಿ ಪ್ರಾದೇಶಿಕ ದಿನ ಪತ್ರಿಕೆಯು ಈ ಭಾಗದ ಆಶೋತ್ತರಗಳಿಗೆ ಸ್ಪಂದಿಸುತ್ತಿದೆ ಎಂದು ಮಾಜಿ ಸಚಿವ ರಾಜಶೇಖರ ಬಿ. ಪಾಟೀಲರು ಅಭಿಪ್ರಾಯಪಟ್ಟಿದ್ದಾರೆ. ಏಪ್ರಿಲ್ 1 ಅವರ ಹುಟ್ಟು ಹಬ್ಬದ ದಿನವಾಗಿದ್ದು, ಜೇರಪೇಟ್ ಬಡಾವಣೆಯಲ್ಲಿ ಮಲ್ಲಮ್ಮ ನುಡಿ ಪತ್ರಿಕೆ ಹೊರತಂದ ಯುಗಾದಿ ವಿಶೇಷಾಂಕವನ್ನು ಲೋಕಾರ್ಪಣೆಗೊಳಿಸಿ ಮಾತಿನಾಡಿದ್ದಾರೆ

ಹೈದರಾಬಾದ್ ಕರ್ನಾಟಕ ಜನರ ನೋವುಗಳು ಬೆಂಗಳೂರು ತಲುಪಬೇಕು. ವಿದಧಾನಸಭೆಯ ಅಧಿವೇಶನದಲ್ಲೂ ಅವು ಪ್ರತಿಧ್ವನಿಸಬೇಕು. ಇದು ನನ್ನ ಆಶಯವಾಗಿದೆ. ಪತ್ರಿಕೆಯ ಅಭಿಮತವೂ ಇದೇ ಆಗಿದೆ ಎಂದು ಆನಂತರ ಅವರ ಬಳಿ ಚರ್ಚಿಸಿದಾಗ ನಮಗೆ ಗೊತ್ತಾಯಿತು. ಇದು ನಿಜಕ್ಕೂ ಉತ್ತಮ ಕಾರ್ಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



### ಅಭಿಮಾನಿಗಳಿಂದ ಅದ್ದೂರಿ ಅಚರಣೆ

ಹುಮನಾಬಾದ್ ಕ್ಷೇತ್ರದ ಮಾಜಿ ಸಚಿವರಾದ ರಾಜಶೇಖರ ಬಿ. ಪಾಟೀಲರವರ ಹುಟ್ಟುಹಬ್ಬವನ್ನು ಈ ಬಾರಿ ಅವರ ಅಭಿಮಾನಿಗಳು ಹಾಗೂ ಕಾರ್ಯಕರ್ತರು ಅದ್ದೂರಿಯಾಗಿ ಬುಧವಾರ ಆಚರಿಸಿದರು. ಕ್ಷೇತ್ರದ ಜನರು ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವ ಹಿನ್ನೆಲೆ ಆರ್ಭಟದ ಆಚರಣೆಗೆ ಬೇಡ. ಈ ಬಾರಿ ಹುಟ್ಟು ಹಬ್ಬ ಅಚರಿಸುವುದು ಬೇಡವೆಂದು ಸ್ವತಹ ಮಾಜಿ ಸಚಿವ ರಾಜಶೇಖರ ಪಾಟೀಲ ತಿಳಿಸಿದರು. ಆದರೂ ಅಭಿಮಾನಿಗಳು ಕಾರ್ಯಕರ್ತರು ಸಾಮಾಜಿಕ ಸೇವಾ ಕಾರ್ಯಕ್ರಮಗಳ ಮೂಲಕ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಅಭಿಮಾನಿಗಳು ಹಾಗೂ ಪಕ್ಷದ ಕಾರ್ಯಕರ್ತರು ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಿ, ಬಡವರಿಗೆ ಅನ್ನಸಂತರ್ಪಣೆ ನಡೆಸಿದರು.

### ಸಂಗ್ರಹಯೋಗ್ಯ ವಿಶೇಷಾಂಕ

ಇದೊಂದು ವಿಭಿನ್ನ ಪ್ರಯೋಗ. ಚಿಕ್ಕದಾದರೂ ಚೊಕ್ಕವಾಗಿದೆ. ಕೈಯಲ್ಲಿ ಯುಗಾದಿ ವಿಶೇಷಾಂಕ ಹಿಡಿದರೆ ಒಂದನೇ ಪುಟದಿಂದ ಅಂತ್ಯದವರೆಗೆ ಓದಿಸಿಕೊಂಡು ಹೋಗುತ್ತದೆ. ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ರಚಿತವಾದ ಲೇಖನಗಳು ಓದುಗರ ಜ್ಞಾನ ಹೆಚ್ಚಳಕ್ಕೆ ಕಾರಣವಾಗಿವೆ. ಬೀದರ್‌ನಿಂದ ಬೆಂಗಳೂರುವರೆಗೆ ರಾಜ್ಯಮಟ್ಟದ ಪತ್ರಿಕೆಯಾಗಿ ಬೆಳೆದು ಇನ್ನೂ ಅನೇಕ ವಿಶೇಷಾಂಕಗಳನ್ನು ಹೊರತರಲಿ ಎಂದು ರಾಜಶೇಖರ ಪಾಟೀಲರು ಆಶಿಸಿದ್ದಾರೆ.

ಈ ಸಂದರ್ಭದಲ್ಲಿ ಹಲವಾರು ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ರಾಜಶೇಖರ ಪಾಟೀಲರಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ತಿಳಿಸಿದರು. ಸಂಸದ ಸಾಗರ ಖಂಡ್ರೆ, ವಿಧಾನ ಪರಿಷತ್ ಸದಸ್ಯ ಡಾ.ಚಂದ್ರಶೇಖರ ಪಾಟೀಲ ಸೇರಿದಂತೆ ಇತರರಿದ್ದರು.

**ಹುಬ್ಬಳ್ಳಿ, ಗದಗ ಬೈಪಾಸ್ ಮೂಲಕ ರೈಲು ಓಡಿಸಲು ಕೋರಿಕೆ, ಜಯಪುರ ಎಕ್ಸ್‌ಪ್ರೆಸ್ ರೈಲಿಗೆ ಆಗ್ರಹ: ವೈಷ್ಣವ್, ಸೋಮಣ್ಣಗೆ ಎಂ ಬಿ ಪಾಟೀಲ ಪತ್ರ**

# ಪೆಟ್ರೋಲ್, ಡಿಸೇಲ್, ಎಲ್.ಪಿ.ಜಿ ಕೊರತೆಯಿಲ್ಲ




• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ಜಿಲ್ಲೆಯಲ್ಲಿ ಪೆಟ್ರೋಲ್, ಡಿಸೇಲ್ ಮತ್ತು ಎಲ್.ಪಿ.ಜಿ ಸಿಲಿಂಡರ್‌ಗಳ ಯಾವುದೇ ಕೊರತೆ ಇಲ್ಲ. ಎಲ್ಲವು ಸಮರ್ಪಕವಾಗಿ ಪೂರೈಕೆಯಾಗುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುಳ್ಳು ಸುದ್ದಿ ಸಾರ್ವಜನಿಕರು ಕಿವಿಗೊಡಬಾರದು ಎಂದು ಕಲಬುರಗಿ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಜಿಲ್ಲೆಯ ಜನತೆಯಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಜಿಲ್ಲೆಯಾದ್ಯಂತ ಎಲ್ಲಾ ತೈಲ ಕಂಪನಿ ಬಳಿ ಮತ್ತು ಪೆಟ್ರೋಲ್ ಬಂಕ್‌ಗಳಲ್ಲಿ ಸಾಕಷ್ಟು ಪ್ರಮಾಣದ ಇಂಧನ ದಾಸ್ತಾನು ಲಭ್ಯವಿದೆ. ಪೆಟ್ರೋಲ್ ಬಂಕ್‌ಗಳಿಗೆ ನಿರಂತರವಾಗಿ ಇಂಧನ ಪೂರೈಕೆಯಾಗುತ್ತಿದೆ. ಅದೇ ರೀತಿ ಗೃಹ ಬಳಕೆ ಮತ್ತು ವಾಣಿಜ್ಯ ಬಳಕೆಯ ಸಿಲಿಂಡರ್ ಪೂರೈಕೆಯಲ್ಲಿ ಯಾವುದೇ ರೀತಿಯ ವ್ಯತ್ಯಯ ಉಂಟಾಗಿಲ್ಲ. ಜನರು ಆತಂಕಗೊಳ್ಳಬಾರದು. ಇನ್ನು ಸಿಲಿಂಡರ್, ಇಂಧನ ಅಭಾವ ಕುರಿತು ಸುಳ್ಳು ಸುದ್ದಿ ಹರಡುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಎಚ್ಚರಿಕೆ ನೀಡಿದ್ದಾರೆ.

ಜಿಲ್ಲೆಯಲ್ಲಿ ಗೃಹಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳ ಸರಬರಾಜು ಸಮರ್ಪಕವಾಗಿ ನಡೆಯುತ್ತಿದೆ. ಗೃಹ ಬಳಕೆ ಸಿಲಿಂಡರ್‌ಗಳನ್ನು ಪಡೆಯಲು ಈ ಹಿಂದೆ ಪಡೆದ ದಿನಂಕದಿಂದ 25 ದಿನಗಳ ಬಳಿಕವೇ ನಗರ ಪ್ರದೇಶದ ಗ್ರಾಹಕರು ಬುಕ್ಕಿಂಗ್ ಮಾಡಬೇಕಾಗುತ್ತದೆ. ಅದೇ ರೀತಿ ಗ್ರಾಮಾಂತರ ಪ್ರದೇಶದ ಗ್ರಾಹಕರು 45 ದಿನಗಳ ಬಳಿಕವೇ ಬುಕ್ ಮಾಡಲು ಅವಕಾಶ ಕಲ್ಪಿಸಲಾಗಿದೆ. ವಾಸ್ತವದ ವಿಷಯವನ್ನು ಅರಿಯದೆ ಗ್ರಾಹಕರು ಗ್ಯಾಸ್ ಏಜೆನ್ಸಿಗಳಿಗೆ ಮುಗಿಬೀಳುತ್ತಿರುವುದರಿಂದ ಅನಗತ್ಯ ಜನಸಂದಣಿಯಾಗಿ ಗೊಂದಲು ಸೃಷ್ಟಿಯಾಗುತ್ತಿದೆ ಎಂದಿದ್ದಾರೆ.

ಹೆಚ್ಚುವರಿ ದಾಸ್ತಾನು ಬೇಡ: ಗೃಹ ಬಳಕೆಯ ಅಡುಗೆ ಅನಿಲ ಗ್ರಾಹಕರು ಹಾಗೂ ವಾಣಿಜ್ಯ ಬಳಕೆಯ ಗ್ರಾಹಕರಾದ ಹೋಟೇಲ್, ರೆಸ್ಟೋರೆಂಟ್ ಇತ್ಯಾದಿ ಬಳಕೆದಾರರು ಯಾವುದೇ ಆತಂಕಕ್ಕೆ ಒಳಗಾಗಬಾರದು. ಜಿಲ್ಲಾಡಳಿತವು ಎಚ್‌ಪಿಸಿ, ಐಓಸಿ ಮತ್ತು ಬಿಪಿಸಿ ತೈಲ ಕಂಪನಿಗಳ ಅಧಿಕಾರಿಗಳೊಂದಿಗೆ ಸತತ ಸಂಪರ್ಕದಲ್ಲಿದ್ದು, ಪೆಟ್ರೋಲ್, ಡಿಸೇಲ್ ಮತ್ತು ಎಲ್.ಪಿ.ಜಿ ಸಿಲಿಂಡರ್‌ಗಳ ಕೊರತೆ ಉಂಟಾಗದೇ ಬೇಡಿಕೆಗೆ ಅನುಗುಣವಾಗಿ ಅಗತ್ಯವಾದ ದಾಸ್ತಾನನ್ನು ಸಂಗ್ರಹಿಸಿಟ್ಟಿಕೊಳ್ಳಲು ಸೂಕ್ತ ಸೂಚನೆಗಳನ್ನು ನೀಡಲಾಗಿದೆ. ಹೀಗಾಗಿ ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ ಮತ್ತು ಹೆಚ್ಚುವರಿಯಾಗಿ ದಾಸ್ತಾನು ಮಾಡಿಟ್ಟುಕೊಳ್ಳಬಾರದೆಂದು ಡಿ.ಸಿ. ಬಿ.ಫೌಜಿಯಾ ತರನ್ನುಮ್ ಅವರು ಮನವಿ ಮಾಡಿದ್ದಾರೆ.

# ಹಿರಿಯ ಸಿನಿಮಾ ಪತ್ರಕರ್ತ ಜಗದೀಶ್ ಕುಮಾರ್‌ಗೆ ದ್ವಾರಕೀಶ್ ಪ್ರಶಸ್ತಿ



• ಮಲ್ಲಮ್ಮ ನುಡಿ ವಾರ್ತೆ, ಬೆಂಗಳೂರ್

ಕನ್ನಡ ಚಲನಚಿತ್ರ ಪತ್ರಿಕೋದ್ಯಮದಲ್ಲಿ ಕಳೆದ ಮೂರು ದಶಕಗಳಿಂದ ಸಕ್ರಿಯರಾಗಿರುವ ಹಿರಿಯ ಪತ್ರಕರ್ತ ಎಸ್. ಜಗದೀಶ್ ಕುಮಾರ್ ಅವರಿಗೆ ಈ ಸಾಲಿನ ಪ್ರತಿಷ್ಠಿತ 'ದ್ವಾರಕೀಶ್ ಸ್ಮಾರಕ ಪ್ರಶಸ್ತಿ' ಘೋಷಣೆಯಾಗಿದೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು ನೀಡುವ ಈ ಗೌರವವು, ಚಿತ್ರರಂಗದ ಏಳುಬೀಳುಗಳನ್ನು ಹತ್ತಿರದಿಂದ ಕಂಡು, ವರದಿ ಮಾಡಿದ ಜಗದೀಶ್ ಅವರ ಸುದೀರ್ಘ ಅನುಭವಕ್ಕೆ ಸಂದ ಮನ್ನಣೆಯಾಗಿದೆ.

ಬೆಂಗಳೂರಿನ ನಿವಾಸಿಯಾದ ಎಸ್ .ಜಗದೀಶ್ ಕುಮಾರ್ ಅವರು ವಾಣಿಜ್ಯ ಪದವಿ ಪಡೆದ ನಂತರ, ಚಿತ್ರರಂಗದ ಮೇಲಿನ ಆಸಕ್ತಿಯಿಂದ ಕರ್ನಾಟಕ ಫಿಲ್ಮ್ ಟೆಕ್ನಾಲಜಿ ಟ್ರೈನಿಂಗ್ ಸೆಂಟರ್‌ನಲ್ಲಿ (ಏಈಖಿಖಿಅ) ಡಿಪ್ಲೊಮಾ ಪೂರೈಸಿದ್ದರು. ಆರಂಭದಲ್ಲಿ ಖ್ಯಾತ ನಿರ್ದೇಶಕ ಬಿ. ಸುರೇಶ್ ಅವರ ಅಡಿಯಲ್ಲಿ 'ಸಾಧನೆ'ಯಂತಹ ಜನಪ್ರಿಯ ಧಾರಾವಾಹಿಗಳಿಗೆ ಹಾಗೂ ಹಿರಿಯ ನಿರ್ದೇಶಕ ಎಸ್.ವಿ. ರಾಜೇಂದ್ರ ಸಿಂಗ್ ಬಾಬು ಅವರ 'ಕುರಿಗಳು ಸಾರ್ ಕುರಿಗಳು' ಚಿತ್ರಕ್ಕೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದರು.

ಈ ಟಿವಿ ಕನ್ನಡ, ಉದಯ ಟಿವಿ ಮತ್ತು ಕಸ್ತೂರಿ ವಾಹಿನಿಗಳಲ್ಲಿ ಚಿತ್ರರಂಗಕ್ಕೆ ಸಂಬಂಧಿಸಿದ ನೂರಾರು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ದೇಶಿಸಿದ ಹೆಗ್ಗಳಿಕೆ ಇವರದು. ವಿಶೇಷವಾಗಿ 'ಡಿಮ್ಯಾಂಡಪ್ಪೋ ಡಿಮ್ಯಾಂಡ್', 'ಹೃದಯದಿಂದ' ತಾರೆಗಳ ತೋಟ , ಹೊಸ ಪಿಚ್ಚರ್, ಟಾಪ್ 10 , ಕಾಮಿಡಿ ಟೈಮ್ , ನಾಡಹಬ್ಬ , ಗೀತಾ ಸಂಭ್ರಮ , ಚಿತ್ರವಾರ್ತೆ, ನೀವೆಲ್ಲೋ.. ನಾವಲ್ಲಿ.. , ಸಕತ್ ಸಿನಿಮಾ, ಸನ್ ಫೀಸ್ಟ್ ಉದಯ ಅವಾರ್ಡ್, ಕಸ್ತೂರಿ ಸಿರಿಗಂಧ ಫಿಲಂ ಅವಾರ್ಡ್ , ಸಪ್ತಸ್ವರ , ಡ್ರೀಮ್ ಗರ್ಲ್ಸ್ ಸೇರಿದಂತೆ ಹಲವಾರು ರಿಯಾಲಿಟಿ ಶೋ , ಲೈವ್ ಕಾರ್ಯಕ್ರಮಗಳನ್ನು ನಿರ್ವಹಣೆಯ ಮೂಲಕ

ಬೃಹತ್ ಕಾರ್ಯಕ್ರಮಗಳನ್ನು ಸಂಘಟಿಸಿದ ಅನುಭವ ಇವರಿಗಿದೆ. ದೃಶ್ಯ ಮಾಧ್ಯಮಕ್ಕೆ ಮಾತ್ರ ಸೀಮಿತವಾಗದೆ, ಮುದ್ರಣ ಮಾಧ್ಯಮದಲ್ಲಿಯೂ ತಮ್ಮ ಬರಹಗಳ ಮೂಲಕ ಗುರುತಿಸಿಕೊಂಡಿರುವ ಎಸ್. ಜಗದೀಶ್ ಈ ಸಂಜೆ ಪತ್ರಿಕೆಯ ವರದಿಗಾರರಾಗಿ ಸಾಕಷ್ಟು ವರ್ಷ ಕಾರ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ಸಿನಿ ಸುದ್ದಿ ವೆಬ್ ಸಂಸ್ಥೆಯ ಸಂಪಾದಕರಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

# ಮಹಾಲಕ್ಷ್ಮೀ ದೇವಸ್ಥಾನದ ರಜತ ಮಹೋತ್ಸವದ

• ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ

ಪಟ್ಟಣದ ಮಹಾಲಕ್ಷ್ಮೀ ದೇವಸ್ಥಾನದ 25ನೇ ವರ್ಷದ ರಜತ ಮಹೋತ್ಸವದ ಪ್ರಯುಕ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು 2/04/2026ರಿಂದ 3/04/2026ರ ವರೆಗೆ ಜರುಗಲಿದೆ.

2ರಗುರುವಾರ ಬೆಳಿಗ್ಗೆ ದೇವಿಗೆ ಪಂಚಾಮೃತ ಅಭಿಷೇಕ ಅಲಂಕಾರ ಹೋಮ ,ವೈದಿಕರಿಂದ ಜರಗಲಿದ್ದು ಸಾಯಾಂಕಾಲ ಭಜನೆ, ಸಂಸ್ಕೃತಿಕ ಕಾರ್ಯಕ್ರಮ, 3ರ ಶುಕ್ರವಾರ ಸುಮಂಗಲೆಯರಿಂದ ಪೂರ್ಣ ಕುಂಭ,ವಿವಿಧ ವಾದ್ಯಮೇಳಗಳೊಂದಿಗೆ ಭವ್ಯ ರಥಯಾತ್ರೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜರುಗಲಿದ್ದು ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಮಹಾಸ್ವಾಮಿಗಳು ಹಾಗೂ ಷ.ಬ್ರ ರೇವಣಸಿದ್ಧ ಶಿವಾಚಾರ್ಯ ಮಹಾಸ್ವಾಮಿಜಿಗಳು ವಹಿಸಲಿದ್ದು ಧರ್ಮ ಸಭೆಕೂಡ ಜರುಗಲಿದೆ, ಮುಖ್ಯ ಅತಿಥಿಗಳಾಗಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ,ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್,ವಿಧಾನ ಪರಿಷತ್ ಮಾಜಿ ಸದಸ್ಯ ನಾಗರಾಜ ಛಬ್ಬಿ,ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದು ಮಹಾ ಪ್ರಸಾದ ವ್ಯವಸ್ಥೆ ಇರುತ್ತದೆಂದು ಶ್ರೀ ಮಹಾಲಕ್ಷ್ಮೀ ದೇವಸ್ಥಾನದ ರಜತ ಮಹೋತ್ಸವದ ಸಮಿತಿಯರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯಾರ್ಥಿಗಳು ಆದರ್ಶಗಳನ್ನು ಅಳವಡಿಸಿಕೊಳ್ಳಿ: ಮುತ್ತಣ್ಣ



• ಮಲ್ಲಮ್ಮ ನುಡಿ ವಾರ್ತೆ, ಕೊಪ್ಪಳ

ವಿದ್ಯಾರ್ಥಿಗಳು ಒಳ್ಳೆಯ ಗುಣಗಳು ಹಾಗೂ ಗುರುಗಳಲ್ಲಿನ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕೊಪ್ಪಳ ಪೊಲೀಸ್ ಉಪಾಧೀಕ್ಷಕ ಮುತ್ತಣ್ಣ ಸವರಗೋಳ ಕರೆ ನೀಡಿದರು.

ತಾಲೂಕಿನ ಇರಕಲ್ಲಗಡಾ – ಯಲಮಗೇರಿಯ ಈಶ್ವರ ಆಂಗ್ಲ ಮಾಧ್ಯಮ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಗ್ರಾಮೀಣ ಪ್ರದೇಶದಲ್ಲಿ ಖಾಸಗಿ ಶಾಲೆಯನ್ನು ಕಟ್ಟಿ ಬೆಳೆಸುವುದು ಅಷ್ಟು ಸುಲ'ದ ಮಾತಲ್ಲ. ಆದರೆ ಈಶ್ವರ ಆಂಗ್ಲ ಮಾ'ಮ ಶಾಲೆಯನ್ನು 18 ವರ್ಷಗಳ ಹಿಂದೆ ತಟ್ಟೆಯಲ್ಲಿ ಆರಂಭಿಸಿ, ವಿದ್ಯಾರ್ಥಿಗಳಿಗೆ ಉತ್ತಮ ಹಾಗೂ ಗುಣಮಟ್ಟದ ಶಿಕ್ಷಣ ನೀಡಿ, ಸ್ವಂತ ಜಾಗದಲ್ಲಿ ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡುವ ಮೂಲಕ ಪ್ರತಿಷ್ಠಿತ ಸಂಸ್ಥೆಯಾಗಿ ಬೆಳೆಸಿದ ಕೀರ್ತಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ನಾಗರಾಜ ಗುಡಿ ಅವರಿಗೆ ಸಲ್ಲುತ್ತದೆ. ಅತ್ಯಂತ ಕಡಿಮೆ ಶುಲ್ಕ ಪಡೆದು ಉತ್ತಮ ಶಿಕ್ಷಣ ನೀಡುತ್ತಿದ್ದಾರೆ. ಪಾಲಕರೊಂದಿಗೆ ಪ್ರೀತಿ, ವಿಶ್ವಾಸದಿಂದ ನಡೆದುಕೊಂಡು ಅವರ ನಂಬಿಕೆ ಗಳಿಸಿದ್ದಾರೆ. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಜೊತೆಗೆ ಶಾಲೆಯನ್ನು ಹಸಿರೀಕರಣ ಮಾಡಿ ಉತ್ತಮ ಪರಿಸರ ನಿರ್ಮಾಣ ಮಾಡಿದ್ದು ಹೆಮ್ಮೆಯ ಸಂಗತಿ. ಇಂಥಹ ಉತ್ತಮ ಶಾಲೆ ಇಲ್ಲಿ ಕಟ್ಟಿರುವುದು ಈಭಾಗದ ಜನರ ಹಾಗೂ ವಿದ್ಯಾರ್ಥಿಗಳ ಸುದೈವವಾಗಿದೆ ಎಂದರು.

ಕೊಪ್ಪಳ ಜಿಲ್ಲಾ ವಕೀಲರ ಸಂಘದ ಜಿಲ್ಲಾ ಅಧ್ಯಕ್ಷ ಎ.ವಿ. ಕಣವಿ ಮಾತನಾಡಿ,

ಶಿಕ್ಷಣಕ್ಕೆ ಮನುಷ್ಯನ ಬದುಕನ್ನು ಮಾತ್ರವಲ್ಲ ಎಲ್ಲಾ ರಂಗದಲ್ಲೂ ಮಹತ್ತರ ಬದಲಾವಣೆಯನ್ನು ತರುವ ಶಕ್ತಿ ಇದೆ. ಶಕ್ಷಣ ಅತ್ಯಂತ ಶಕ್ತಿಶಾಲಿ ಆಯು'. ಅಂತಹ ಮಹತ್ತರವಾದ ಶಿಕ್ಷಣವನ್ನು ಈಶ್ವರ ಆಂಗ್ಲ ಮಾಧ್ಯಮ ಶಾಲೆ ನೀಡುತ್ತಿರುವುದು ಸಂತೋಷದ ಸಂಗತಿ. ಗ್ರಾಮೀಣ ಪ್ರದೇಶದ ಬಡವರ ಮಕ್ಕಳಿಗೂ ಕೂಡಾ ಇಂಗ್ಲೀಷ್ ಜ್ಞಾನ ಬರಬೇಕು, ಅವರು ಕೂಡಾ ಗುಣಮಟ್ಟದ ಶಿಕ್ಷಣ ಪಡೆದು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂಬ ಉದ್ದೇಶದಿಂದ ಕಡಿಮೆ ಶುಲ್ಕ ಪಡೆದು ಶಿಕ್ಷಣ ಜೊತೆಗೆ ಸರ್ವ ರೀತಿಯ ಜ್ಞಾನಾರ್ಜನೆ ನೀಡುತ್ತಿರುವುದು ಈ ಶಾಲೆಯ ಹಿರಿಮೆಯಾಗಿದೆ. ಇಂತಹ ಸಂಸ್ಥೆಯಿಂದ ಈ ಬಾಗದ ಮಕ್ಕಳ 'ವಿಷ್ಯ ಉಜ್ವಲವಾಗುತ್ತಿದೆ. ಹಾಗಾಗಿ ಪ್ರತಿಯೊಬ್ಬರೂ ಶಾಲೆಯ ಬೆಳವಣಿಗೆಗೆ ಸಹಕಾರ ನೀಡಬೇಕು ಎಂದು ಅವರು ಮನವಿ ಮಾಡಿದರು.

ಈಸಂದರ್ಭದಲ್ಲಿ ಮುಖಂಡರಾದ ಸಿದ್ದಪ್ಪ ನೀರಲೂಟಿವೀರಬಸಪ್ಪ ಪಟ್ಟಣಶೆಟ್ಟಿ, ಪತ್ರಕರ್ತ ಜಗದೀಶ ಅಂಗಡಿ, ಕುಬೇರ ಮಜ್ಜಿಗಿ, ವೀರಣ್ಣ ಕಂಬಳಿ, ಯಲ್ಲಾಲಿಂಗ ಕತ್ತಿ, ಶಿವನಗೌಡ ಪೊಲೀಸ್‌ಪಾಟೀಲ್ ಸೇರಿದಂತೆ ಇತರರು ಇದ್ದರು.

# ಅವಿರೋಧ ಆಯ್ಕೆ: ಮರೀಲಿಂಗಪ್ಪ ನಾಟೆಕರ್ ನೂತನ ಅಧ್ಯಕ್ಷರು




• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ತೆರವಾದ ಸ್ಥಾನಕ್ಕೆ ಅವಿರೋಧವಾಗಿ ಮರೀಲಿಂಗಪ್ಪ ನಾಟೆಕರ್ ಅವರು ಪಟ್ಟಣ ಪಂಚಾಯತ್ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ಬಸವರಾಜ ಎಂ ಆದೇಶ ಪ್ರತಿಯನ್ನು ನೀಡುವ ಮೂಲಕ ಘೋಷಿಸಿದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತ್ ಸದಸ್ಯರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಮುಷ್ಠಗಟ್ಟೆ: ತ್ರಿವಿಧ ದಾಸೋಹಿ ಶ್ರೀ ಶಿವಕುಮಾರ ಸ್ವಾಮಿ ಜಯಂತಿ



• ಮಲ್ಲಮ್ಮ ನುಡಿವಾರ್ತೆ, ಕುರುಗೋಡು

ತ್ರಿವಿಧ ದಾಸೋಹಿ, ನಡೆದಾಡುವ ದೇವರೆಂದೇ ನಾಡಿನಾದ್ಯಂತ ಪ್ರಖ್ಯಾತರಾದ ತುಮಕೂರು ಸಿದ್ದಗಂಗಾ ಮಠದ ಲಿಂಗೈಕ್ಯ

ಡಾ.ಶಿವಕುಮಾರ ಸ್ವಾಮೀಜಿ ಅವರ 119ನೇ ಜಯಂತಿಯನ್ನು ಇಲ್ಲಿಗೆ ಸಮೀಪದ ಮುಷ್ಠಗಟ್ಟೆ ಗ್ರಾಮದಲ್ಲಿ ಸಡಗರ ಸಂಭ್ರಮದಿಂದ ಬುಧವಾರ ಆಚರಿಸಲಾಯಿತು.

ಪೂಜ್ಯರ ಜನ್ಮದಿನಾಚರಣೆ ಅಂಗವಾಗಿ ಮೆರವಣಿಗೆ ಅನ್ನಸಂತರ್ಪಣೆ ಸಂಪನ್ನ. ಶ್ರೀ ಶಿವಕುಮಾರ ಸ್ವಾಮಿಗಳು ಅನ್ನದಾಸೋಹ ಜ್ಞಾನ ದಾಸೋಹದ ಮೂಲಕ

ಲಕ್ಷಾಂತರ ಮಕ್ಕಳ ಪಾಲಿಗೆ ಆಶಾಕಿರಣವಾಗಿ ನಡೆದಾಡುವ ದೇವರು ಎಂದೇ ಹೆಸರಾದವರು ಅವರ ಜಯಂತಿ ಹಿನ್ನೆಲೆಯಲ್ಲಿ ಬೆಳಿಗ್ಗೆಯಿಂದ ಗ್ರಾಮದ ವೀರಶೈವ ಸಮಾಜದ ಬಾಂಧವರು ಈಶ್ವರ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಶ್ರೀಗಳ

ಭಾವಚಿತ್ರಕ್ಕೆ ಹೂವಿನ ಅಲಂಕಾರ ಸಮೇತ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯನ್ನು ಸಾಂಪ್ರದಾಯಿಕ ಭಜನೆ ವಾದ್ಯದೊಂದಿಗೆ ನಡೆಸಲಾಯಿತು. ಈ ವೇಳೆ ಗ್ರಾಮದ

ವೀರಶೈವ ಸಮಾಜದವರು ಹಾಗೂ ಮುಖಂಡರು ಗ್ರಾಮಸ್ಥರು ಇದ್ದರು.

# ಶ್ರೀಭದ್ರೇಶ್ವರ ಜಾತ್ರಾಮಹೋತ್ಸವ: 151 ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ



• ಮಲ್ಲಮ್ಮ ನುಡಿ ವಾರ್ತೆಬೀದರ್

ತಾಲೂಕಿನ ಬಾವಗಿ ಶ್ರೀಭದ್ರೇಶ್ವರ ದೇವಸ್ಥಾನದಲ್ಲಿ ಜಾತ್ರಾಮಹೋತ್ಸವ ನಿಮಿತ್ಯ ನಡೆದ ಶ್ರೀ ಗುಡ್ಡಾಪುರ ದಾನಮ್ಮದೇವಿ ಪುರಾಣ ಪ್ರವಚನ ಹಿನ್ನೆಲೆಯಲ್ಲಿ ಮಂಗಳವಾರ ಸುಮಾರು 151 ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಿತು.ಭದ್ರೇಶ್ವರ ಮಠದ ಮಾತಾಶ್ರೀ ರೇಣುಕಾಸ್ವಾಮಿ ಉಡಿ ತುಂಬುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ,ಉಡಿ ತುಂಬುವ ಪದ್ಧತಿ ಭಾರತೀಯ ಸಂಸ್ಕೃತಿಯ ಪ್ರತೀಕ ಇಂತಹ ಸಂಪ್ರದಾಯವನ್ನು ಇಂದಿಗೂ ಪಾಲಿಸಿಕೊಂಡು ಬಂದಿರುವುದು ಹೆಮ್ಮೆಯ ಸಂಗತಿ. ತಾಯಂದಿರು ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕು.ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ನೈತಿಕತೆ ಗೂಡಿಸಿಕೊಂಡರೆ ಅತ್ಯುತ್ತಮ ಸಮಾಜ ನಿರ್ಮಾಣ ಸಾಧ್ಯ.ಉತ್ತಮ ಸಮಾಜ ನಿರ್ಮಾಣವಾಗಬೇಕಾದರೆ ಉತ್ತಮ ನಾಗರಿಕರ ಅಗತ್ಯವಿದೆ. ಅದರಂತೆ ಮಗು ಬೆಳೆದು ಉತ್ತಮ ನಾಗರಿಕನಾಗಬೇಕಾದರೆ ತಾಯಿಯ ಪಾತ್ರ ಮಹತ್ವವಿದೆ ಎಂದರು.ಪ್ರವಚನಗಾರ ಶಾಸ್ತ್ರಿಗಳು ಬೆಟದಯ್ಯ ಸಂಗಿತ ರೇವಣಸಿದಯ್ಯ ಹಿರೇಮಠ ತಬಲ ವಾದಕರು ದಯಾನಂದ ಹಿರೆಮಠ ಭದ್ರೇಶ್ವರ ಮಠದಶ್ರೀ ಶಿವುಕುಮಾರ ಸ್ವಾಮೀಜಿ ಗುಂಡಯ್ಯ ಸ್ವಾಮಿ ಕಂಠಯ್ಯ ಸ್ವಾಮಿ ಜಾತ್ರಾ ಉತ್ಸವ ಸಮಿತಿ ಗ್ರಾಮಸ್ಥರು ಇದ್ದರು ನಿರ್ಮಲ ಶಿವಲೀಲಾ ಸ್ವಾಮಿ ಅಂಬಿಕಾ ಸ್ವಾಮಿ ಅಂಜಲಿ ಜ್ಯೋತಿ ಹಜ್ಜರಗಿ ಜಗದೇವಿ ಶಿಲ್ಪ ಸರಸ್ವತಿ ಕವಿತಾ ಇನ್ನಿತರರು ಇದ್ದರು,

# ನಮ್ಮೂರ ಶಾಲೆ ಉಳಿಸಲು ರಾಜ್ಯಮಟ್ಟದ ಸಮಾವೇಶ




• ಮಲ್ಲಮ್ಮ ನುಡಿ ವಾರ್ತೆ, ಕೊಪ್ಪಳ

ಸರ್ಕಾರಿ ಶಾಲೆಗಳನ್ನು ಉಳಿಸಲು ಏಪ್ರಿಲ್ 10 ಬೆಂಗಳೂರಿನಲ್ಲಿ ನಡೆಯುತ್ತಿರುವ ರಾಜಮಟ್ಟದ ಸಮಾವೇಶದ ಪೋಸ್ಟರ್ ಬಿಡುಗಡೆ ಂಋಆಖಔ ವಿದ್ಯಾರ್ಥಿ ಸಂಘಟನೆ ನೇತೃತ್ವದಲ್ಲಿ ಜಿಲ್ಲೆಯ ಸರಕಾರಿ ಶಾಲೆಗಳನ್ನು ಉಳಿಸುವ ಸ್ವಯಂ ಸೇವಕರು ಮತ್ತು ಪದವಿ ವಿದ್ಯಾರ್ಥಿಗಳ ಮದ್ಯೇ ಪ್ರಚಾರ ಮತ್ತು ಸಭೆ ನಡೆಸಿ ಸರ್ಕಾರಿ ಶಾಲೆಗಳನ್ನು ಉಳಿಸಲು ಏಪ್ರಿಲ್ 10 ಬೆಂಗಳೂರಿನಲ್ಲಿ ನಡೆಯುತ್ತಿರುವ ರಾಜಮಟ್ಟದ ಸಮಾವೇಶದ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ವಿದ್ಯಾರ್ಥಿಗಳ ಸಭೆಯನ್ನು ಉದ್ದೇಶಿಸಿ ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯೆ ಸಿಂಧು ಕೌದಿ ಅವರು ಮಾತನಾಡಿ, ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಹೆಸರಿನಲ್ಲಿ ರಾಜ್ಯದಲ್ಲಿ 40,000 ಸರ್ಕಾರಿ ಶಾಲೆ ಹಾಗೂ ಕೊಪ್ಪಳ ಜಿಲ್ಲೆಯ 500 ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚಲು ರಾಜ್ಯ ಸರ್ಕಾರ ಮುಂದಾಗಿದ್ದು, ಈ ನೀತಿಯ ವಿರುದ್ಧ ಎಐಡಿಎಸ್‌ಓ ನೇತೃತ್ವದಲ್ಲಿ ಈಗಾಗಲೇ ಜಿಲ್ಲೆಯ ಜನತೆ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಗಳನ್ನು ರಚಿಸಿಕೊಂಡು ಕಳೆದ ನಾಲ್ಕು ತಿಂಗಳಿನಿಂದ ಎಐಡಿಎಸ್‌ಓ

ವಿದ್ಯಾರ್ಥಿ ಸಂಘಟನೆ ನೇತೃತ್ವದಲ್ಲಿ ಹೋರಾಟ ನಡೆಸುತ್ತಿದ್ದಾರೆ. ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಕೈ ಬಿಟ್ಟು, ನಮ್ಮೂರ ಶಾಲೆ ಉಳಿಸಿ ಎಂದು ಆಗ್ರಹಿಸಿ ಮಹಮ್ಮದ್ ನಗರ, ರಾಜಾರಾಮ್ ಪೇಟೆ, ಹಿರೇಕಾಸನಕಂಡಿ, ಮಳ್ಳಿಕೇರಿ, ಕುಣಿಕೇರಿ, ಗಡ್ಡಿ, ಬಂಡ್ರಾಳ್ ಸೇರಿದಂತೆ ಜಿಲ್ಲೆಯ ಹಲವು ಅನೇಕ ಹಳ್ಳಿಗಳಲ್ಲಿ ಹೋರಾಟ ನಡೆಸಿ ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲೂ ವಿದ್ಯಾರ್ಥಿಗಳ ಪ್ರತಿಭಟನೆ ನಡೆದಿವೆ. ಈ ಮುಂದುವರಿಕೆಯಾಗಿ ಸಮಾವೇಶಗಳು ಹೋರಾಟದ ಕೆಪಿಎಸ್ ಯೋಜನೆ ಕೈ ಬಿಟ್ಟು ನಮ್ಮೂರ ಶಾಲೆ ಉಳಿಸಿ ಎಂಬ ಧ್ವನಿಯನ್ನು ರಾಜಧಾನಿಯಲ್ಲಿ ಮೊಳಗಿಸಲು 10 ಏಪ್ರಿಲ್ 2026ರಂದು ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ರಾಜ್ಯಮಟ್ಟದ ಸಮಾವೇಶವನ್ನು ಆಯೋಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ಕೊಪ್ಪಳ ಜಿಲ್ಲೆಯ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಈ ಸಮಾವೇಶದಲ್ಲಿ ಭಾಗವಹಿಸಬೇಕೆಂದು ಕರೆ ನೀಡಿದರು.ಜಿಲ್ಲೆಯ ವಿದ್ಯಾರ್ಥಿಗಳ ಪರವಾಗಿ ಕೊಪ್ಪಳದ ಪದವಿ ಕಾಲೇಜಿನ ವಿದ್ಯಾರ್ಥಿಗಳು ಜಿಲ್ಲೆಯ ಶಾಲೆಗಳನ್ನು ಉಳಿಸಲು ನಾವೆಲ್ಲರೂ ಮುಂದಾಗೋಣ,ನಮ್ಮೂರ ಶಾಲೆ ಉಳಿಸಲು ರಾಜ್ಯಮಟ್ಟದ ಸಮಾವೇಶಕ್ಕೆ ಮುನ್ನಡೆಯಿರಿ ಎಂದರು.

ಈಸಂದರ್ಭದಲ್ಲಿ ಎಐಡಿಎಸ್‌ಓ ಸದಸ್ಯರಾದ ಭೂಮಿಕ, ರೇಣುಕ, ರಶ್ಮಿ, ಅಶ್ವಿನಿ, ಅಕ್ಷಿತ, ಅಕ್ಕ ಮಹಾದೇವಿ, ವಿದ್ಯಾರ್ಥಿಗಳಾದ ಅಲ್ಫಿಯಾ, ಶಶಿಕಲಾ,ನಿಂಗಮ್ಮ ಪವಿತ್ರ, ಕಾವ್ಯ, ವಿದ್ಯಾಶ್ರೀ, ಗಾಯಿತ್ರಿ, ಚೈತ್ರ, ಪ್ರೇಮ, ಮಂಜುಳಾ,ಉಪಸ್ಥಿತರಿದ್ದರು.

# ಮಹನೀಯರ ಜಯಂತಿ ಅರ್ಥಪೂರ್ಣವಾಗಿ ಆಚರಿಸಿ: ಬಸವರಾಜ



• ಮಲ್ಲಮ್ಮ ನುಡಿವಾರ್ತೆ ಕುಕನೂರು

ಪಟ್ಟಣದ ಐಬಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಡಾ. ಬಾಬು ಜಗಜೀವನ್ ರಾಮ್ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ ಸಂಬಂಧ ಪೂರ್ವಭಾವಿ ಸಭೆ ತಹಶೀಲ್ದಾರ್ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆಯಿತು.


ಸಭೆಯಲ್ಲಿ ತಹಶೀಲ್ದಾರ್ ಬಸವರಾಜ್ ಬೆಣ್ಣಿ ಮಾತನಾಡಿ, ಮಹನೀಯರ ಆದರ್ಶಗಳು ಸಮಾಜಕ್ಕೆ ಮಾರ್ಗದರ್ಶಕವಾಗಿದ್ದು, ಅವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸುವುದು ಹಾಗೂ ಕುಟುಂಬದಲ್ಲಿರುವ ಪ್ರತಿಯೊಬ್ಬರ ಸದಸ್ಯರು ಬಂದು ಆಚರಣೆಯಲ್ಲಿ ಭಾಗವಹಿಸುವುದು, ಆಶಾ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕರು, ಹಾಗೂ ಎಲ್ಲ ಇಲಾಖೆ ಅಧಿಕಾರಿಗಳು ನೌಕರರು ಎಲ್ಲರೂ ಭಾಗವಹಿಸುವುದರ ಮುಖಾಂತರ ಜಯಂತಿಯನ್ನು ಯಶಸ್ವಿಗೊಳಿಸುವುದು ಎಲ್ಲರ ಕರ್ತವ್ಯವಾಗಿದೆ ಎಂದು ಹೇಳಿದರು.

ಶಿಸ್ತಿನಿಂದ ಹಾಗೂ ಸಾರ್ವಜನಿಕರ ಭಾಗವಹಿಸುವಿಕೆಯಿಂದ ಯಶಸ್ವಿಯಾಗಿ ನಡೆಸಲು ಎಲ್ಲಾ ಇಲಾಖೆಗಳು ಸಮನ್ವಯದಿಂದ ಕೆಲಸ ಮಾಡಬೇಕು ಎಂದು ಸೂಚಿಸಿದರು.

ಈ ಕಾರ್ಯಕ್ರಮವು ಬಾಬು ಜಗಜೀವನ್ ರಾವ್ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರದೊಂದಿಗೆ ಅಂಬೇಡ್ಕರ್ ವೃತ್ತದಿಂದ ಮೆರವಣಿಗೆ ಪ್ರಾರಂಭಗೊಂಡು ಕೋಳಿಪೇಟೆ ಪ್ರವೇಶ ಮಾಡಿ ತೇರಿನಗಡ್ಡಿ ಮುಖಾಂತರ ಶಿರೂರು ವೀರಭದ್ರಪ್ಪ ಸರ್ಕಲ್ ಗೆ ಬಂದು ಗವಿಸಿದ್ದೇಶ್ವರ ಹೈಸ್ಕೂಲ್ ನಲ್ಲಿ ವೇದಿಕೆ ಕಾರ್ಯಕ್ರಮ ಇರುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಯಮನೂರಪ್ಪ ಗೋರ್ಲೆಕೊಪ್ಪ, ರಾಮಣ್ಣ ಬಂಕದ್ಮನಿ, ನಾಗಪ್ಪ ಕಲ್ಮನಿ, ಮುದುಕಪ್ಪ ಕಲ್ಮನಿ, ಸಂಜೀವ್ ಇಟಗಿ, ಮಹೇಶ್ ದೊಡ್ಡಮನಿ, ವಿವಿಧ ಗ್ರಾಮಗಳ ದಲಿತ ಸಂಘಟನೆ ಮುಖಂಡರು ಹಾಗೂ ತಾಲೂಕ ಮಟ್ಟದ ಎಲ್ಲ ಇಲಾಖೆಯ ಅಧಿಕಾರಿಗಳು ಇದ್ದರು.

# ಕಾರಂಜಾ ಸಂತ್ರಸ್ತರ ಬೇಡಿಕೆ ಕುರಿತು ಇಂದು ಮಹತ್ವದ ಸಭೆ



• ಮಲ್ಲಮ್ಮ ನುಡಿ ವಾರ್ತೆ ಬೀದರ್

ಕಾರಂಜಾ ಯೋಜನೆಗಾಗಿ ಭೂಮಿ ನೀಡಿದ ರೈತ ಸಂತ್ರಸ್ತರ ನ್ಯಾಯಯುತ ಬೇಡಿಕೆಗಳ ಕುರಿತು ಚರ್ಚಿಸಲು ಇಂದು (ಏಪ್ರಿಲ್ 2) ಮಧ್ಯಾಹ್ನ 12 ಗಂಟೆಗೆ ಬೀದರ್ ಜಿಲ್ಲಾಧಿಕಾರಿ ಕಚೇರಿ ಎದುರಿನ ಅತಿಥಿ ಗೃಹ (ಐ.ಬಿ) ಆವರಣದಲ್ಲಿ ಮಹತ್ವದ ಸಭೆ ಆಯೋಜಿಸಲಾಗಿದೆ.

ಕಲ್ಯಾಣ ಕರ್ನಾಟಕ ಪ್ರದೇಶದ ಹಿರಿಯ ಹೋರಾಟಗಾರರಾದ ಡಾ. ಲಕ್ಷ್ಮಣ ದಸ್ತಿ ಅವರ ನೇತೃತ್ವದಲ್ಲಿ ನಡೆಯಲಿರುವ ಈ ಸಭೆಯಲ್ಲಿ ಕಾರಂಜಾ ಸಂತ್ರಸ್ತರ 28 ಹಳ್ಳಿಗಳ ಪ್ರಮುಖರು ಭಾಗವಹಿಸಲಿದ್ದಾರೆ.

ದೀರ್ಘಕಾಲದಿಂದ ಹೋರಾಟ ನಡೆಸುತ್ತಿರುವ ಸಂತ್ರಸ್ತರ ಸಮಸ್ಯೆಗಳು ಮತ್ತು ನ್ಯಾಯತವಾದ ಬೇಡಿಕೆಗಳ ಬಗ್ಗೆ ಸಮಗ್ರ ಚರ್ಚೆ ನಡೆಸಿ, ಮುಂದಿನ ಹೋರಾಟದ ಕಾರ್ಯಯೋಜನೆ ರೂಪಿಸುವ ನಿರೀಕ್ಷೆಯಿದೆ.

ಕಾರಂಜಾ ಯೋಜನೆಗೆ ಭೂಮಿ ನೀಡಿದ ಎಲ್ಲಾ ರೈತ ಸಂತ್ರಸ್ತರು ಈ ಸಭೆಗೆ ತಪ್ಪದೇ ಹಾಜರಾಗಬೇಕು ಎಂದು ಕಾರಂಜಾ ಮುಳುಗಡೆ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಚಂದ್ರಶೇಖರ ಪಾಟೀಲ್ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ. ಇದೇ ವೇಳೆ, ಜಿಲ್ಲೆಯ ರೈತ ಮುಖಂಡರು, ಸಂಘಟನಾ ಮುಖ್ಯಸ್ಥರು ಹಾಗೂ ಸಂತ್ರಸ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸುವಂತೆ ಸಮಿತಿ ಕೋರಿದೆ.

# ಭಕ್ತರ ಬಾಳಿಗೆ ಬೆಳಕಾದ ಪುಣ್ಯ ಪುರುಷ ಬಸವಲಿಂಗ ಶರಣರು



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ನಮ್ಮ ಕನ್ನಡ ನಾಡು ಅನೇಕ ಸಾಧುಸಂತರಿಗೆ ಜನ್ಮ ನೀಡಿದ ಪಾವನ ಧರೆ ತಮ್ಮ ವೈಯಕ್ತಿಕ ಬದುಕನ್ನು ತ್ಯಜಿಸಿ ಲೋಕಕಲ್ಯಾಣಕ್ಕಾಗಿ ತಮ್ಮ ಜೀವನವನ್ನೆ ಸವೆಸಿದ ಆಧ್ಯಾತ್ಮಿಕ ಲೋಕದಲ್ಲಿ ಅದ್ವಿತೀಯ ಸಾಧನೆ ಮೆರೆದು ಶಿವಯೋಗಿಗಳೆಂದೇ ಗುರುತಿಸಿ ಕೊಂಡ ಅನೇಕ ದಾರ್ಶನಿಕರು ನಮ್ಮ ನಡುವೆ ಅನೇಕರು ಆಗಿ ಹೋಗಿದ್ದಾರೆ ಅಂಥವರ ಸಾಲಿನಲ್ಲಿ ಬರುವ ಯಾದಗಿರಿ ಜಿಲ್ಲೆಯ ಕೂಡಲೂರ ಗ್ರಾಮದ ಕಲಿಯುಗದ ಕಡೆ ಶರಣ ಎಂದೇ ಪ್ರಸಿದ್ಧಿ ಪಡೆದ ಶ್ರೀ ಬಸವಲಿಂಗೇಶ್ವರ ಶರಣರು ತಮ್ಮ ಅನೇಕ ತತ್ವಪದಗಳ ಮೂಲಕ ಸಮಾಜದ ಅಂಕು ಡೊಂಕುಗಳನ್ನು ತಿದ್ದಿ ಅನೇಕ ಪವಾಡಗಳನ್ನು ಮಾಡಿ ಭಕ್ತರ ಮನದ ಕತ್ತಲೆಗಳನ್ನು ಕಳೆದು ಸುಜ್ಞಾನದ ಬೆಳಕನ್ನು ಮೂಡಿಸಿ ಭಕ್ತರ ಭವರೋಗವನ್ನು ಕಳೆಯುತ್ತಿರುವ ಕೂಡಲೂರು ಗ್ರಾಮದ ಆರಾಧ್ಯ ದೈವ, ಬೇಡಿ ಬಂದ ಭಕ್ತರಿಗೆ ಬೇಡಿದನು ಕರುಣಿಸುವ ದೇವನಗಿ ಸಾಕ್ಷಾತ್ ಶಿವಲಿಂಗವೇ ತಾನಾಗಿ ಭಕ್ತರಿಗೆ ದರುಶನ ನೀಡುತ್ತಿರುವ ಕಲಿಯುಗದ ಕಾಮಧೇನು ನಮ್ಮ ಆರಾಧ್ಯದೈವನಾದ ಶ್ರೀ ಬಸವಲಿಂಗ ಶರಣರ ಜಾತ್ರಾ ಮಹೋತ್ಸವದ ಸಂಭ್ರಮ ಹಿಂದೂ ಸಂಪ್ರದಾಯದಲ್ಲಿ ವಿಶೇಷ ಧಾರ್ಮಿಕ ಮಹತ್ವವನ್ನು ಹೊದಿದ ಪಾಲ್ಗುಣ ಮಾಸದ ದವನದ ಹುಣ್ಣಿಮೆಯ ವಿಶೇಷ ದಿನದಲ್ಲಿ ಮಹಾರಥೋತ್ಸವ ನಡೆಯಲಿದೆ ಈ ರಥೋತ್ಸವದಲ್ಲಿ ನಾವೆಲ್ಲರೂ ಪಾಲ್ಗೊಂಡು ಪೂಜೆ ಪುನಸ್ಕಾರಗಳನ್ನು ಮಾಡಿ ಸುಖ ಸಮೃದ್ಧಿಯನ್ನು ಪಡೆಯೋಣ.

**ನಿಜಗುಣ ವಿಶ್ವಕರ್ಮ ಗುರ್ಜಾಲ್**

# ಧಾರ್ಮಿಕ ಪರಂಪರೆಗೆ ಸಿದ್ದಗಂಗಾ ಶ್ರೀಗಳ ಕೊಡುಗೆ ಅಪಾರ: ಅಂಗಡಿ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಅನ್ನ ಅಕ್ಷರ ಜೊತೆಗೆ ದಾಸೋಹ ಸಂಸ್ಕೃತಿಯನ್ನು ಬೆಳೆಸಿದ ಸಿದ್ದಗಂಗಾ ಮಠದ ಲಿಂಗೈಕ್ಯ ಡಾ. ಶಿವಕುಮಾರ ಸ್ವಾಮೀಜಿಗಳ ಕೊಡುಗೆ ನಾಡಿನ ಧಾರ್ಮಿಕ ಪರಂಪರೆಗೆ ಮಹತ್ತರವಾಗಿತ್ತು ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಸುರಪುರ ತಾಲ್ಲೂಕು ಘಟಕದ ಅಧ್ಯಕ್ಷ ಪ್ರಕಾಶ್ ಅಂಗಡಿ ಕನ್ನಳ್ಳಿ ಹೇಳಿದರು ಮಹಾಸಭಾ ವತಿಯಿಂದ ಎಂದು ಬಸವೇಶ್ವರ ಪ್ರಥಮ ಸಹಕಾರಿ ಸಂಘದ ಆವರಣದಲ್ಲಿ ನಡೆದ ಪೂಜ್ಯಶ್ರೀ ಕುಮಾರ ಮಹಾಸ್ವಾಮಿಗಳ 19ನೇ ಜನ್ಮದಿನೋತ್ಸವ ಕಾರ್ಯಕ್ರಮ ಮಾತನಾಡಿದ ಅವರು ಶಿವಕುಮಾರ ಮಹಾ ಸ್ವಾಮೀಜಿಗಳು ಶತಮಾನ ಕಂಡ ಶ್ರೇಷ್ಠ ಸಂಸಾರಾಗಿದ್ದರು ನಾಡಿನ ಅನೇಕ ಪರಂಪರೆಯ ಮಠಗಳಿಗೆ ಪ್ರೇರಣಾ ಶಕ್ತಿಯಾಗಿದ್ದರು ಲಕ್ಷಾಂತರ ಮಕ್ಕಳಿಗೆ ಉಚಿತವಾಗಿ ಊಟ ಮತ್ತು ವಸತಿ ನೀಡುವ ಮೂಲಕ ದಾಸೋಹ ಕ್ರಾಂತಿಯನ್ನೇ ಮಾಡಿದ್ದಾರೆ ಅವರ ಸೇವೆ ಸದಾ ಸ್ಮರಣೀಯ ಎಂದು ಹೇಳಿದರು . ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ವೀರಾಪುರದಲ್ಲಿ ಜನಿಸಿದರು ಮೂಲ ಹೆಸರು ಶಿವಣ್ಣ.

ಮಠದ ಜವಾಬ್ದಾರಿ: 1930 ರಲ್ಲಿ ಸಿದ್ದಗಂಗಾ ಮಠವನ್ನು ಸೇರಿ, 1941 ರಲ್ಲಿ ಮುಖ್ಯ ಪೀಠಾಧಿಪತಿಯಾದರು.

ಶಿಕ್ಷಣ ಸೇವೆ: ಶ್ರೀ ಸಿದ್ದಗಂಗಾ ಎಜುಕೇಶನ್ ಸೊಸೈಟಿಯನ್ನು ಸ್ಥಾಪಿಸಿ, ಸಾವಿರಾರು ಮಕ್ಕಳಿಗೆ ಉಚಿತ ಶಿಕ್ಷಣ ಮತ್ತು ಅನ್ನದಾಸೋಹದ ವ್ಯವಸ್ಥೆ ಮಾಡಿದರು. ಪ್ರಶಸ್ತಿಗಳು: ಭಾರತ ಸರ್ಕಾರದಿಂದ 2015 ರಲ್ಲಿ ಪದ್ಮಭೂಷಣ ಪ್ರಶಸ್ತಿ ಮತ್ತು ಕರ್ನಾಟಕ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಎಂದು ಅಂಗಡಿ ಹೇಳಿದರು ಈ ಸಂದರ್ಭದಲ್ಲಿ ಬ್ಯಾಂಕ್ ಅಧ್ಯಕ್ಷ ಬಸನಗೌಡ ಪಾಟೀಲ ದೇವಾಪುರ, ಬಸವೇಶ್ವರ ಬ್ಯಾಂಕ್ ಉಪಾಧ್ಯಕ್ಷ ವೀರೇಶ ನಿಷ್ಠಿ ದೇಶಮುಖ ಪ್ರಮುಖರಾದ ಮಲ್ಲಿಕಾರ್ಜುನರೆಡ್ಡಿ ಅಮ್ಮಾಪುರ, ಸಿದ್ದನಗೌಡ ಹೆಬ್ಬಾಳ, ವೀರೇಶ ಪಂಚಾಂಗಮಠ, ಜಗದೀಶ ಪಾಟೀಲ್ ಸೂಗೂರು, ಶಿವಶರಣಪ್ಪ ಹೆಡಗಿನಾಳ, ಪ್ರಕಾಶ ಅಂಗಡಿ ಹೆಮ್ಮಡಿಗಿ ಸೇರಿದಂತೆ ಇತರರಿದ್ದರು

# 3ನೇ ತಾಲೂಕು ಸಮ್ಮೇಳನ ಮುಂದೂಡಿಕೆ: ಜುಲೈನಲ್ಲಿ ಆಯೋಜನೆ



• ಮಲ್ಲಮ್ಮ ನುಡಿ ವಾರ್ತೆ , ಕೆಂಭಾವಿ

ಪ್ರಸಕ್ತ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷಾ ಮೌಲ್ಯಮಾಪನ ಕಾರ್ಯ ಹಾಗೂ ಬೇಸಿಗೆ ರಜೆಯ ಹಿನ್ನೆಲೆಯಲ್ಲಿ, ಏಪ್ರಿಲ್ 4 ರಂದು ನಡೆಯಬೇಕಿದ್ದ ಸುರಪುರ ತಾಲೂಕು 3ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮುಂದೂಡಲಾಗಿದೆ ಎಂದು ತಾಲೂಕು ಕಸಾಪ ಗೌರವಾಧ್ಯಕ್ಷರಾದ ರಾಜಾ ಮುಕುಂದ ನಾಯಕ ಹಾಗೂ ಕಸಾಪ ತಾಲೂಕು ಅಧ್ಯಕ್ಷ ಶರಣಬಸವ ಯಾಳವಾರ ತಿಳಿಸಿದರು.

ಪಟ್ಟಣದ ಸ್ಪಂದನ ಶಾಲೆಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. "ದಿನದಿಂದ ದಿನಕ್ಕೆ ಬೇಸಿಗೆಯ ಬಿಸಿಲು ಹೆಚ್ಚಾಗುತ್ತಿದೆ. ಅಲ್ಲದೆ ಶಿಕ್ಷಕರು ಮೌಲ್ಯಮಾಪನ ಕಾರ್ಯದಲ್ಲಿ ತೊಡಗುರವುದರಿಂದ ಮತ್ತು ವಿದ್ಯಾರ್ಥಿಗಳಿಗೆ ರಜೆ ಇರುವುದರಿಂದ ಸಮ್ಮೇಳನದಲ್ಲಿ ಕೊರತೆ ಎದುರಾಗುವ ಸಾಧ್ಯತೆಯಿದೆ. ಹಾಗಾಗಿ ಸದ್ಯದ ಪರಿಸ್ಥಿತಿಯನ್ನು ಪರಿಗಣಿಸಿ ಸಮ್ಮೇಳನವನ್ನು ಜುಲೈ ಮೊದಲ ವಾರದಲ್ಲಿ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ ಎಂದ ಅವರು ಈ ಎಲ್ಲಾ ಅಂಶಗಳನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಶರಣಬಸಪ್ಪಗೌಡ ದರ್ಶನಪುರ ಹಾಗೂ ಶಾಸಕ ರಾಜಾ ವೇಣುಗೋಪಾಲ ನಾಯಕ ರವರ ಗಮನಕ್ಕೆ ತರುವುದರ ಮೂಲಕ ಅವರೊಂದಿಗೆ ಚರ್ಚಿಸಿ ಶೀಘ್ರದಲ್ಲೇ ನಿಖರವಾದ ದಿನಾಂಕವನ್ನು ಪ್ರಕಟಿಸಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ವಾಮನರಾವ್ ದೇಶಪಾಂಡೆ, ವಲಯ ಕಸಾಪ ಅಧ್ಯಕ್ಷ ಮಡಿವಾಳಪ್ಪಗೌಡ ಪಾಟೀಲ ಮಾತನಾಡಿದರು. ಶಿವನಗೌಡ ಮಾಲಿ ಪಾಟೀಲ್, ಡಾ. ಯಂಕನಗೌಡ ಪಾಟೀಲ್, ಎಚ್. ರಾಠೋಡ, ಶ್ರೀಶೈಲ ಯಂಕಂಚಿ, ಗಂಗಾಧರ ರುಮಾಲು, ವಿಜಯಾಚಾರ್ಯ ಪುರೋಹಿತ, ಬಂದೇನವಾಜ್ ನಾಲತವಾಡ, ಗುಂಡಭಟ್ಟ ಜೋಶಿ, ಡಿ.ಸಿ. ಪಾಟೀಲ್, ನಂದಪ್ಪ ಕವಲ್ದಾರ, ಇಲಿಯಾಸ್ ವಡಿಕೇರಿ, ಹಣಮಂತ ಶಹಾಪುರ, ಪರಶುರಾಮ ಮಾಳಹಳ್ಳಿಕರ್, ಸಂತೋಷ್ ಪಾಟೀಲ್, ಇಲಿಯಾಸ್ ಪಟೇಲ್, ರೇವಣಸಿದ್ದಯ್ಯ ಮಠ, ಹಣಮಂತ್ರಾಯ ಪತ್ತೇಪುರ, ರಾಚಪ್ಪ ಕುಂಬಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಗಮಕ ಕಲಾ ಪರಿಷತ್ತಿನಿಂದ ಅರ್ಥಪೂರ್ಣ ಯುಗಾದಿ ಕವಿಗೋಷ್ಠಿ



• ಮಲ್ಲಮ್ಮ ನುಡಿ ವಾರ್ತೆ , ಸುರಪುರ

ಇಲ್ಲಿನ ಕರ್ನಾಟಕ ಗಮಕ ಕಲಾ ಪರಿಷತ್ತಿನ ವತಿಯಿಂದ ಯುಗಾದಿ ಹಬ್ಬದ ಪ್ರಯುಕ್ತ ನವ ಸಂವತ್ಸರದ ಕವಿಗೋಷ್ಠಿ ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ ಸಮಾರಂಭ ಅತ್ಯಂತ ಸಂಭ್ರಮದಿಂದ ಜರುಗಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪಾರ್ವತಿ ಎಸ್. ಬೂದೂರು ಅವರು ಮಾತನಾಡಿ, "ಯುಗಾದಿ ಎಂದರೆ ಕೇವಲ ಕಾಲದ ಬದಲಾವಣೆಯಲ್ಲ, ಅದು ಚೈತನ್ಯದ ಪುನರುತ್ಥಾನ. ಗಮಕ ಮತ್ತು ಕಾವ್ಯ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಬದುಕಿನ ಏಳುಬೀಳುಗಳನ್ನು ಪ್ರತಿಬಿಂಬಿಸುವ ಕಾವ್ಯಗಳು ಸಮಾಜಕ್ಕೆ ದಾರಿದೀಪವಾಗಲಿ," ಎಂದು ಆಶಿಸಿದರು.

ಗೋಷ್ಠಿಯಲ್ಲಿ ವಿವಿಧ ಕವಿಗಳು ತಮ್ಮ ಕವನಗಳ ಮೂಲಕ ಸಾಹಿತ್ಯದ ಸುಧೆ ಹರಿಸಿದರು. ಶ್ರೀ ಹರಿರಾವ ಆದ್ವಾನಿ ಕುಮಾರವ್ಯಾಸ ಭಾರತದ ವಾಚನದ ಮೂಲಕ ಭಕ್ತಿ ಪರಂಪರೆಯನ್ನು ನೆನಪಿಸಿದರು. ನಬಿಲಾಲ್ ಮಕಾಂದಾರ, ಶ್ರಮಜೀವಿಗಳ ಬದುಕು ಹಾಗೂ ಸಾಮಾಜಿಕ ವಾಸ್ತವದ ಗಜಲ್ ವಾಚಿಸಿದರು.

ಹೆಚ್. ರಾಠೋಡ್ ಅಹಂಕಾರವನ್ನು ತೊರೆದು ಸತ್ಯದ ದರ್ಶನ ಪಡೆಯುವ 'ಸೌಜನ್ಯದ ಗೆರೆ' ಕವಿತೆ ಓದಿದರು. ಸಾಹೇಬರಡ್ಡಿ ಇಟಗಿ ಸುರಪುರದ ಗತವೈಭವ ಹಾಗೂ ಕಡ್ಲಪ್ಪನ ಮಠದ ಇತಿಹಾಸವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದರು.

ಸುರೇಶ ಶಿರೊಳ್ಳಿಮಠ ರವರು ಕನ್ನಡ ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಕವಿತೆಯಲ್ಲಿ ಕಟ್ಟಿಕೊಟ್ಟರು. ಮಹೇಂದ್ರನಾಥ ಅಂಗಡಿ, ಡಿ.ವಿ.ಜಿ ಅವರ ಕಗ್ಗಗಳನ್ನು ಗಮಕ ಶೈಲಿಯಲ್ಲಿ ವಾಚಿಸಿ ಮನಗೆದ್ದರು.

ಈಶ್ವರ ಶಾಹಾಪುರಕರ್, ಶರಣಪ್ಪ ಬಾದ್ಯಾಪುರ, ವಿದ್ಯಾಕುಮಾರ ಬಡಿಗೇರ, ವೆಂಕಣ್ಣ ಯಾದವ, ಹಣಮಂತ ಕನ್ನೆಳ್ಳಿ ಹಾಗೂ ರೇವಣಸಿದ್ಧ ಅವರು ಮಾನವೀಯ ಸಂಬಂಧ, ತಾಯಿಯ ಮಮತೆ ಹಾಗೂ ಪ್ರಚಲಿತ ವಿದ್ಯಮಾನಗಳ ಕುರಿತು ಕವಿತೆ ಮಂಡಿಸಿದರು.

ಕಾರ್ಯಕ್ರಮವನ್ನು ರಾಜಾ ಮುಕುಂದ ನಾಯಕ ಉದ್ಘಾಟಿಸಿದರು. ವೇದಿಕೆಯಲ್ಲಿ ಕನ್ನಡ ಸಾಹಿತ್ಯ ಸಂಘದ ಅಧ್ಯಕ್ಷ ಜಮುದ್ರಖಾನಿ, ಗಮಕ ಕಲಾ ಪರಿಷತ್ತಿನ ಜಿಲ್ಲಾಧ್ಯಕ್ಷ ಜಾಲವಾದಿ, ತಾಲೂಕು ಅಧ್ಯಕ್ಷ ಮಲ್ಲಿಕಾರ್ಜುನ ಉದ್ದಾರ, ಲಕ್ಷ್ಮೀಕಾಂತ ಮೋಹರೀರ, ವಿಶ್ವ ಪೂರ್ವಾ ಸತ್ಯಂಪೇಟೆ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಸಾಧಕರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

## ಕೆಯುಡಬ್ಲ್ಯೂಜೆ: 4 ಜನ ಪತ್ರಕರ್ತರಿಗೆ ಪ್ರಶಸ್ತಿ

# ಗಿರಿನಾಡಿಗೆ ಹೆಮ್ಮೆಯ ಸಂಗತಿ; ಸಂಕೀನ್

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ(ಕೆಯುಡಬ್ಲ್ಯೂಜೆ)ದ 2024ನೇ ಸಾಲಿನ ವಾರ್ಷಿಕ ಪ್ರಶಸ್ತಿ ಜಿಲ್ಲೆಯ ನಾಲ್ವರು ಪತ್ರಕರ್ತರಿಗೆ ಪ್ರಶಸ್ತಿ ಲಭಿಸಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್ ಹೇಳಿದರು. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಬೀದರನಲ್ಲಿ ಏಪ್ರಿಲ್ 11 ಮತ್ತು 12 ರಂದು ನಡೆಯಲಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಸೇರಿದಂತೆ ಹಲವು ಗಣ್ಯರು ಭಾಗವಹಿಸಿ ಪ್ರಶಸ್ತಿ ನೀಡಿ ಗೌರವಿಸಲಿದ್ದಾರೆ ಎಂದರು. ಪತ್ರಕರ್ತ ಮಲ್ಲಯ್ಯ ಪೋಲಂಪಲ್ಲಿ ಅವರಿಗೆ ಪಟೇಲ್ ಭೈರಹನುಮಯ್ಯ ಪ್ರಶಸ್ತಿ (ಅತ್ಯುತ್ತಮ ಮಾನವೀಯ ವರದಿ) ಪ್ರಶಸ್ತಿ, ಪತ್ರಕರ್ತ ಅಮರೇಶ ಹಿರೇಮಠ ಅವರಿಗೆ ಅಭಿಮಾನಿ ಪ್ರಕಾಶನ ಪ್ರಶಸ್ತಿ, ಪತ್ರಕರ್ತ ಬಸವರಾಜ ಕಟ್ಟಿಮನಿ ಅವರಿಗೆ ಗಿರಿಧರ್ ಪ್ರಶಸ್ತಿ (ಅತ್ಯುತ್ತಮ ಅಪರಾಧ ವರದಿ) ಪ್ರಶಸ್ತಿ ಹಾಗೂ ಪತ್ರಕರ್ತ ಸಂಜೀವರಾವ್ ಕುಲಕರ್ಣಿ ಅವರಿಗೆ ಕೆಯುಡಬ್ಲ್ಯೂಜೆ ವಿಶೇಷ ಪ್ರಶಸ್ತಿ ಲಭಿಸಿದೆ ಎಂದು ಹೇಳಿದರು. ಜಿಲ್ಲೆಯ 4 ಜನ ಪತ್ರಕರ್ತರ ಸೇವೆಯನ್ನು ಗುರುತಿಸಿ ಅವರಿಗೆ ಪ್ರಶಸ್ತಿ ಘೋಷಣೆ ಮಾಡಿದ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಜಿಲ್ಲೆಯ ಘನತೆ ಇಮ್ಮಡಿಗೊಳಿಸಿದ್ದಾರೆ ಎಂದರು. ನಿಜಕ್ಕೂ ಸಣ್ಣ ಜಿಲ್ಲೆಯ ನಾಲ್ಕು ಜನ ಪತ್ರಕರ್ತರ ಸೇವೆಗೆ ಗೌರವ ಸಿಕ್ಕಂತಾಗಿದೆ. ಗಿರಿನಾಡಿನ ಕಿರುತಿ ನಾಡಿನ ತುಂಬ ಪಸರಿಸಿದೆ ಎಂದು ತಿಳಿಸಿದರು. ಅದರಲ್ಲಿಯೂ ಶಹಾಪುರದ ಇಬ್ಬರೂ ಪತ್ರಕರ್ತರಿಗೆ ಪ್ರಶಸ್ತಿ ಲಭಿಸಿರುವುದು ತಾಲ್ಲೂಕಿಗೆ ಹೆಮ್ಮೆಯ ಸಂಗತಿಯಾಗಿದೆ ಎಂದರು.

# ಶ್ರೀ ವೀರಭದ್ರೇಶ್ವರ ಜಾತ್ರಾ ವೈಭವ



• ಮಲ್ಲಮ್ಮ ನುಡಿ ವಾರ್ತೆ ಸೇಡಂ

ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ಕೋಲ್ಕುಂದಾ ಗ್ರಾಮದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವ ಭಕ್ತಿ, ಸಂಭ್ರಮದ ವಾತಾವರಣದಲ್ಲಿ ಬುಧವಾರ ಜರುಗಿತು.

ಜಾತ್ರೆಯು ನಿನ್ನೆ ಪುರಾಣ ಪ್ರವಚನದ ಸಮಾರೋಪ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಚಾಲನೆ ಪಡೆದುಕೊಂಡಿತು. ಇಂದು ಬೆಳಿಗ್ಗೆ ದೇವಸ್ಥಾನದಲ್ಲಿ ಶ್ರೀ ವೀರಭದ್ರ ಸ್ವಾಮಿಗೆ ವಿಶೇಷ ಅಲಂಕಾರ ಮಾಡಿ ವಿಶೇಷ ಪೂಜೆಗಳನ್ನು ನೆರವೇರಿಸಲಾಯಿತು.

ಸಾವಿರಾರು ಭಕ್ತರು ಭಾಗವಹಿಸಿ ದೇವರ ದರ್ಶನ ಪಡೆದು ಪೂಜೆಯಲ್ಲಿ ತೊಡಗಿಕೊಂಡರು. ಅಗ್ನಿ ಪ್ರವೇಶ ಹಾಗೂ ಪುರವಂತರ ಸೇವೆ ಕಾರ್ಯಕ್ರಮಗಳು ಜಾತ್ರೆಗೆ ವಿಶೇಷ ಮೆರುಗು ತಂದವು.

ಸಾಯಂಕಾಲ ಹೂವಿನ ತೇರಿನ ಕಾರ್ಯಕ್ರಮ ನಡೆಯಲಿದ್ದು, ಜಾತ್ರೆ ಇನ್ನಷ್ಟು ವಿಜೃಂಭಣೆಗೆ ಸಾಕ್ಷಿಯಾಗಲಿದೆ. ವರ್ಷದಿಂದ ವರ್ಷಕ್ಕೆ ಭಕ್ತರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಜಾತ್ರಾ ಮಹೋತ್ಸವ ಹೆಚ್ಚು ವೈಭವದಿಂದ ನಡೆಯುತ್ತಿದೆ.

# ಮೀನುಗಾರರ ಗುಡಿಸಿಗೆ ಡಿಸಿ, ಸಿಇಒ ಭೇಟಿ ನೀಡಲಿ: ಉಮೇಶ ಮುದ್ನಾಳ ಆಗ್ರಹ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಸ್ವತಂತ್ರ ಸಿಕ್ಕು 70 ವರ್ಷ ಗತಿಸಿದರು ನಿಜವಾದ ಮೀನುಗಾರರಿಗೆ ಸೌಲಭ್ಯಗಳನ್ನು ಸಿಗದೆ ಗುಡಿಸಿನಲ್ಲಿ ವಾಸ ಮಾಡುವ ಪರಸ್ಥಿತಿ ನಿರಂತರವಾಗಿ ನಡೆದರು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಕಣ್ಣು ಮುಚ್ಚಿಕುಳಿತಿರಿವುದು ದುರದೃಷ್ಟಕರ ಸಂಗಿತ ಎಂದು ಸಾಮಾಜಿಕ ಹೋರಾಟಗಾರ ಉಮೇಶ ಕೆ. ಮುದ್ನಾಳ ಆರೋಪಿಸಿದ್ದಾರೆ. ಯಾದಗಿರಿ ಜಿಲ್ಲೆಯ ವಡಗೇರಿ ತಾಲ್ಲೂಕಿನ ವ್ಯಾಪ್ತಿಗೆ ಅರ್ಜುಣಿಗಿ ಗ್ರಾಮದಲ್ಲಿ ವಾಸ ಮಾಡುತ್ತಿರುವ ಮೀನುಗಾರ ಗುಡಿಸಿಲಿಗೆ ಸಾಮಾಜಿಕ ಹೋರಾಟಗಾರ ಉಮೇಶ ಕೆ. ಮುದ್ನಾಳ ಅವರು ಬೇಟಿ ನೀಡಿ ಪರಿಶೀಲಿಸಿದ ನಂತರ ಮೀನುಗಾರರ ಜೊತೆ ಸುರ್ಧೀಘವಾಗಿ ಚರ್ಚಸಿ ಮಾತನಾಡಿದ ಅವರು ಸ್ವತಂತ್ರ ಬಂದು 70 ವರ್ಷ ಗತ್ತಿಸಿದರು ಈ ಗ್ರಾಮಗಳಿಗೆ ಮೂಲಭೂತ ಸೌಕರ್ಯ ಸಿಗದೆ ವಂಚಿತವಾಗಿವೆ ಇಂತ ಗ್ರಾಮಗಳಿಗೆ ಜಿಲ್ಲಾಧಿಕಾರಿಗಳು ಜಿಲ್ಲಾ ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು ಬೇಟಿ ನೀಡಿ ಮೀನುಗಾರರ ಜೊತೆ ಸಭೆಗಳನ್ನು ನಡೆಸಿ ಇವರಿಗೆ ವಿಶೇಷ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವುದರ ಜೊತೆ ಮೀನುಗಾರಿಗೆ ಇಲಾಖೆಯಿಂದ ರಿಯಾಯಿತಿ ದರದಲ್ಲಿ ಸಾಲ ಸೌಲಭ್ಯ ಬದಿ ಮತ್ತು ಬೈಕ್ ಮತ್ತು ಐಸ್ ಬಾಕ್ಸ್ ಗಳನ್ನು ಒದಗಿಸಿ ಕೊಟ್ಟು ಅವರು ಎಲ್ಲಾರೂ ಜೊತೆ ಬದುಕಿ ಬಾಳಲು ಅನುಕೂ ಮಾಡಿಕೊಡಲು ಮುಂದಾಗಬೇಕೆಂದು ಆಗ್ರಹಿಸಿದ್ದಾರೆ. ಇದೇ ಸಂದರ್ಭದಲ್ಲಿ ಮಲ್ಲಪ್ಪ, ಭೀಮಾಶಂಕರ,

ಪವನ, ಚಂದ್ರು, ಮಹಾದೇವಪ್ಪ, ಹಣಮಂತ, ಜಗದೀಶ, ಶರಣಪ್ಪ ಗ್ರಾಮಸ್ಥರು ಮೀನುಗಾರರು ಮಹಿಳೆಯರು ಉಮೇಶ ಕೆ. ಮುದ್ನಾಳ ಅಭಿಮಾನಿಗಳ ಬಳಗ ಉಪಸ್ಥಿತರಿದ್ದರು

## ಸಿಎಂ ಜಂಟಿ ಕಾರ್ಯದರ್ಶಿಗಳಿಗೆ: ಐಕೂರ ಕೋರಿಕೆ

# ಹೈಯ್ಯಾಳ ಲಿಂಗೇಶ್ವರ ದೇವಸ್ಥಾನ ಅಭಿವೃದ್ಧಿಗೆ ಅನುದಾನಕ್ಕಾಗಿ ಮನವಿ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಕಲ್ಯಾಣ ಕರ್ನಾಟಕ ಭಾಗದ ವಡಗೇರಾ ತಾಲೂಕಿನ ಹೈಯ್ಯಾಳ (ಬಿ) ಗ್ರಾಮದ ಶ್ರೀ ಹೈಯ್ಯಾಳ ಲಿಂಗೇಶ್ವರ ದೇವಸ್ಥಾನಕ್ಕೆ ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿ ಎಂ. ರಾಮಯ್ಯನವರು ಭೇಟಿ ನೀಡಿ ದರ್ಶನ ಪಡೆದರು. ನಂತರ ಕುರುಬ ಸಂಘದ ಜಿಲ್ಲಾಧ್ಯಕ್ಷ ಮಲ್ಲಣ್ಣ ಐಕೂರ ಮಾತನಾಡಿ ಕಲ್ಯಾಣ ಕರ್ನಾಟಕ ಭಾಗದ ಅತ್ಯಂತ ದೊಡ್ಡ ದೇವಸ್ಥಾನ ಇದಾಗಿದ್ದು ವರ್ಷದಲ್ಲಿ ಎರಡು ಬಾರಿ ಜಾತ್ರೆ ಅಮಾವಾಸ್ಯೆ ಹಾಗೂ ಇನ್ನಿತರ ಸಮಯದಲ್ಲಿ ಲಕ್ಷಾನುಗಟ್ಟಲೆ ಭಕ್ತರು ಇಲ್ಲಿ ಸೇರುತ್ತಾರೆ ಇಲ್ಲಿ ಬರುವ ಭಕ್ತರಿಗೆ ಸರಿಯಾದ ಕಟ್ಟಡಗಳ ವ್ಯವಸ್ಥೆ ಇಲ್ಲ ಇದು ಧಾರ್ಮಿಕ ದತ್ತಿ ಇಲಾಖೆಗೆ ಒಳಪಡುತ್ತದೆ ಆದರೆ ಸರ್ಕಾರಗಳು ಅಭಿವೃದ್ಧಿ ಪಡಿಸುವಲ್ಲಿ ಹಿಂದೇಟು ಹಾಕುತ್ತಿವೆ ಈಗಾಗಲೇ ದೇವಸ್ಥಾನದ ಕಟ್ಟಡ ಅರ್ಧಕ್ಕೆ ನಿಂತಿದ್ದು ದೇವಸ್ಥಾನದ ಅಭಿವೃದ್ಧಿ ಹೆಚ್ಚಿನ ಅನುದಾನ ನೀಡುವಂತೆ ಸಿಎಂ ಜಂಟಿ ಕಾರ್ಯದರ್ಶಿಗಳಿಗೆ ಮನವಿ ಮಾಡಿಕೊಂಡರು ಮನವಿಗೆ ಸ್ಪಂದಿಸಿದ ಸಿಎಂ ಜಂಟಿ ಕಾರ್ಯದರ್ಶಿ ಎಂ.ರಾಮಯ್ಯ ಮಾತನಾಡಿ ದೇವಸ್ಥಾನದ ಅಭಿವೃದ್ಧಿಗೆ ಅನುದಾನ ಒದಗಿಸುವ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಮಲ್ಲಣ್ಣ ಐಕೂರ, ಕುರುಬ ಸಂಘದ ನಿರ್ದೇಶಕ ಶಿವರಾಜ್ ಪದ್ಮಣ್ಣೂರ, ನಾಗರಾಜ್ ಕೊಂಡಾಪುರ, ಅಪ್ಪಣ್ಣ,ದೇವು,ಹಾಗೂ ದೇವಸ್ಥಾನದ ಪೂಜಾರಿಗಳು ಉಪಸ್ಥಿತರಿದ್ದರು.

# ಗುರುಪೀಠಕ್ಕೆ ದವಸ ಧಾನ್ಯಗಳ ಅರ್ಪಣೆ

ಕಲಬುರಗಿ : ಜಿಲ್ಲೆ ಅಫಜಲಪೂರ ತಾಲೂಕಿನ ಗಡಿ ಗ್ರಾಮವಾದ ಶೇಷಗಿರಿ ಗ್ರಾಮದವರಿಂದ ಮಹತ್ವದ ಧಾರ್ಮಿಕ ಸೇವಾಕಾರ್ಯ ಕೈಗೊಳ್ಳಲಾಗಿದೆ. ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಗುರುಪೀಠ, ನರಸಿಪೂರ (ಹಾವೇರಿ ಜಿಲ್ಲೆ) ದಾಸೋಹಕ್ಕಾಗಿ ದವಸ ಧಾನ್ಯಗಳ ಅರ್ಪಣೆ ಜಾತವನ್ನು ಬುಧವಾರ ಹಮ್ಮಿಕೊಳ್ಳಲಾಗಿದೆ. ಈ ಸತ್ಕಾರ್ಯಕ್ಕೆ ಗ್ರಾಮದ ಸಕಲ ರೈತರು, ಸದ್ಭಕ್ತರು ಹಾಗೂ ಸಮಸ್ತ ಗ್ರಾಮಸ್ಥರು ತಮ್ಮ ಶಕ್ತ್ಯಾನುಸಾರವಾಗಿ ತಾವು ಬೆಳೆದ ಜೋಳ, ಗೋಧಿ ಸೇರಿದಂತೆ ವಿವಿಧ ಧಾನ್ಯಗಳನ್ನು ದೇಣಿಗೆ ರೂಪದಲ್ಲಿ ನೀಡಿದ್ದಾರೆ. ಒಟ್ಟು ಸುಮಾರು 40 ಕ್ವಿಂಟಲ್‌ಗೂ ಅಧಿಕ ಧಾನ್ಯಗಳನ್ನು ಸಂಗ್ರಹಿಸಲಾಗಿದೆ. ಈ ಧಾನ್ಯಗಳನ್ನು ದಿನಾಂಕ 02.04.2026 ರಂದು ನಡೆಯುವ ಹುಣ್ಣಿಮೆಯ ಸತ್ಸಂಗ ಕಾರ್ಯಕ್ರಮದಲ್ಲಿ ಗುರುಪೀಠಕ್ಕೆ ಅರ್ಪಿಸಲಾಗುವುದು. ಅಲ್ಲದೆ, ಪ್ರತಿ ಅಮಾವಾಸ್ಯೆ ಹಾಗೂ ಹುಣ್ಣಿಮೆ ದಿನಗಳ ದಾಸೋಹ ಮತ್ತು ಶಾಲೆಯ ವಸತಿ ನಿಲಯದ ಮಕ್ಕಳ ಭೋಜನ ವ್ಯವಸ್ಥೆಗೆ ಈ ಧಾನ್ಯಗಳನ್ನು ಸಮರ್ಪಿಸಲಾಗುತ್ತಿದೆ. ಈ ಧಾನ್ಯ ಅರ್ಪಣೆ ಜಾತದಲ್ಲಿ ಗ್ರಾಮದ ಹಿರಿಯರಾದ ಜಗದೇವ ಹಿಳ್ಳಿ, ಶೆಟ್ಟಪ್ಪ ವಳಸಂಗ, ವಿಠ್ಠಲ ಬೆವನೂರ, ಶರಣಪ್ಪ ಬೋಥೆ, ರಾಮ ಬೊರೂಟಗಿ, ಲಕ್ಷ್ಮಣ ಚಾಂಬರ, ಸಾಯಬಣ್ಣ ಅಂಕಲಗಿ, ಗಂಗಾಧರ ಪಾಟೀಲ ಮತ್ತು ಶಿವಾನಂದ ಶಿರನಾಳ ಸೇರಿದಂತೆ ಅನೇಕರು ಭಾಗವಹಿಸಲಿದ್ದಾರೆ.

# ಕ್ರೀಡೆಯಲ್ಲಿನ ಗೆಲುವು ಎಷ್ಟು ಮುಖ್ಯ, ಜೀವನದಲ್ಲಿನ ಗೆಲುವು ಅಷ್ಟೇ ಮುಖ್ಯ: ಶರಣಪ್ಪ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಕ್ರೀಡೆಯಲ್ಲಿ ಸೋಲು ಗೆಲುವು ಮುಖ್ಯವಲ್ಲ. ಕ್ರೀಡಾ ಮನೋಭಾವದಿಂದ ಪಾಲ್ಗೊಳ್ಳುವುದು ಅತಿ ಮುಖ್ಯವಾಗಿದೆ ಹಾಗೂ ಕ್ರೀಡೆಯಲ್ಲಿ ಗೆದ್ದಂತೆ ಜೀವನದಲ್ಲಿಯೂ ಗೆಲ್ಲುವ ಛಲ ಬರಬೇಕು ಎಂದು ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಶರಣಪ್ಪ ಮಾನೇಗಾರ ಯರಗೋಳ ಅವರು ಕ್ರೀಡಾಪಟುಗಳಿಗೆ ಸಲಹೆ ನೀಡಿದರು. ಯರಗೋಳ ಗ್ರಾಮದಲ್ಲಿ ಹಮ್ಮಿಕೊಂಡ ಪ್ರೀಮಿಯರ್ ಲೀಗ್ 5 ರ , ಕ್ರಿಕೆಟ್ ಟೂರ್ನಮೆಂಟ್ ಆಯೋಜನೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಪಂದ್ಯಕ್ಕೂ ನಮ್ಮ ಜೀವನಕ್ಕೂ ಅನ್ಯೋನ್ಯ ಸಂಬಂಧವಿದೆ. ಎಲ್ಲಾರೂ ಗೆಲ್ತೀವಿ ಅಂತಾನೆ ಆಟವಾಡಬೇಕು. ಕ್ರೀಡೆಗಳಲ್ಲಿ ಸೋಲೆ ಗೆಲುವಿನ ಮೆಟ್ಟಿಲು. ಜೀವನದಲ್ಲಿಯೂ ಹಾಗೇಯೇ ಕ್ರೀಡೆಯಲ್ಲಿ ಸೋತಿದ್ದೇವೆ ಎಂದು ಹತಾಶೆರಾಗದೇ ಮರು ಪ್ರಯತ್ನ ಮಾಡಬೇಕು. ಸೋಲಿನಿಂದ ನೀತಿ ಪಾಠ ಕಲಿಯುತ್ತೇವೆ. ಸೋಲು ಗೆಲುವು ಸಮಾನವಾಗಿ ಸ್ವೀಕರಿಸಬೇಕು ಎಂದರು. ಕ್ರಿಕೆಟ್ ಕೇವಲ ಆಟವಲ್ಲ ಜೀವನದಲ್ಲಿ ಶಿಸ್ತು, ಸಂಯಮ, ಧೈರ್ಯ ತುಂಬುವಂತಹ ಆಟವಾಗಿದೆ. ಕ್ರೀಡೆಗಳು ಸಂಘಟನಾ ಶಕ್ತಿ ಹಾಗೂ ಒಗ್ಗಟ್ಟಿನ ಗುಣ ಬೆಳೆಸುತ್ತವೆ.

ಇಂದು ಕ್ರಿಕೆಟ್ ಮನೆ ಮಾತಾಗಿದೆ ಆರ್‌ಸಿಬಿ ಗೆದ್ದು ಜಗತ್ತಿಗೆ ಕೀರ್ತಿ ತಂದ ಕನ್ನಡದ ನೆಲ ನಮ್ಮದು ನಮ್ಮದೇ ಭಾಗದ ಪ್ರತಿಭೆ ಸ್ನೇಹ ಮಾಟೀಲ ಅಂತರಾಷ್ಟ್ರೀಯ ಮಟ್ಟಕ್ಕೆ ಬೆಳೆದು ಹೆಸರುವಾಸಿಯಾದ ಇತಿಹಾಸ ಎಲ್ಲರಿಗೆ ಪ್ರೇರಣೆಯಾಗಿದೆ.

ಪ್ರತಿಭೆ ಯಾರ ಸ್ವತ್ತಲ್ಲ ಯುವ ಪೀಳಿಗೆ ಸಾಧನೆ ಮಾಡುವ ಸಂಕಲ್ಪ ಮಾಡಬೇಕು ಎಂದು ಅವರು ನಿರ್ದೇಶಿಸಿದರು. ಈ ಸಂದರ್ಭದಲ್ಲಿ ಯಾದಗಿರಿ ನಗರ ಸಭೆ ಮಾಜಿ ಅಧ್ಯಕ್ಷ ಶಶಿಧರರೆಡ್ಡಿ ಗೌಡ ಹೊಸಳ್ಳಿ , ಪರಶುರಾಮ್ ಚವಾಣ್, ಚಂದ್ರರೆಡ್ಡಿ ಬಂದಳ್ಳಿ, ಸುರೇಶ ಅಲ್ಲಿಪುರ, ಶರಣಪ್ಪ ಮೊಟ್ನಳ್ಳಿ, ಹನುಮಂತ ದೊಡ್ಡಮನಿ, ದೇವಪ್ಪಗೌಡ ರಾಚನಹಳ್ಳಿ, ವೀರೇಶ್ ಸಜ್ಜನ್, ರಾಜೂಗೌಡ ಅರಿಕೇರಿ, ಬಸವಲಿಂಗಪ್ಪ ನಾಯಕ್, ವಿನಯ್ ರಾಕಾ, ಆಂಜನೇಯ ಕಟ್ಟಿಮನಿ, ಭೀಮಶ್ಯ ಗೋಡಿಕರ, ಹನಮಂತ ತಳವಾರ, ವೀರೇಶ್ ಗೌಡ, ಸಾಹೇಬ ಗೌಡ ಗಮಾಪಲ್ಲಿ, ಸಾಬಣ್ಣ ಕೋಲ್ಕರ್ , ಚಂದ್ರಪ್ಪ ಇದ್ದಿಲಿ, ಮಂಜುನಾಥ ಮಲ್ಹಾರ, ದೇವಿಂದ್ರಪ್ಪ ಬನಾ ಸೇರಿದಂತೆ ಊರಿನ ಗಣ್ಯರು ಉಪಸ್ಥಿತರಿದ್ದರು.

# 153 ನೇ ದಿನದ ಬಲ್ಡೋಟ ತೊಲಗಿಸಿ ಹೋರಾಟ ಸಂಪನ್ನ



• **ಮಲ್ಲಮ್ಮ ನುಡಿವಾರ್ತೆ ಕೊಪ್ಪಳ**

ನಗರಸಭೆ ಮುಂದುಗಡೆ ನಡೆದಿರುವ ಬಲ್ಡೋಟ ಕಾರ್ಖಾನೆ ವಿರೋಧಿ ಧರಣಿ 153ನೇ ದಿನ ಪೂರ್ಣಗೊಳಿಸಿತು.

ಗುರುವಾರ ಎಪ್ರಿಲ್ 2 ರಂದು ಎಂ.ಎಸ್.ಪಿ.ಎಲ್, ಪಿ.ಬಿ.ಎಸ್, ಠಾಕೂರ್ ಸ್ಟೀಲ್, ಐ.ಎಲ್.ಸಿ, ಎಸ್.ಕೆ.ಎಸ್. ಸ್ಟೀಲ್ ಮುಂತಾದ ಕಾರ್ಖಾನೆಗಳಿಂದ ದೂಳು, ಹೊಗೆ, ಬೂದಿ ಬಾಧಿತ ಹಾಲವರ್ತಿ ಗ್ರಾಮದಲ್ಲಿ 'ಕೊಪ್ಪಳ ಕಾರ್ಖಾನೆ ಬಾಧಿತ ರೈತ ಸಂಘ' ಗ್ರಾಮ ಘಟಕ ಉದ್ಘಾಟನೆ ನೆರವೇರಿಸಲು ಜಂಟಿ ಕ್ರಿಯಾ ವೇದಿಕೆಯ ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು ಒಳಗೊಂಡು ಸಂಚಾಲಕ ಮಂಡಳಿ ಸಿದ್ದಗೊಂಡಿತು.

ಇದೇ ವೇಳೆ ಮಂಜುನಾಥ ಸಾಲಿಮಠ ಅವರ ಮಗಳ ವಿವಾಹವನ್ನು ಕಾರ್ಖಾನೆ ತೊಲಗಲಿ ನವಜೋಡಿ ಬೆಳಗಲಿ ಎಂಬ

ಸ್ವಾಗತ ಕಮಾನು ಮಾಡಿ ಅತಿಥಿಗಳನ್ನು ಆಹ್ವಾನ ನೀಡಿ ಸಂಗೀತ ಕಾರ್ಯಕ್ರಮದಿಂದ ಬಲ್ಡೋಟ ತೊಲಗಿಸಿ ಹೋರಾಟಗಾರರನ್ನು ಸ್ವಾಗತ ಕೋರಿದರು. ಸಾಲಿಮಠ ನವ ಜೋಡಿಗೆ ಹೋರಾಟದ ತಂಡದಿಂದ ಹಾರೈಸಿದರು.

ಧರಣಿಯಲ್ಲಿ ಸಂಚಾಲಕರಾದ ಮಲ್ಲಿಕಾರ್ಜುನ ಬಿ. ಗೋನಾಳ, ಮಂಜುನಾಥ ಜಿ. ಗೊಂಡಬಾಳ, ನಿವೃತ್ತ ಪ್ರಾಚಾರ್ಯ ಎಸ್.ಬಿ.ರಾಜೂರು, ಪ್ರಕಾಶಕ ಡಿ.ಎಂ.ಬಡಿಗೇರ, ಎಲ್.ಎಫ್. ಪಾಟೀಲ್, ಬಿ.ಜಿ.ಕರಿಗಾರ, ಶಂಭುಲಿಂಗಪ್ಪ ಹರಗೇರಿ, ಶರಣು ಶೆಟ್ಟರ್, ವೀರಭದ್ರ ಪಾಂಚಾಳ, ಡಾ. ಬಸವರಾಜ ಪೂಜಾರ, ಎಂ.ಎಸ್. ಗಂಟಿ, ರಾಜಶೇಖರ ಏಳುಬಾವಿ, ರವಿ ಕಾಂತನವರ, ಮಹಾದೇವಪ್ಪ ಮಾವಿನಮಡು, ಶಿವಪ್ಪ ಹಲಗೇರಿ, ಬಸವರಾಜಪ್ಪ ಶೆಟ್ಟರ್, ಪಂಪಣ್ಣ ಚಿಂತಪಲ್ಲಿ, ನಾಗರಾಜ ಕುಷ್ಟಗಿ, ರತ್ನಮ್ಮ ದೊಡ್ಡಮನಿ, ಗಂಗಮ್ಮ ಕೊಡೇಕಲ್, ವೈ. ನಾರಾಯಣ, ಬಸಪ್ಪ ಕಲಕೇರಿ, ಗುರಪ್ಪ ಒಂಟೆತ್ತಿನವರ, ಶಿವಪ್ಪ ಜಲ್ಲಿ ಪಾಲ್ಗೊಂಡರು.

# ಯುಗಾದಿ ರಂಜಾನ್ ಭಾವೈಕ್ಯತೆ ಸಾರುವ ಹಬ್ಬ: ಹುಸೇನ್ ಸಾಬ್

• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು**

ಯುಗಾದಿ ರಂಜಾನ್ ಎರಡು

ಹಬ್ಬಗಳ ಪ್ರಯುಕ್ತ ಪರಸ್ಪರರಲ್ಲಿ ಸಹೋದರತ್ವ ಸಾಮರಸ್ಯ ಭಾವೈಕ್ಯತೆ ಸದ್ಭಾವನೆಯನ್ನು ಸಮಾಜದಲ್ಲಿ ಮತ್ತಷ್ಟು ಗಟ್ಟಿಗೊಳಿಸಲು ಈ ಎರಡು ಹಬ್ಬಗಳ ಸೌಹಾರ್ದ ವೇದಿಕೆ ಸುಗಮವಾಗಿದೆ ಎಂದು ಜಮಾಅತ್ ಇಸ್ಲಾಮೀ ಹಿಂದ್ ಅಧ್ಯಕ್ಷ ಹುಸೇನ್ ಸಾಬ್ ಹೇಳಿದರು

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು

ಇತ್ತೀಚೆಗೆ ಜೊತೆ ಜೊತೆಗೆ ಆಚರಿಸಿದ ಹೊಸ ವರ್ಷದ ಆರಂಭದ ಹಿನ್ನೆಯಲ್ಲಿ ಹೊಂದಿರುವ ಜೀವನವೆಂಬುದು ಕಷ್ಟ ಸುಖಗಳ (ಬೇವು ಬೆಲ್ಲ) ಸಂಗಮ ಎಂದು ಸಾರುವ ಈ ಯುಗಾದಿ ಹಬ್ಬದ ಒಂದು ತಿಂಗಳ ಪರ್ಯಂತ ಉಪವಾಸದ ಮೂಲಕ ಸಹನೆ. ತಾಳ್ಮೆ. ಪ್ರೀತಿ . ತ್ಯಾಗ.ದಾನ. ಧರ್ಮದ ಮೌಲ್ಯಗಳೊಂದಿಗೆ ಆಚರಿಸುವ ರಂಜಾನ್ ಹಬ್ಬ ಈ ಎರಡು ಹಬ್ಬಗಳ ಸಾರ್ವಜನಿಕರಲ್ಲಿ ಸಹೋದರತ್ವ ಹಾಗೂ ಭಾವೈಕ್ಯತೆ ಸಾರುವ ಉದ್ದೇಶಿಸಿವಾಗಿ ಸದ್ಭಾವನಾ ವೇದಿಕೆ ಸಿಂಧನೂರು ಜಮಾಅತ್ ಇಸ್ಲಾಮೀ ಹಿಂದ್ ಮತ್ತು ಭಾವೈಕ್ಯತೆ ಶಾಂತಿ ಸಂದೇಶ ಸಂಸ್ಥೆ ಸಿಂಧನೂರು ಇವರುಗಳು ಸಂಯುಕ್ತ ಆಶ್ರಯದಲ್ಲಿ ಹಬ್ಬಗಳ ಸೌಹಾರ್ದ ಸಂಗಮ ವೇದಿಕೆ

ಕಾರ್ಯಕ್ರಮವನ್ನು ದಿನಾಂಕ 03-4-2026 ರಂದು ಸಂಜೆ 7-15 ಕ್ಕೆ ಸಿಂಧನೂರು ನಗರದ ಕೋಟೆಯ ಮಿಲಾದ್ ಶಾದಿ ಮಹಲ್ ನಲ್ಲಿ ನಡೆಯಲಿದೆ.

ಆದ್ದರಿಂದ ಈ ಭಾವೈಕ್ಯತೆ ಸಂಗಮ ಕಾರ್ಯಕ್ರಮಕ್ಕೆ ತಾಲೂಕಿನ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಬೇವು ಬೆಲ್ಲ ಸುರುಕುರುಮ ಹಂಚೋಣ ಸಾಮರಸ್ಯದಿ ಜೀವನ ಕಳೆಯೋಣ ಎಂದು ಹೇಳಿದರು .

ಈ ಸಂದರ್ಭದಲ್ಲಿ . ಡಿ. ಎಚ. ಕಂಬಳಿ ಸೈಯದ್ ಬಾಬರ್ ಪಾಷಾ ಧಣಿ ವಕೀಲರು. ಪಂಪಯ್ಯ ಸ್ವಾಮಿ. ಸಾಲಿ ಮಠ ಸೇರಿದಂತೆ ಇತರರು ಸುದ್ದಿಗೋಷ್ಠಿಯಲ್ಲಿ ಇದ್ದರು.




# ಹೊಸಳ್ಳಿ ಇಜೆ ಕ್ಯಾಂಪ್: ಏ. 04 ಕ್ಕೆ ಸೈನಿಕ ಶಾಲೆ ಉದ್ಘಾಟನೆ




• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು**

ತಾಲೂಕಿನ ಹೊಸಳ್ಳಿ (ಇಜೆ) ಕ್ಯಾಂಪ್ ನಲ್ಲಿ ಬರುವ ಶ್ರೀ ಕೃಷ್ಣ ದೇವರಾಯ ಶಾಲೆಯಲ್ಲಿ ಕೇಂದ್ರ ಸರ್ಕಾರ ವ್ಯಾಪ್ತಿಯಲ್ಲಿ ಒಳಪಡುವ ಸೈನಿಕ ಶಾಲೆಯ ಏ 04 ರಂದು ಉದ್ಘಾಟನೆ ನಡೆಯಲಿದೆ ಎಂದು ಸೈನಿಕ ಶಾಲೆಯ ಸೊಸೈಟಿ ಅಧ್ಯಕ್ಷ ವೆಂಕಟರಾವ್ ತಿಳಿಸಿದರು

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು ನೂತನ ಸೈನಿಕ ಶಾಲೆ ಉದ್ಘಾಟನೆಗೆ ಕೇಂದ್ರ ಸರ್ಕಾರದ ಕೈಗಾರಿಕೆ ಸಚಿವ ಎಚ ಡಿ. ಕುಮಾರಸ್ವಾಮಿ ಹಾಗೂ ರಾಜ್ಯ ಸರ್ಕಾರದ ರಕ್ಷಣಾ ಸಚಿವ ಸಂಜಯ ಶೇಠ್ ಆಂಧ್ರಪ್ರದೇಶದ ನಾರಾ ಲೋಕೇಶ್.ಜಿಲ್ಲಾ ಉಸ್ತುವಾರಿ ಶರಣು ಪ್ರಕಾಶ್ ಪಾಟೀಲ್ ಶಿವರಾಜ ತಂಗಡಗಿ ಕೊಪ್ಪಳದ ಸಂಸದರು ರಾಜಶೇಖರ್ ಹಿಟ್ನಾಳ್ ಶಾಸಕರು ಇತರರು ಸೇರಿದಂತೆ ಕಾರ್ಯಕ್ರಮಕ್ಕೆ ಭಾಗವಹಿಸಲಿದ್ದಾರೆ. ಎಂದರು.

ಸೈನಿಕ ಶಾಲೆಗೆ. ಎಲ್ಲಾ ರೀತಿಯ ಸಹಕಾರ ದೇವೇಗೌಡ ಹಾಗೂ ಕೇಂದ್ರ ಸರ್ಕಾರದ ಸಚಿವರು ಕುಮಾರಣ್ಣ ಅವರು ನೇತೃತ್ವದಲ್ಲಿ ನಮಗೆ ಸೈನಿಕ ಶಾಲೆ ಸಿಗುವುದಕ್ಕೆ ಸಾಧ್ಯವಾಗಿದೆ ಹಾಗಾಗಿ ಸೈನಿಕ ಶಾಲೆ ಉದ್ಘಾಟನೆ ಸಮಾರಂಭಕ್ಕೆ ಅವರನ್ನು ಇನ್ವೆಂಟ ಮಾಡಲಾಗುತ್ತದೆ ಎಂದು ತಿಳಿಸಿದರು

ಈಗಾಗಲೇ ಸೈನಿಕ ಶಾಲೆ ಪ್ರವೇಶಕ್ಕೆ 90 ವಿದ್ಯಾರ್ಥಿನಿಯರು ಹಾಗೂ 30 ವಿದ್ಯಾರ್ಥಿಗಳು ಸೇರಿದಂತೆ ಒಟ್ಟಾರೆ 120 ವಿದ್ಯಾರ್ಥಿಗಳು ದಾಖಲೆಗಳು ಪಡೆಯಲಿದ್ದಾರೆ. ಈ ಸೈನಿಕ ಶಾಲೆಯ ಯಾರಾದರೂ ವಿದ್ಯಾರ್ಥಿಗಳು ಅರ್ಜಿ ಹಾಕಬಹುದು ಸೈನಿಕ ಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳಿಗೆ ಬೇರೆ ಬೇರೆ ಕಡೆಗೆ ಅವಕಾಶಗಳು ಹುಡುಕಿಕೊಂಡು ಬರುತ್ತವೆ. ಸೈನಿಕ ಶಾಲೆ ಬೋರ್ಡ್ ಸಂಬಂಧಿಸಿದ ಪರೀಕ್ಷೆಗಳು ನಡೆಸಲಾಗುತ್ತಿದೆ.ಜಸ್ಟ್ ಪಾಸ್ ವಿದ್ಯಾರ್ಥಿಗಳನ್ನು ದಾಖಲೆ ಮಾಡಿ ಕೈಗೊಳ್ಳಲಾಗುತ್ತಿದೆ.ಇಬ್ಬರೂ ಮಹಾವ್ಯಕ್ತಿಗಳು ಮೂರ್ತಿ ಅನಾವರಣ ಮಾಡಲಿದ್ದಾರೆ. ಒಂದು ಸೊಸೈಟಿ ವೆಬ್ಸೈಟ್ ಇರುತ್ತದೆ ಅದರ ಪ್ರಕಾರ ಶಿಕ್ಷಕರ ಪರೀಕ್ಷಾ ಟ್ರೈನಿಂಗ್ ಸೆಂಟರ್ ನಡೆಸಲಾಗುತ್ತಿದೆ ಶಿಕ್ಷಕರನ್ನು ನೇಮಕ ಮಾಡಲಾಗುತ್ತದೆ.

ಈ ಸಂದರ್ಭದಲ್ಲಿ.ಜಿ.ಸತ್ಯನಾರಾಯಣ. ಶ್ರೀನಿವಾಸ ಚಿಟ್ಟೂರಿ . ಬಿ.ಹರ್ಷ ಕೆ. ಸುಬ್ಬರಾವ್ ನಾಗೇಶ್ ಹಂಚಿನಾಳ ಕ್ಯಾಂಪ್ ವೆಂಕಟೇಶ್ವರ ರಾವ್. ಸಾಯಿ ರಾಮ ಕೃಷ್ಣ. ನಂದಿನಿ. ಸೇರಿದಂತೆ ಇತರರು ಸುದ್ದಿಗೋಷ್ಠಿಯಲ್ಲಿ ಇದ್ದರು.

# ಸಂಭ್ರಮ, ಸಡಗರದ ಸಣ್ಣ ರಥೋತ್ಸವ



ಅಂಕೋಲಾ : ಪಟ್ಟಣದ ದೊಡ್ಡದೇವರೆಂದೆ ಖ್ಯಾತಿಯಾದ ಶ್ರೀ ವೆಂಕಟರಮಣದೇವರ ಸಣ್ಣರಥೋತ್ಸವವು ಬುಧವಾರ ಸಂಜೆ ಸಭ್ರಮ ಸಡಗರದಿಂದ ನಡೆಯಿತು.

# ಅಂಚೆ ಇಲಾಖೆಯ ವಿಭಾಗೀಯ ಅಧೀಕ್ಷಕರಿಂದ 10 ಲಕ್ಷ ರೂ ಚೆಕ್ ವಿತರಣೆ





• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ಮನುಷ್ಯನ ಜೀವನ ನೀರಿನ ಮೇಲೆ ಗುಳ್ಳೆ ಇದ್ದಂತೆ ಯಾವಾಗ ಯಾರಿಗೆ ಏನಾಗುತ್ತದೆಯೋ ಯಾರಿಗೂ ತಿಳಿದಿಲ್ಲ ವೆಂದು ಕೊಪ್ಪಳ ಅಂಚೆ ಇಲಾಖೆಯ ವಿಭಾಗೀಯ ಅಧೀಕ್ಷಕರಾದ ನಾಗರಾಜ ಪಾಟೀಲರವರು ಹೇಳಿದರು.

ಯಲಬುರ್ಗಾ ಪಟ್ಟಣದ ತಾ.ಪಂ. ಸಭಾಭವನದಲ್ಲಿ ಬುಧುವಾರ ಸ್ಥಳೀಯ ಅಂಚೆ ಇಲಾಖೆಯವರು ಆಯೋಜಿಸಿದ ಅಂಚೆ ಇಲಾಖೆಯ ವಿವಿಧ ಯೋಜನೆಗಳನ್ನು ಪರಿಚಯಿಸುವ ಕಾರ್ಯಕ್ರಮದಲ್ಲಿ ಟಾಟಾ ಎಐಜಿ ಜೀವವಿಮಾಡಿಯಲ್ಲಿ ಪಾಲಸಿಯನ್ನು ಪಡೆದುಕೊಂಡು ಅಕಾಲಿಕ ಮರಣವನ್ನಪ್ಪಿದ ಬಾಬು ಖಲಂದರ ರವರ ತಾಯಿಯಾದ ಪಟ್ಟಣದ ಪಾತೀಮಾ ಪಕೀರಸಾಬ ಗೊಂಡಬಾಳರವರಿಗೆ ಹತ್ತು ಲಕ್ಷ ರೂ ಚೆಕ್ ನ್ನು ವಿತರಿಸಿ ಮಾತನಾಡಿದ ಅವರು ವರುಷಕ್ಕೆ ಕೇವಲ 560 ರೂಗಳನ್ನು ತುಂಬಿ ಟಾಟಾ ಎಐಜಿ ಯೋಜನೆಯಡಿಯಲ್ಲಿ ವಿಮೆ ಸೌಲಭ್ಯವನ್ನು ಅಂಚೆ ಪೇದೆ ಬಸಪ್ಪ ಸವರು ದೊರಕಿಸಿ ಕೊಟ್ಟಿದ್ದನ್ನು ಸ್ಮರಿಸಿದ ಅವರು ನಮ್ಮ ಅಂಚೆ ಇಲಾಖೆಯಿಂದ ಹಲವಾರು ಜನಪೊಯೋಗಿ ಯೋಜನೆಗಳು ಇದ್ದು ಅವುಗಳ ಅನುಷ್ಠಾನಕ್ಕೆ ಸಿಬ್ಬಂದಿಯವರು ಮುತುವರ್ಜಿವಹಿಸ ಬೇಕೆಂದು ಕರೆ ನೀಡಿದರು.

ಕೊಪ್ಪಳದ ಅಂಚೆ ಇಲಾಖೆಯ ವಿಭಾಗೀಯ ಉಪ ಅಧೀಕ್ಷಕರಾದ ವೆಂಕಟೇಶ ಬದಾಮಿ ಐಪಿಪಿಬಿಯ ವ್ಯವಸ್ಥಾಪಕರಾದ ಮಾರುತಿ ಹಾಗೂ ಆರ್.ಡಿ.ಸಿ.ಸಿ.ಬ್ಯಾಂಕಿನ ನಿರ್ದೇಶಕರಾದ ಶೇಖರಗೌಡ ಉಳ್ಳಾಗಡ್ಡಿರವರು ಮಾತನಾಡಿ ಕುಟಂಬ ನಿರ್ವಹಣೆಗೆ ತೊಂದರೆ ಆಗಿದ್ದ ಈ ಸಂಕಷ್ಟ ಸಮಯದಲ್ಲಿ ಫಾತೀಮಾ ರವರಿಗೆ ಹತ್ತು ಲಕ್ಷ ರೂ ಗಳ ಚೆಕ್ ನ್ನು ನೀಡಿ ಆರ್ಥಿಕ ಭದ್ರತೆಯನ್ನು ಒದಗಿಸಿ ಕೊಟ್ಟ ಅಂಚೆ ಇಲಾಖೆಯ ಕಾರ್ಯ ಪ್ರಶಂಸನೀಯವೆಂದು ಹೇಳುತ್ತಾ ನಂಬಿಕೆಗೆ ಅತ್ಯಂತ ಅರ್ಹವಾದ ಅಂಚೆ ಇಲಾಖೆಯಲ್ಲಿ ಹಣ ವಹಿವಾಟು ಮಾಡಬೇಕು ಎಂದು ಸಾರ್ವಜನಿಕರಿಗೆ ಕರೆ ನೀಡಿದರುಅಧ್ಯಕ್ಷತೆ ವಹಿಸಿದ್ದ ಅಂಚೆ ಇಲಾಖೆಯ ಎಸ್.ಪಿ.ಎಮ್. ಕವಿತಾ ರವರು ಮಾತನಾಡಿ ಪಾತೀಮಾರವರು ತನ್ನ ಮಗನನ್ನು ಕಳೆದುಕೊಂಡಿದ್ದನ್ನು ಯಾರು ಎಷ್ಟೇ ಸಂತೈಸಿದರು ಕಳೆದು ಹೋದ ಜೀವವನ್ನು ತರಲು ಯಾರಿಂದಲೂ ಸಾಧ್ಯವಿಲ್ಲವೆಂದಾಗ ವೇದಿಕೆಯ ಮುಂಬಾಗದಲ್ಲಿ ಇದ್ದ ಫಾತೀಮಳ ಕಣ್ಣೀರನ ಕಟ್ಟೆ ಒಡೆದಾಗ ಎಲ್ಲರ ಕಣ್ಣುಗಳು ಒದ್ದೆಯಾದವ.ಮೆಹಬುಬ ಮಕಂದರ ವೀರಣ್ಣ ನಿಂಗೋಜಿ ವೀರೇಶ್ ಜೂಚನಿ ಶರಣಪ್ಪ ಬನ್ನಿಗೋಳ ಬಸಪ್ಪ ಹಾಗೂ ತಾಲೂಕಿನ ಹಲವಾರು ಬಿ.ಪಿ.ಎಮ್ ರವರು ಉಪಸ್ಥಿತರಿದ್ದರು.

# ಕೃಷ್ಣ ಅವರಿಂದ ಆತ್ಮಲಿಂಗ ಪೂಜೆ



• **ಮಲ್ಲಮ್ಮ ನುಡಿ ವಾರ್ತೆ, ಗೋಕರ್ಣ**

ಶ್ರೀ ಕ್ಷೇತ್ರ ಗೋಕರ್ಣದ ಶ್ರೀ ಮಹಾಬಲೇಶ್ವರ ದೇವಸ್ಥಾನದ ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷ ಸುಪ್ರೀಂಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣ ದೇವಸ್ಥಾನಕ್ಕೆ ಭೇಟಿ ನೀಡಿ ಆತ್ಮಲಿಂಗಕ್ಕೆ ಪೂಜೆ ನೆರವೇರಿಸಿದರು. ನಂತರ ಸಭೆ ನಡೆಸಿದ ಅವರು ವಿವಿಧ ಮಾಹಿತಿಗಳನ್ನು ಪಡೆದುಕೊಂಡರು.

ಈ ಸಂದರ್ಭದಲ್ಲಿ ದೇವಸ್ಥಾನದ ಮೇಲುಸ್ತುವಾರಿ ಸಮಿತಿ ಕಾರ್ಯದರ್ಶಿ ಕುಮಟಾ ವಿಭಾಗಾಧಿಕಾರಿ ಶ್ರವಣಕುಮಾರ, ಸಮಿತಿ ಸದಸ್ಯರಾದ ಗಣಪತಿ ಹಿರೇ, ಪರಮೇಶ್ವರ ರಮಣಿ ಪ್ರಸಾದ, ಸುಬ್ರಹ್ಮಣ್ಯ ಅಡಿ, ಮಹೇಶ ಹಿರೇಗಂಗೆ, ಡಿವೈಎಸ್‌ಪಿ ಗಿರೀಶ, ವ್ಯವಸ್ಥಾಪಕ ಸುಬ್ರಹ್ಮಣ್ಯ ಹೆಗಡೆ, ಕಂದಾಯ ಇಲಾಖೆಯವರು ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.



ಹುಮನಾಬಾದ : ತಾಲೂಕಿನ ಚಿನಕೇರಾ ಗ್ರಾಮದ ಸರಕಾರಿ ಹಿರಿ ಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೀಯ ವನಸಿರಿ ಹಸಿರು ಪಡೆ ಕಾರ್ಯಕ್ರಮದಲ್ಲಿ ಪರಿಸರ ಸಂರಕ್ಷಣೆ ಕುರಿತು ಪರಿಸರವಾದಿ ಶೈಲೆಂದ್ರ ಕಾವಡಿ ಸಹ ವಿಸ್ತಾರವಾಗಿ ವಿವರಣೆ ನೀಡಿದರು. ಈ ಸಂದರ್ಭದಲ್ಲಿ ಶಿಕ್ಷಕ ವೃಂದ, ಎಸ್ ಡಿ ಎಂ ಸಿ ಅಧ್ಯಕ್ಷ ಹಾಗೂ ಸದಸ್ಯರು, ಊರಿನ ಪ್ರಮುಖರು, ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಅದ್ಧೂರಿಯಾಗಿ ಆಚರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಿ: ಜಿಲ್ಲಾಧಿಕಾರಿ

• **ಮಲ್ಲಮ್ಮ ನುಡಿ ವಾರ್ತೆ, ರಾಯಚೂರು**

ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆಯನ್ನು ಇದೇ ಏಪ್ರಿಲ್ 14ರಂದು ಅದ್ಧೂರಿಯಾಗಿ ಆಚರಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಏಪ್ರಿಲ್ 01ರ ಬುಧವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಏಪ್ರಿಲ್ 14ರ ಬೆಳಗ್ಗೆ 9.30ಗಂಟೆಗೆ ರಾಯಚೂರು ನಗರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಪುತ್ಥಳಿಗೆ ಪೂಜೆ ಸಲ್ಲಿಸಿ, ಮಾಲಾರ್ಪಣೆ ನೆರವೇರಿಸಲಾಗುವುದು. ನಂತರ ಬೆಳಿಗ್ಗೆ 11ಕ್ಕೆ ನಗರದ ರಂಗಮಂದಿರದಲ್ಲಿ ಮುಖ್ಯ ವೇದಿಕೆ ಕಾರ್ಯಕ್ರಮ ಏರ್ಪಡಿಸಲಾಗುವುದು. ಕಾರ್ಯಕ್ರಮಕ್ಕೆ ಅಗತ್ಯವಿರುವ ಪೆಂಡಾಲ್, ಬ್ಯಾನರ್, ಆಸನ ವ್ಯವಸ್ಥೆ, ಸ್ವಚ್ಛತೆ ಸೇರಿದಂತೆ ಇತರೆ ವ್ಯವಸ್ಥೆ ಮಹಾನಗರ ಪಾಲಿಕೆಯಿಂದ ಕಲ್ಪಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

# ಎಸ್‌ಎಸ್‌ಎಲ್‌ಸಿ ಹಿಂದಿ ಕಡೆಗಣನೆ ಮರುಪರಿಶೀಲಿಸಲು ಶಿಕ್ಷಕರ ಸಂಘ ಆಗ್ರಹ



• **ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್**

ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಒಟ್ಟು ಅಂಕಗಳನ್ನು 625 ರಿಂದ 525ಕ್ಕೆ ಇಳಿಸಿ, ತೃತೀಯ ಭಾಷೆ ಹಿಂದಿಯನ್ನು ಕೇವಲ 'ಗ್ರೇಡ್' ವಿಷಯವನ್ನಾಗಿ ಪರಿಗಣಿಸುವ ಸರ್ಕಾರದ ಇತ್ತೀಚಿನ ನಿರ್ಧಾರಕ್ಕೆ ಕರ್ನಾಟಕ ರಾಜ್ಯ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ವಿದ್ಯಾರ್ಥಿಗಳಲ್ಲಿ ಆತಂಕ:

ಈ ಕುರಿತು ಹುಮನಾಬಾದ ಹಾಗೂ ಚಿಟಗುಪ್ಪಾ ತಾಲ್ಲೂಕು ಘಟಕದ ವತಿಯಿಂದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರಿಗೆ ಬೀದರ್ ಜಿಲ್ಲಾಧ್ಯಕ್ಷರಾದ ಶ್ರೀ ಶೇಖ್ ಮಹೆಬೂಬ್ ಪಟೇಲ್ ಅವರ ನೇತೃತ್ವದಲ್ಲಿ ಹುಮನಾಬಾದ ತಾಲೂಕ

ಅಧ್ಯಕ್ಷ ಶ್ರೀ ಆನಂದ ಶಿವನಾಯಕ್, ಪ್ರಧಾನ ಕಾರ್ಯದರ್ಶಿ ಡಾ..ಸಾರಿಕಾ ಗಂಗಾ, ಚಿಟಗುಪ್ಪ ತಾಲೂಕು ಅಧ್ಯಕ್ಷ ಶ್ರೀ ಅಶೋಕ್ ಮಹೇಂದ್ರಕರ್, ತಾಲೂಕು ಪ್ರಧಾನ ಕಾರ್ಯದರ್ಶಿ ಶ್ರೀ ಸುದರ್ಶನ್ ಹಾಗೂ ಉಭಯ ತಾಲೂಕಿನ ಸಮಸ್ತ ಪದಾಧಿಕಾರಿಗಳು ಹಾಗೂ ಹಿಂದಿ ಶಿಕ್ಷರು ಸೇರಿ ಮಾನ್ಯ ಶಾಸಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಮನವಿ ಸಲ್ಲಿಸಲಾಗಿದ್ದು, ಸರ್ಕಾರದ ಈ ಹಠಾತ್ ನಿರ್ಧಾರದಿಂದ ಹಿಂದಿ ವಿಷಯವನ್ನು ಪ್ರಮುಖವಾಗಿ ಅಭ್ಯಾಸ ಮಾಡುತ್ತಿರು

ವ ಲಕ್ಷಾಂ ತರ ವಿದ್ಯಾರ್ಥಿಗಳು ಗೊಂದಲಕ್ಕೀಡಾಗಿದ್ದಾರೆ. ಅಂಕಗಳ ಬದಲಿಗೆ ಗ್ರೇಡ್ ನೀಡುವುದರಿಂದ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಹೊಡೆತ ಬೀಳಲಿದೆ ಎಂದು ಸಂಘ ಕಳವಳ ವ್ಯಕ್ತಪಡಿಸಿದೆ.

ಶಿಕ್ಷಕರ ವೃತ್ತಿ ಬದುಕಿಗೆ ಕುತ್ತು:

ಕೇವಲ ವಿದ್ಯಾರ್ಥಿಗಳಷ್ಟೇ ಅಲ್ಲದೆ, ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಸಾವಿರಾರು ಹಿಂದಿ ಶಿಕ್ಷಕರು ಈ ನಿರ್ಧಾರದಿಂದ ಆತಂಕಗೊಂಡಿದ್ದಾರೆ. ಹಿಂದಿ ವಿಷಯವನ್ನು ಅಂಕಗಳ ಪಟ್ಟಿಯಿಂದ ಹೊರಗಿಟ್ಟಿರುವುದು ಹಿಂದಿ ಶಿಕ್ಷಕರ ವೃತ್ತಿ ಗೌರವಕ್ಕೆ ಧಕ್ಕೆ ತಂದಂತಾಗಿದೆ.

ಇದು ಪರೋಕ್ಷವಾಗಿ ಶೈಕ್ಷಣಿಕ ಗುಣಮಟ್ಟದ ಮೇಲೆ ಪರಿಣಾಮ ಬೀರಲಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಪ್ರಮುಖ ಬೇಡಿಕೆಗಳು:

ಎಸ್‌ಎಸ್‌ಎಲ್‌ಸಿ ಅಂಕಗಳನ್ನು ಕ್ರೋಢೀಕರಿಸುವಾಗ ತೃತೀಯ ಭಾಷೆ ಹಿಂದಿಯನ್ನು ಈ ಹಿಂದಿನಂತೆಯೇ ಪರಿಗಣಿಸಬೇಕು. ಅಂಕ ಪಟ್ಟಿಯಲ್ಲಿ ಹಿಂದಿ ವಿಷಯಕ್ಕೆ ಗ್ರೇಡ್ ನೀಡುವ ನಿರ್ಧಾರವನ್ನು ತಕ್ಷಣವೇ ಕೈಬಿಡಬೇಕು.

ಈ ಬಗ್ಗೆ ಸರ್ಕಾರವು ಕೂಡಲೇ ಮರುಪರಿಶೀಲನೆ ನಡೆಸಿ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಹಿತರಕ್ಷಣೆ ಮಾಡಬೇಕು.

# ಸ್ವಚ್ಛ ಪರಿಸರದಿಂದ ಆರೋಗ್ಯ ಜೀವನ



• **ಮಲ್ಲಮ್ಮ ನುಡಿ ವಾರ್ತೆ, ಕಾರವಾರ**

ರಾಷ್ಟ್ರಪಿತ ಗಾಂಧೀಜಿಯವರ ಕನಸ್ಸಿನಂತೆ ಪರಿಸರವನ್ನು ಸ್ವಚ್ಛವಾಗಿಡುವುದರಿಂದ ಆರೋಗ್ಯಕರ ಜೀವನವನ್ನು ಸಾಗಿಸಬಹುದು, ಸರ್ಕಾರ ಇಡೀ ರಾಜ್ಯಾದ್ಯಂತ ವಿನೂತನವಾಗಿ ಸ್ವಚ್ಛತಾ ಅಭಿಯಾನವನ್ನು ಹಮ್ಮಿಕೊಂಡಿದ್ದು, ಈ ನಿಟ್ಟಿನಲ್ಲಿ ರಾಜ್ಯದ 224 ವಿಧಾನಸಭಾ ಕ್ಷೇತ್ರಗಳ ಪೈಕಿ ಪ್ರಥಮವಾಗಿ ಹಳಿಯಾಳ ಕ್ಷೇತ್ರದಲ್ಲಿ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಆರ್.ವಿ.ದೇಶಪಾಂಡೆ ಹೇಳಿದರು.

ಅವರು ಮಂಗಳವಾರ ದಾಂಡೇಯ ಚೆನ್ನಮ್ಮ ವೃತ್ತದಲ್ಲಿ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಹಳಿಯಾಳ ವಿಧಾನಸಭಾ ಕ್ಷೇತ್ರದಲ್ಲಿ 3 ದಿನಗಳ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗಿದೆ. ದಾಂಡೇಲಿ ಕೈಗಾರಿಕ ನಗರವಾಗಿದ್ದು, ಪ್ರವಾಸೋದ್ಯಮ ಅಭಿವೃದ್ಧಿ ಹೊಂದುತ್ತಿದ್ದು, ಇಲ್ಲಿನ ರೆಸಾರ್ಟ್, ರಸ್ತೆ, ಬಸ್ ನಿಲ್ದಾಣ, ಚರಂಡಿ ಉದ್ಯಾನವನಗಳು ಸೇರಿದಂತೆ ದಾಂಡೇಯ ಎಲ್ಲಾ

ಭಾಗದಲ್ಲಿ ಸ್ವಚ್ಛವಾಗಿರಬೇಕು. ಅಂಗಡಿ ಮಾಲೀಕರು ಮತ್ತು ವ್ಯಾಪಾರಸ್ಥರು ತಮ್ಮ ಸುತ್ತ ಮತ್ತಲಿನಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು ಹಾಗೂ ಸ್ವಚ್ಛತಾ ಅಭಿಯಾನದಲ್ಲಿ ಸ್ವಯಂ ಪ್ರೇರಣೆಯಿಂದ ಎಲ್ಲರೂ ಪಾಲ್ಗೋಳುವ ಮೂಲಕ ಕ್ಷೇತ್ರವನ್ನು ಕಸ ಮುಕ್ತ ತಾಲೂಕು ಮಾಡಲು ಕೈ ಜೋಡಿಸಬೇಕು ಎಂದರು.

ಹಳಿಯಾಳ, ದಾಂಡೇಲಿ, ಜೋಯಿಡಾ ತಾಲೂಕಿನಾದ್ಯಂತ ಸ್ವಚ್ಛತಾ ಅಭಿಯಾನ ನಡೆಯುತ್ತಿದೆ. ಈ ರೀತಿಯ ಕಾರ್ಯಕ್ರಮವನ್ನು ರಾಜ್ಯದಲ್ಲಿ ಒಂದು ತಿಂಗಳ ಆಯೋಜನೆ ಮಾಡುವುದರಿಂದ ಇಡೀ ರಾಜ್ಯ ಸ್ವಚ್ಛವಾಗಿರುತ್ತದೆ. ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದರಿಂದ ಉತ್ತಮ ಆರೋಗ್ಯ ಮತ್ತು ಉತ್ತಮ ಪರಿಸರವನ್ನು ರೂಪಿಸಲು ಸಾಧ್ಯ ಎಂದರು.

ನಗರ ಸಭೆ ಪೌರಾಯುಕ್ತ ವಿವೇಕ ಬನ್ನೇ ಮಾತನಾಡಿ, ದಾಂಡೇಲಿಯ 31 ವಾರ್ಡ್‌ಗಳಲ್ಲಿ ಏಕ ಕಾಲದಲ್ಲಿ ಸ್ವಚ್ಛತಾ ಕಾರ್ಯ ಹಮ್ಮಿಕೊಂಡಿದ್ದು, ನಗರದ ಪತ್ರಿಯೊಂದು ಅಂಗಡಿ ಮಾಲೀಕರು ಹಾಗೂ ಸಾರ್ವಜನಿಕರು ತಮ್ಮ ಅಂಗಡಿ ಮತ್ತು ಮನೆಯಲ್ಲಿ ಕಸದ ಬುಟ್ಟಿಯನ್ನು ಕಡ್ಡಾಯವಾಗಿ ಇಡಬೇಕು ಹಾಗೂ ಕಸವನ್ನು ಎಲ್ಲೆಂದರಲ್ಲಿ ಎಸೆಯದೆ ನಗರಸಭೆಯ ಸ್ವಚ್ಛತಾ

ವಾಹನಕ್ಕೆ ನೀಡುವ ಮೂಲಕ ದಾಂಡೇಲಿ ನಗರವನ್ನು ಕಸ ಮುಕ್ತ ನಗರವನ್ನಾಗಿಸಲು ಪ್ರತಿಯೊಬ್ಬರು ಸಹಕರಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಝುಹೀರ್ ಅಬ್ಬಾಸ್, ತಹಶೀಲ್ದಾರ್ ಶೈಲೇಶ್ ಪರಮಾನಂದ, ಎಸಿಎಫ್ ಸಂತೋಷ ಚವ್ಹಾಣ್, ವಿವಿಧ ಸ್ವಸಹಾಯ ಸಂಘದ ಪದಾಧಿಕಾರಿಗಳು, ಬೀದಿ ಬದಿ ವ್ಯಾಪಾರಸ್ಥರು, ವಿವಿಧ ಸಂಘ ಸಂಸ್ಥೆಯ ಕಾರ್ಯಕರ್ತರು, ಮತ್ತಿತ್ತರರು ಇದ್ದರು.

## ವಿಶ್ವ ರಂಗ ಭೂಮಿ ದಿನಾಚರಣೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ಸಿರುಗುಪ್ಪ ರಸ್ತೆಯ ವಿರಾಟ್ ನಗರದಲ್ಲಿ ಶ್ರೀಗುರು ಪುಟ್ಟರಾಜ ಸಂಗೀತ ಪಾಠಶಾಲೆ ಹಮ್ಮಿಕೊಂಡಿದ್ದ ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಗೀತ ಗಾಯನ ಕಾರ್ಯಕ್ರಮ ನೆರವೇರಿತು

ಕಾರ್ಯಕ್ರಮದ ಉದ್ಘಾಟನೆಯನ್ನು.ಎನ್ ಬಸವರಾಜ ನೆರವೇರಿಸಿ ಕರ್ನಾಟಕ ಮಾತೆ ಮಡಿಲಲ್ಲಿ ಜನಿಸಿದ ಹಾನಗಲ್ಲ ಕುಮಾರಸ್ವಾಮಿಯವರ ನಿರ್ಧಿಷ್ಟ ಸಾಧನೆಯ ಗುರಿ ಪಂಡಿತ ಪಂಚಾಷರಿ ಗವಾಯಿ ಡಾ. ಪಂ .ಪುಟ್ಟರಾಜ ಕವಿ ಗವಾಯಿ ಯವರಂತ ಪುತ್ರರತ್ನರನ್ನು ರಾಜ್ಯವಲ್ಲದೆ ದೇಶವಿದೇಶ ಪ್ರಪಂಚಕ್ಕೆ ನೀಡಿದ ಕೀರ್ತಿ ಕನ್ನಡನಾಡಿಗೆ ಸಲ್ಲುತ್ತದೆ ಅವರ ನಿಸ್ವಾರ್ಥ ಸೇವೆ ಇಂತಹ ಅಂಗವಿಕಲರ ಪಾಠಶಾಲೆಯಾಗಿ ನಿಮ್ಮಂತಹ ಶಿಷ್ಯವೃಂದ ಬೆಳೆಯುವದಕ್ಕೆ ಸಾದ್ಯವಾಯಿತು ಇದು ವಿಶ್ವ ರಂಗಭೂಮಿ ದಿನಾಚರಣೆ ಸಾರ್ಥಕವಾಯಿತು ಎಂದು ನುಡಿದರು. ಅಧ್ಯಕ್ಷತೆ ವಹಿಸಿದ್ದು, ಹೆಚ್ ತಿಪ್ಪೇಸ್ವಾಮಿ ಮಾತನಾಡಿ, ದೇಶವಿದೇಶಗಳಲ್ಲಿ ರಾಘವರು ನಾಡೋಜ ಬೆಳಗಲ್ ವೀರಣ್ಣ ನಾಡೋಜ ಮನ್ನೂರು ಸುಭದ್ರಮ್ಮನವರು ನಾಗೇಶಶಾಸ್ತ್ರೀಯವರು ಬೆಳಗಿದಬಳ್ಳಾರಿಕೀರ್ತಿ ಈ ವತ್ತಿಗೂ ಮುಂದುವರೆದಿದೆ ಅವರ ಹಾದಿಯಲ್ಲಿ ಈ ಪಾಠಲೆಯ ಮಕ್ಕಳು ಬೆಳೆಯುವಂತಾಗಬೇಕು ಎಂದರು

ಅತಿಥಿಗಳಾಗಿ ದೊಡ್ಡ ಬಸವಗವಾಯಿ, ವಿರುಪಾಕ್ಷ ದೇವಲಾಪುರ, ಕವಿತಾ ಕಗ್ಗಲ್ ಭಾಗವಹಿಸಿದ್ದರು ಈ ವೇಳೆ ತಿಪ್ಪೇಸ್ವಾಮಿ ಹಾಗೂ ವಿರುಪಾಕ್ಷ ದೇವಲಾಪುರ ಇವರಿಗೆ ಸನ್ಮಾನಿಸಲಾಯಿತು ಪಂಚಾಕ್ಷರಿ ನಿರೂಪಣೆ ನಡೆಸಿಕೊಟ್ಟರು

# ನಾಲ್ಕು ಕಾರ್ಮಿಕ ಸಂಹಿತೆಗಳ ವಿರುದ್ಧ ಕರಾಳ ದಿನ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಕೇಂದ್ರಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ಮತ್ತು ಸ್ವತಂತ್ರವಲಯ ಒಕ್ಕೂಟಗಳು ಹಾಗೂ ಅಸೋಸಿಯೇಷನ್ಗಳು ಏಪ್ರಿಲ್ 1 ರಂದು 'ಕರಾಳ ದಿನ' ವನ್ನಾಗಿ ಆಚರಿಸಲು ಕಾರ್ಮಿಕ ಸಂಘಟನೆಗಳಿಗೆ ಕರೆ ನೀಡಿವೆ. ಈ ನಾಲ್ಕು ಕಾರ್ಮಿಕ ಸಂಹಿತೆಗಳ ಅನುಷ್ಠಾನಕ್ಕಾಗಿ ಕೇಂದ್ರನಿಯಮಗಳ ಅಧಿಸೂಚನೆಯನ್ನುಹೊರಡಿಸುವುದಾಗಿ ಕೇಂದ್ರ ಸರ್ಕಾರವು ಈ ಹಿಂದೆ ಘೋಷಿಸಿದ ದಿನ ಇದಾಗಿದೆ. ಈ ಹಿನ್ನಲೆಯಲ್ಲಿ ಜೆಸಿಟಿಯುನಿಂದ ಬಳ್ಳಾರಿಯ ಜಿಲ್ಲಾಧಿಕಾರಿ ಕಛೇರಿಯ ಬಳಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ವಿವಿಧ ಕೇಂದ್ರ ಕಾರ್ಮಿಕ ಸಂಘಟನೆಗಳಮುಖಂಡರುಮಾತನಾಡಿ, "ವ್ಯವಹಾರದ ಸುಗಮಗೊಳಿಸುವಿಕೆ" (Ease of Doing Business) ಹೆಸರಿನಲ್ಲಿ ತರಲಾದ ಈ ಕಾರ್ಮಿಕ ವಿರೋಧಿ ಮತ್ತು ಉದ್ಯೋಗದಾತ ಪರವಾದ ಕಾರ್ಮಿಕ ಸಂಹಿತೆಗಳನ್ನು ಕೈಬಿಡಬೇಕೆಂದುಕಾರ್ಮಿಕಸಂಘಟನೆಗಳು ನಿರಂತರವಾಗಿ ವಿರೋಧಿಸುತ್ತಿವೆ ಮತ್ತು ಒತ್ತಾಯಿಸುತ್ತಿವೆ. ಐತಿಹಾಸಿಕ ಫೆಬ್ರವರಿ 12 ರ ಸಾರ್ವತ್ರಿಕ ಮುಷ್ಕರದ ನಂತರವೂ, ಈ ಕಾರ್ಮಿಕ ಸಂಹಿತೆಗಳನ್ನು ಹಿಂತೆಗೆದುಕೊಳ್ಳಲು ಅಥವಾ ಈ ವಿಷಯದ ಕುರಿತು ಕೇಂದ್ರ ಕಾರ್ಮಿಕ ಸಂಘಟನೆಗಳೊಂದಿಗೆ ಅರ್ಥಪೂರ್ಣ ಸಭೆ ನಡೆಸಲು ಕೇಂದ್ರ ಸರ್ಕಾರವು ಹಿಂಜರಿಯುತ್ತಿದೆ.ಅಲ್ಲದೆ, ಕರಡು ಹಂತದಿಂದಲೂ ಕಾರ್ಮಿಕ ಸಂಘಟನೆಗಳೊಂದಿಗೆ ಯಾವುದೇ ಸಮಾಲೋಚನೆ ನಡೆಸಲಾಗಿಲ್ಲ; ದೇಶದ ಕಾರ್ಮಿಕರ ಜೀವನದ ಮೇಲೆ ಇಷ್ಟೊಂದು ಗಂಭೀರ ಪರಿಣಾಮ ಬೀರುವ ವಿಷಯದ ಬಗ್ಗೆ ಚರ್ಚಿಸಲು ಯಾವುದೇ 'ಭಾರತೀಯ ಕಾರ್ಮಿಕ ಸಮ್ಮೇಳನ'ವನ್ನು (ILC) ಕರೆದಿಲ್ಲ. ಇದು ಭಾರತವು ಸಹಿ ಹಾಕಿರುವ ಮತ್ತು ಬದ್ಧವಾಗಿರುವ ಅಂತರಾಷ್ಟ್ರೀಯ ಕಾರ್ಮಿಕ ಮಾನದಂಡಗಳ ಉಲ್ಲಂಘನೆಯಾಗಿದೆ. ಈ ಕಾರ್ಮಿಕ ಸಂಹಿತೆಗಳು ನಮ್ಮ ದೇಶದ ಸಂಪತ್ತು ಸೃಷ್ಟಿಕರ್ತರಾದ ಕಾರ್ಮಿಕ ವರ್ಗವನ್ನು ಮತ್ತೊಮ್ಮೆ ಬ್ರಿಟಿಷ್ ವಸಾಹತುಶಾಹಿ ಕಾಲದ ಶೋಷಣೆಯ ಪರಿಸ್ಥಿತಿಗೆ ತಳ್ಳಲಿವೆ ಎಂದರು.ಎಐಯುಟಿಯುಸಿ ಜಿಲ್ಲಾ ಅಧ್ಯಕ್ಷರು ಎ.ದೇವದಾಸ್, ಸಿಐಟಿಯು ರಾಜ್ಯ ಉಪಾಧ್ಯಕ್ಷರು ಸತ್ಯಬಾಬು, ಬ್ಯಾಂಕ್ ನೌಕರರ ಯುನಿಯನ್ (ಬೆಫಿ)ಯ ಘನ ಮಲ್ಲಿಕಾರ್ಜುನ, ಮುಖಂಡರಾದ ಸೋಮಶೇಖರ ಗೌಡ, ಡಾ. ಪ್ರಮೋದ್, ಎ. ಶಾಂತಾ, ಚಂದ್ರಕುಮಾರಿ, ಶರ್ಮಾಸ್, ಮಲ್ಲಮ್ಮ, ಚೇತನ್, ಮುರಳಿಕೃಷ್ಣ, ರಂಗಣ್ಣ. ಎನ್.ಎಂ. ಡಿ. ಸಿ , ಹಾಸ್ಟೆಲ್, ವಿಮ್ಸ್ ಇನ್ನಿತರ ಗುತ್ತಿಗೆ ಕಾರ್ಮಿಕರು ಭಾಗವಹಿಸಿದ್ದರು.




# ಜನಗಣತಿ 2027: ಏಪ್ರಿಲ್ 15 ರ ವರೆಗೆ ಸ್ವಯಂ ನೋಂದಣಿಗೆ ಅವಕಾಶ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಭಾರತಸರ್ಕಾರದಮಹತ್ವಾಕಾಂಕ್ಷೆಯ 'ಜನಗಣತಿ–2027' ಪ್ರಕ್ರಿಯೆಗೆ ಚಾಲನೆ ದೊರೆತಿದ್ದು, ಏ.16 ರ ವರೆಗೆ ಸ್ವಯಂ ನೋಂದಣಿಗೆ ಅವಕಾಶ ಕಲ್ಪಿಸಲಾಗಿದ್ದು, ಬಳ್ಳಾರಿ ತಾಲ್ಲೂಕು ವ್ಯಾಪ್ತಿಯ ಸಾರ್ವಜನಿಕರು ಮಾಹಿತಿ ನೋಂದಾಯಿಸಬೇಕು ಎಂದು ಬಳ್ಳಾರಿ ತಾಲ್ಲೂಕು ತಹಶೀಲ್ದಾರರಾದ ಟಿ.ರೇಖಾ ಅವರು ತಿಳಿಸಿದ್ದಾರೆ.

ಕೇಂದ್ರಗೃಹ ಸಚಿವಾಲಯವು ಈ ಬಾರಿ ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲು ಉದ್ದೇಶಿಸಿದೆ. ಮೊದಲ ಹಂತದ ಆರಂಭದ 15 ದಿನಗಳ ಕಾಲ (ಏಪ್ರಿಲ್ 1 ರಿಂದ ಏಪ್ರಿಲ್ 15 ರವರೆಗೆ) ಸಾರ್ವಜನಿಕರು ತಾವಾಗಿಯೇ ಆನ್‌ಲೈನ್ ಮೂಲಕ ಮಾಹಿತಿ ನೀಡಲು 'ಸ್ವಯಂ–ಗಣತಿ' ಗೆ ಅವಕಾಶ ಕಲ್ಪಿಸಲಾಗಿದೆ.ಬಳಿಕ ಏ.16 ರಿಂದ ಮೇ 15 ರವರೆಗೆ ಮನೆಗಳ ಪಟ್ಟಿ ಮತ್ತು ಮನೆ ಗಣತಿ ಕಾರ್ಯ ಆರಂಭವಾಗಲಿದೆ.

ಸಾರ್ವಜನಿಕರು ೪ಣಣಠಿ:// ಜ.ಛಿಜಟಿಛಿ.ರಠಡಿ.ಟಿಜಾಲತಾಣಕ್ಕೆ ಭೇಟಿ ನೀಡಿ ಮಾಹಿತಿ ದಾಖಲಿಸಬಹುದು. ಮನೆಯ ಒಬ್ಬ ಸದಸ್ಯರು ಸುಮಾರು 15–20 ನಿಮಿಷಗಳಲ್ಲಿ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಬಹುದು.

ಆನ್‌ಲೈನ್‌ನಲ್ಲಿ ಮಾಹಿತಿ ನೀಡಿದ ನಂತರ ಒಂದು 'ಸ್ವಯಂ–ಗಣತಿ ಐಡಿ' ದೊರೆಯುತ್ತದೆ. ನಂತರ ಗಣತಿದಾರರು ಮನೆಗೆ ಭೇಟಿ ನೀಡಿದಾಗ ಈ ಐಡಿಯನ್ನು ಅವರಿಗೆ ತೋರಿಸಿ ಮಾಹಿತಿಯನ್ನು ದೃಢೀಕರಿಸಬೇಕಾಗುತ್ತದೆ.

ಹಾಗಾಗಿ ಬಳ್ಳಾರಿ ತಾಲ್ಲೂಕಿನ ಗ್ರಾಮೀಣ ಭಾಗದ ಎಲ್ಲಾ ಗ್ರಾಮಗಳ ನಾಗರಿಕರು ಯಾವುದೇ ಆತಂಕವಿಲ್ಲದೆ ಸಕ್ರಿಯವಾಗಿ ಭಾಗವಹಿಸಿ ಜನಗಣತಿ ಕಾರ್ಯವನ್ನು ಯಶಸ್ವಿಗೊಳಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಇಂದು ಪೊಲೀಸ್ ಧ್ವಜ ದಿನಾಚರಣೆ

ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ನಗರದ ಜಿಲ್ಲಾ ಸಶಸ್ತ್ರ ಪೊಲೀಸ್ ಮೈದಾನದಲ್ಲಿ ಏಪ್ರಿಲ್ 02 ಬೆಳಗ್ಗೆ 8 ಗಂಟೆಗೆ ಪೊಲೀಸ್ ಧ್ವಜ ದಿನಾಚರಣೆ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಯಾಗಿ ನಿವೃತ್ತ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಸಲೀಮ ಪಾಶ ಭಾಗವಹಿಸಿ ಗೌರವ ವಂದನೆ ಸ್ವೀಕರಿಸಲಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್. ಜಾಹ್ನವಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಿ. ಮಂಜುನಾಥ್ ಸೇರಿದಂತೆ ವಿವಿಧ ಅಧಿಕಾರಿ ಮತ್ತು ಸಿಬ್ಬಂದಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಬಿಜಿಎಂ ಚಿತ್ರೀಕರಣ ಆರಂಭ




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ದೇಶದ ಸಾಂಪ್ರದಾಯಿಕವಾದ ಅರೇಂಜ್ ಮ್ಯಾರೇಜ್ ಮಹತ್ವದ ಕುರಿತಾದ "ಬಿಜಿಎಂ" ಚಿತ್ರದ ಚಿತ್ರೀಕರಣಕ್ಕೆ ಇಂದು ನಗರದ ದುರ್ಗಮ್ಮ ದೇವಸ್ಥಾನದ ಬಳಿ ಮೇಯರ್ ಪಿ.ಗಾದೆಪ್ಪ ಚಾಲನೆ ನೀಡುವರು ಎಂದು ಚಿತ್ರದ ನಿರ್ದೇಶಕ ರಮೇಶ ಭೀಮರಾಯಪ್ಪ ಹೇಳಿದ್ದಾರೆ.ಅವರು ಇಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ. ರಾಮಾಯಣ ವಸ್ತು ವಿಷಯದ ಜೊತೆಗೆ ತಳುಕು ಹಾಕಿಕೊಂಡಿದ್ದು. ತ್ರಿಕೋನ ಪ್ರೇಮಕಥೆಯ ಈ ಚಿತ್ರದ ಚಿತ್ರೀಕರಣ ಇಂದು ಆರಂಭ, ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಹಾಗು ಬೆಂಗಳೂರಿನಲ್ಲಿ ನಡೆಯಲಿದೆ.ನೂರಕ್ಕು ಹೆಚ್ಚು ಸಿನಿಮಾಗಳಿಗೆ ಹಾಡು ಬರೆದಿರುವ ಕಿನ್ನಾಳ್ ರಾಜು ಅವರು ಹಾಡುಗಳನ್ನು ಬರೆದಿದ್ದಾರೆ, ಸಂಭಾಷಣೆ, ಚಿತ್ರಕತೆ, ಬೆಂಗಳೂರಿನ ಮಲ್ಲಿಕಾರ್ಜುನ, ದಿನೇಶ್ ನಾಯಕ ನಟರು. ಪೂಜಾ ಕೊಟ್ಟೂರು, ಶ್ರೀ ಚಕ್ರ ಫಿಲಿಂಸ್ ನಿರ್ಮಾಣ ಮಾಡುತ್ತಿದ್ದು. ಆಕಾಶ್ ಪರ್ವ ಸಂಗೀತ ನಿರ್ದೇಶಕರಾಗಿದ್ದಾರೆ. ಬರುವ ಆಗಷ್ಟನಲ್ಲಿ ಗಣೇಶನ ಹಬ್ಬಕ್ಕೆ ಚಿತ್ರ ಬಿಡುಗಡೆ ಮಾಡುವ ಉದ್ದೇಶ ಇದೆ ಎಂದು ಹೇಳಿದರು.ಸುದ್ದಿಗೋಷ್ಠಿಯಲ್ಲಿ ನಾಯಕ ನಟರು, ನಾಯಕಿ ಮೊದಲಾದವರು ಪಾಲ್ಗೊಂಡಿದ್ದರು.

# ನಿಖರ ದತ್ತಾಂಶ ಸಂಗ್ರಹಿಸಿ ಜನಗಣತಿ ಕಾರ್ಯ ಯಶಸ್ವಿಗೊಳಿಸಿ : ಡಿಸಿ ಸೂಚನೆ

ಮಲ್ಲಮ್ಮ ನುಡಿ ವಾರ್ತೆ ವಿಜಯನಗರ (ಹೊಸಪೇಟೆ)

ಮುಂಬರುವ ಜನಗಣತಿ ಕಾರ್ಯವನ್ನು ಅತ್ಯಂತ ನಿಖರ ಮತ್ತು ಸ್ಪಷ್ಟ ಮಾಹಿತಿಯೊಂದಿಗೆ ವ್ಯವಸ್ಥಿತವಾಗಿ ದತ್ತಾಂಶ ಸಂಗ್ರಹಿಸುವ ಮೂಲಕ ಗಣತಿ ಕಾರ್ಯ ಯಶಸ್ವಿಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ತಿಳಿಸಿದರು.




ನಗರದ ಪಿ.ಡಿ.ಐ.ಟಿ ಕಾಲೇಜಿನಲ್ಲಿ ಬುಧವಾರ ಗಣತಿದಾರರಿಗೆ ಹಾಗೂ ಮೇಲ್ವಿಚಾರಕರಿಗೆ ಮೂರು ದಿನಗಳ ತರಬೇತಿ ಮತ್ತು ಮಾರ್ಗದರ್ಶನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಈ ಬಾರಿ ಗಣತಿ ಕಾರ್ಯವು ಸಂಪೂರ್ಣವಾಗಿ ಡಿಜಿಟಲ್ ರೂಪದಲ್ಲಿ ನಡೆಯುತ್ತಿರುವುದರಿಂದ, ಗಣತಿದಾರರು ನಿಗದಿಪಡಿಸಿದ ಮೊಬೈಲ್ ಆಪ್‌ನ್ನು ಸಮರ್ಪಕವಾಗಿ ಬಳಸಬೇಕು. ತಾಂತ್ರಿಕ ತೊಂದರೆಗಳಿದ್ದಲ್ಲಿ ತಕ್ಷಣವೇ ತಾಂತ್ರಿಕ ತಂಡದ ಗಮನಕ್ಕೆ ತರುವ ಮುಖೇನ ಪರಿಹಾರ ಕಂಡುಕೊಳ್ಳಬೇಕು. ಗಣತಿ ಕಾರ್ಯವು 2 ಹಂತಗಳಲ್ಲಿ ನೆಡಯಲಿದ್ದು, ಇಂದಿನಿಂದ 15 ದಿನಗಳ ಕಾಲ ಸ್ವಯಂ ಘೋಷಣೆಗೆ ಅವಕಾಶ ಕಲ್ಪಿಸಲಾಗಿದೆ. ನಂತರ ಪ್ರತಿಯೊಬ್ಬ ಗಣತಿದಾರರು ಮನೆ–ಮನೆಗೆ ಭೇಟಿ ನೀಡಿದಾಗ ಸಂಗ್ರಹಿಸುವ ಮಾಹಿತಿ ಶೇ.100ರಷ್ಟು ನಿಖರವಾಗಿರಬೇಕು. ಯಾವುದೇ ಮಾಹಿತಿಯನ್ನು ಅಂದಾಜಿನ ಮೇಲೆ ದಾಖಲಿಸಬಾರದು. ಗಣತಿದಾರರಿಗೆ ಈಗಾಗಲೇ ತರಬೇತಿ ನೀಡಲಾಗಿದ್ದು, ಈ ಗಣತಿ ಕಾರ್ಯಕ್ಕೆ 27 ಚಾರ್ಜ್ ಆಫಿಸರ್, 44 ಫೀಲ್ಡ್ ತರಬೇತುದಾರರು, 16 ತಾಂತ್ರಿಕ ಸಹಾಯಕರು, ಹಾಗೂ 499 ಮೇಲ್ವಿಚಾರಕರನ್ನು ಮತ್ತು 2847 ಗಣತಿದಾರರು ನೇಮಿಸಲಾಗಿದೆ. 2467 ಹೌಸ್ ಲಿಸ್ಟಿಂಗ್ ಬ್ಲಾಮಕ್ ಗುರುತಿಸಲಾಗಿದ್ದು, ಒಬ್ಬ ಗಣತಿದಾರರಿಗೆ 250 ಮನೆಗಳ ಹಂಚಿಕೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಈ ಜನಗಣತಿಯು ದೇಶದ ಭವಿಷ್ಯ ಜನಕಲ್ಯಾಣ ಯೋಜನೆಗಳ ರೂಪಿಸುವಿಕೆಗೆ ಬುನಾದಿಯಾಗಲಿದೆ. ಇದರಲ್ಲಿ ಯಾವುದೇ ಲೋಪದೋಷಗಳಿಗೆ ಅವಕಾಶ ನೀಡದಂತೆ ಎಚ್ಚರಿಸಿ ಕಾರ್ಯ ನಿರ್ವಹಿಸಬೇಕು. ಆದ್ದರಿಂದ ಗಣತಿದಾರರು ನಿಗದಿಪಡಿಸಿದ ಕಾಲಮಿತಿಯೊಳಗೆ ತಮಗೆ ವಹಿಸಿದ ಬ್ಲಾಕ್‌ಗಳ ಗಣತಿಯನ್ನು ಪೂರ್ಣಗೊಳಿಸಬೇಕು. ಪ್ರತಿದಿನದ ಪ್ರಗತಿಯನ್ನು ಆಯಾ ದಿನವೇ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು ಎಂದು ತಿಳಿಸಿದ ಅವರು, ಗಣತಿದಾರರು ಸಾರ್ವಜನಿಕರ ಮನೆಗೆ ಭೇಟಿ ನೀಡಿದಾಗ ಸೌಜನ್ಯದಿಂದ ವರ್ತಿಸಿ, ಗಣತಿಯ ಉದ್ದೇಶವನ್ನು ಮನವರಿಕೆ ಮಾಡಿಕೊಡಬೇಕು. ಸಾರ್ವಜನಿಕರು ಸಹ ಸಂಯಮದಿಂದ ನಿಖರ ಮತ್ತು ಸ್ಪಷ್ಟ ಮಾಹಿತಿ ನೀಡಬೇಕು. ಸಾರ್ವಜನಿಕರು ನೀಡುವ ಮಾಹಿತಿ ಗೌಪ್ಯತೆ ಕಾಪಾಡಲಾಗುವುದು ಎಂದು ಹೇಳಿದರು.

ಈ ವೇಳೆ ಜಿಲ್ಲಾ ಪಂಚಾಯತ್ ಸಿಇಓ ನೋಂಗ್ಜಾಯ್ ಮಹ್ಮದ್ ಅಲಿ ಅಕ್ರಂ ಷಾ, ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ, ನಗರಸಭೆ ಪೌರಾಯುಕ್ತ ಶಿವಕುಮಾರ್, ನಗರಾಭಿವೃದ್ಧಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಮನೋಹರ್, ಕ್ಷೇತ್ರಶಿಕ್ಷಣಾಧಿಕಾರಿ ಶೇಖರಪ್ಪ ಹೊರಪೇಟೆ, ಜಿಲ್ಲಾ ನೋಡಲ್ ಅಧಿಕಾರಿ ಶ್ರೀಕಾಂತ್ ಸೇರಿದಂತೆ ವಿವಿಧ ಇಲಾಖೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು, ಗಣತಿದಾರರು, ಆಶಾ ಕಾರ್ಯಕರ್ತೆಯರು ಇದ್ದರು.

**ಜನಗಣತಿ ಪ್ರಯುಕ್ತ ಜಾಥಾ ಕಾರ್ಯಕ್ರಮ :**

ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ 16 ನೇ ಜನಗಣತಿ ಪ್ರಯುಕ್ತ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ, ಜಿಲ್ಲಾ ಪಂಚಾಯತ್ ಸಿಇಓ ನೋಂಗ್ಜಾಯ್ ಮಹ್ಮದ್ ಅಲಿ ಅಕ್ರಂ ಷಾ ಚಾಲನೆ ನೀಡಿದರು. ಈ ವೇಳೆ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ, ತಹಶೀಲ್ದಾರ ಶೃತಿ. ಎಂ, ನಗರಸಭೆ ಪೌರಾಯುಕ್ತ ಶಿವಕುಮಾರ್, ನಗರಾಭಿವೃದ್ಧಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಮನೋಹರ್ ಇದ್ದರು.

# ಸಕಾಲ ಸೇವೆ: ಬಳ್ಳಾರಿಗೆ ಪ್ರಥಮ ಸ್ಥಾನ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ 'ಸಕಾಲ' ಯೋಜನೆಯ ಮಾರ್ಚ್ ತಿಂಗಳ ಜಿಲ್ಲಾವಾರು ಕಾರ್ಯಕ್ಷಮತೆಯ ವರದಿ ಬಿಡುಗಡೆಯಾಗಿದ್ದು, ಗಣಿನಾಡು ಬಳ್ಳಾರಿ ಜಿಲ್ಲೆಯು ರಾಜ್ಯದಲ್ಲೇ ಅತ್ಯುತ್ತಮ ಪ್ರಗತಿ ಸಾಧಿಸಿ ಮೊದಲ ಸ್ಥಾನ ಅಲಂಕರಿಸಿದೆ. ಸಕಾಲದ ವಿವಿಧ ಮಾನದಂಡಗಳಾದ ಅರ್ಜಿ ವಿಲೇವಾರಿ, ವೇಗ, ನಿಗದಿತ ಅವಧಿಯೊಳಗಿನ ವಿಲೇವಾರಿ ಮತ್ತು ತಿರಸ್ಕೃತಗೊಂಡ ಅರ್ಜಿಗಳ ಪ್ರಮಾಣವನ್ನು ಆಧರಿಸಿ ಈ ಶ್ರೇಯಾಂಕ ನೀಡಲಾಗುತ್ತದೆ.ಸಾರ್ವಜನಿಕರ ಅರ್ಜಿಗಳನ್ನು ನಿಗದಿತ ಕಾಲಮಿತಿಯೊಳಗೆ ವಿಲೇವಾರಿ ಮಾಡುವಲ್ಲಿ ಬಳ್ಳಾರಿ ಜಿಲ್ಲೆಯು ಮೇಲುಗೈ ಸಾಧಿಸಿದೆ. ಬಳ್ಳಾರಿ ಜಿಲ್ಲೆಯು ಶೇ.97.91 ರಷ್ಟು ಅರ್ಜಿಗಳನ್ನು ನಿಗದಿತ ಅವಧಿಯಲ್ಲಿ ವಿಲೇವಾರಿ ಮಾಡುವ ಮೂಲಕ ಗಮನಾರ್ಹ ಸಾಧನೆ ಮಾಡಿದೆ.

ಸಕಾಲ ಸೇವೆಯು ರಾಜ್ಯ ಸರ್ಕಾರದ ಒಂದು ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ನಾಗರಿಕರಿಗೆ ನಿಗದಿತ ಅವಧಿಯೊಳಗೆ ಸರ್ಕಾರಿ ಸೇವೆಗಳನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ. ಕರ್ನಾಟಕ ನಾಗರಿಕ ಸೇವೆಗಳ ಖಾತರಿ ಅಧಿನಿಯಮದಡಿ, ಜನಸಾಮಾನ್ಯರು ಸಲ್ಲಿಸುವ ಅರ್ಜಿಗಳಿಗೆ ಸರ್ಕಾರಿ ಕಚೇರಿಗಳು ವಿಳಂಬ ಮಾಡದೆ, ಕಾನೂನುಬದ್ಧವಾಗಿ ನಿಗದಿಪಡಿಸಿದ ಕಾಲಮಿತಿಯೊಳಗೆ ಸೇವೆ ನೀಡುವುದೇ 'ಸಕಾಲ' ಸೇವೆಯಾಗಿದೆ.ಕಂದಾಯ ಇಲಾಖೆಯ ಜಾತಿ, ಆದಾಯ ಮತ್ತು ವಾಸಸ್ಥಳ ದೃಢೀಕರಣ ಪತ್ರ. ಸಾರಿಗೆ ಇಲಾಖೆಯ ಚಾಲನಾ ಪರವಾನಗಿ, ವಾಹನ ನೋಂದಣಿ. ನಗರ– ಸ್ಥಳೀಯ ಸಂಸ್ಥೆಗಳಲ್ಲಿ ಜನನ ಮತ್ತು ಮರಣ ಪ್ರಮಾಣ ಪತ್ರ, ಖಾತಾ ಬದಲಾವಣೆ. ಪೊಲೀಸ್ ಇಲಾಖೆಯಲ್ಲಿನ ಪಾಸ್‌ಪೋರ್ಟ್ ಪರಿಶೀಲನೆ ಹಾಗೂ ಇತರೆ ಸೇರಿದಂತೆ 100 ಕ್ಕೂ ಹೆಚ್ಚು ಸೇವೆಗಳನ್ನು ಸಕಾಲದಲ್ಲಿ ಪಡೆಯಬಹುದಾಗಿದೆ.

**ಟಾಪ್ 5 ಜಿಲ್ಲೆಗಳ ವಿವರ:**

**ಬಳ್ಳಾರಿ (ಮೊದಲ ಸ್ಥಾನ – 78.65 ಅಂಕ)**

**ಚಾಮರಾಜನಗರ (ಎರಡನೇ ಸ್ಥಾನ – 78.45 ಅಂಕ)**

**ಧಾರವಾಡ (ಮೂರನೇ ಸ್ಥಾನ – 78.38 ಅಂಕ)**

**ಕಲಬುರಗಿ (ನಾಲ್ಕನೇ ಸ್ಥಾನ – 78.27 ಅಂಕ)**


**ಹಾವೇರಿ (ಐದನೇ ಸ್ಥಾನ – 78.26 ಅಂಕ)**

ಹೆಚ್ಚು ಜನಸಂಖ್ಯೆ ಮತ್ತು ಅರ್ಜಿಗಳ ಒತ್ತಡವಿರುವ ಬೆಂಗಳೂರು ನಗರ (32ನೇ ಸ್ಥಾನ) ಹಾಗೂ ಬೆಂಗಳೂರು ಗ್ರಾಮಾಂತರ (31ನೇ ಸ್ಥಾನ) ಜಿಲ್ಲೆಗಳು ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿವೆ. ಬೆಂಗಳೂರು ನಗರದಲ್ಲಿ ಶೇ.11.19 ರಷ್ಟು ಅರ್ಜಿಗಳು ತಿರಸ್ಕೃತಗೊಂಡಿರುವುದು ಹಿನ್ನಡೆಗೆ ಕಾರಣವಾಗಿದೆ.ರಾಜ್ಯಾದ್ಯಂತ ಮಾರ್ಚ್ ತಿಂಗಳಲ್ಲಿ ಲಕ್ಷಾಂತರ ಅರ್ಜಿಗಳು ಸಕಾಲ ಅಡಿಯಲ್ಲಿ ಸಲ್ಲಿಕೆಯಾಗಿದ್ದು, ಬೆಳಗಾವಿ (1,49,236) ಮತ್ತು ತುಮಕೂರು (1,19,794) ಜಿಲ್ಲೆಗಳಲ್ಲಿ ಅತಿ ಹೆಚ್ಚು ಸ್ವೀಕೃತಿ ದಾಖಲಾಗಿದೆ.

# ನೂತನ ಅಧ್ಯಕ್ಷ ಉಪಾಧ್ಯಕ್ಷರ ಸ್ಥಾನಕ್ಕೆ ಅವಿರೋಧ ಆಯ್ಕೆ

ಮಲ್ಲಮ್ಮ ನುಡಿ ವಾರ್ತೆ ಪಿರಿಯಾಪಟ್ಟಣ :

ಪಟ್ಟಣದ ಕಟ್ಟಡ ಕಾರ್ಮಿಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ನಾಗರಾಜ್ ( ಸ್ಪಾಟ್ ನಾಗ) ಉಪಾಧ್ಯಕ್ಷರಾಗಿ ಪಾಪಣ್ಣ ರವರು ಅವಿರೋಧವಾಗಿ ಆಯ್ಕೆಯಾದರು. ಪಟ್ಟಣದ ಕಟ್ಟಡ ಕಾರ್ಮಿಕರ ಸಂಘದ ಕಚೇರಿ ಆವರಣದಲ್ಲಿ ಬುಧವಾರ ಸಂಘದ ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು. ಈ ಸಂದರ್ಭದಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ಕ್ರಮವಾಗಿ ಒಂದೊಂದು ನಾಮಪತ್ರಗಳು ಸಲ್ಲಿಕೆಯಾದ ಹಿನ್ನೆಲೆಯಲ್ಲಿ ಚುನಾವಣಾ ಅಧಿಕಾರಿ ಹಾಗೂ ಸಹಕಾರ ಇಲಾಖೆ ಅಭಿವೃದ್ಧಿ ಅಧಿಕಾರಿ ಫಿಲೋಮಿನಾ ಘೋಷಿಸಿದರು. ಈ ಸಂದರ್ಭದಲ್ಲಿ ನೂತನ ಅಧ್ಯಕ್ಷ ಸ್ಪಾಟ್ ನಾಗರಾಜ್ ಮಾತನಾಡಿ ಸಂಘದ ಅಧ್ಯಕ್ಷ ಸ್ಥಾನಕ್ಕೆ ಅವಿರೋಧ ಆಯ್ಕೆಗೆ ಸಹಕರಿಸಿದ ಸಂಘದ ನಿರ್ದೇಶಕರು ಹಾಗೂ ಸರ್ವ ಸದಸ್ಯರೂ ಆಭಾರಿಯಾಗಿದ್ದು, ಕಾರ್ಮಿಕರ ಕ್ಷೇಮಾಭಿವೃದ್ಧಿಗೆ ಸದಾ ಬದ್ದವಾಗಿರುತ್ತೇನೆ. ಸರ್ಕಾರ ಅಸಂಘಟಿತ ಕಾರ್ಮಿಕರು,



ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಹಿತರಕ್ಷಣೆಗೆಂದು ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದು, ಇದರ ಸದ್ಬಳಕೆಗೆ ಮಾಡಿಕೊಳ್ಳಲು ಎಲ್ಲರೂ ಸಹಕಾರ ನೀಡಬೇಕು. ಕಾರ್ಮಿಕರು ಸಾವನ್ನಪ್ಪಿದರೆ ಅಥವಾ ಅಪಘಾತವಾಗಿ ಶಾಶ್ವತ ದುರ್ಬಲತೆ ಹೊಂದಿದರೆ ಅವರ ಕುಟುಂಬಕ್ಕೆ ಸರ್ಕಾರದಿಂದ ಸಹಾಯಹಸ್ತ ನೀಡಲಾಗುತ್ತದೆ. ಕಾರ್ಮಿಕ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ ತಲಾ ರೂ.60 ಸಾವಿರ, ಮೊದಲ ಎರಡು ಹೆರಿಗೆಗೆ ತಲಾ ರೂ.60 ಸಾವಿರ, ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯಧನ, ಕಾರ್ಮಿಕರು ಮರಣ ಹೊಂದಿದಲ್ಲಿ ರೂ.5 ಲಕ್ಷ, ಶಾಶ್ವತ ದುರ್ಬಲತೆಯಾದಲ್ಲಿ ರೂ.2 ಲಕ್ಷ, ಭಾಗಶಃ ದುರ್ಬಲತೆಯಾದಲ್ಲಿ ರೂ.1 ಲಕ್ಷ ಮತ್ತು ಕಾರ್ಮಿಕರ ಅಂತ್ಯಕ್ರಿಯೆಗೆ ರೂ.4 ಸಾವಿರ ಸೇರಿದಂತೆ ಇತರೆ ಸಹಾಯಧನದ ಯೋಜನೆಗಳು ಇವೆ. ಕಾರ್ಮಿಕರು ಈ ಯೋಜನೆಗಳ ಸದುಪಯೋಗಕ್ಕೆ ಮುಂದಾಗಬೇಕು ಎಂದರು. ಈ ಸಂದರ್ಭದಲ್ಲಿ ಸಂಘದ ಮುಖ್ಯ ಕಾರ್ಯದರ್ಶಿ ರುದ್ರಪ್ಪ, ನಿರ್ದೇಶಕರಾದ ಸುಬ್ಬಣ್ಣ, ಮಲ್ಲಿಕಾರ್ಜುನ್, ವೆಂಕಟೇಶ್, ಪಿ.ಎಂ.ಸೋಮಣ್ಣ, ಅಂಬರೀಷ್, ರಮೇಶ್, ಮಹಮದ್ ರಫಿ, ಪದ್ಮಮ್ಮ, ಗಿರೀಜಾ, ಆಂಥೋನಿ ಸಂಘದ ಸದಸ್ಯ ಜನಾರ್ದನ್, ಮುಖಂಡರಾದ ಪ್ರಮೋದ್, ಮಹದೇವ್, ಹೈಕಮಾಂಡ್ ಗಿರೀಶ್, ಪ್ರಕಾಶ್, ಚಂದ್ರು, ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಪ.ಜಾತಿ ಪಂಗಡಗಳ ಸಮಸ್ಯೆ ಶೀಘ್ರ ಇತ್ಯರ್ಥ ಪಡಿಸಿ: ಜಿಲ್ಲಾಧಿಕಾರಿ



• ಮಲ್ಲಮ್ಮ ನುಡಿ ವಾರ್ತೆ, ಕಾರವಾರ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕುಂದು ಕೊರತೆಗಳನ್ನು ತಮ್ಮ ಹಂತದಲ್ಲಿ ಪರಿಶೀಲಿಸಿ ಸಮಸ್ಯೆಗಳನ್ನು ಶೀಘ್ರವಾಗಿ ಇತ್ಯರ್ಥ ಪಡಿಸುವಂತೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ನಿರ್ದೇಶನ ನೀಡಿದರು.

ಅವರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲೆ ನಡೆಯುವ ದೌರ್ಜನ್ಯವನ್ನು ತಡೆಯುವ ನಿಟ್ಟಿನಲ್ಲಿ ತಕ್ಷಣವೇ ಸಂತ್ರಸ್ತರಿಗೆ ಸ್ಪಂದಿಸಬೇಕು ಎಂದು ಸೂಚಿಸಿದ ಅವರು, ಜಿಲ್ಲೆಯಲ್ಲಿ ಈ ಹಿಂದೆ ನಡೆದಿರುವ ದೌರ್ಜನ್ಯದ ಪ್ರಕರಣಗಳನ್ನು ಶೀಘ್ರವಾಗಿ ಪರಿಹರಿಸುವಂತೆ ತಿಳಿಸಿದರು.

ಜಿಲ್ಲೆಯಲ್ಲಿ ಸ್ಮಶಾನಗಳಿಗೆ ಮೀಸಲಿಟ್ಟ ನಿವೇಶಗಳನ್ನು ಅತಿಕ್ರಮಣ ಮಾಡಿರುವ ಕುರಿತು ದೂರುಗಳು ಕೇಳಿಬರುತ್ತಿದ್ದು ಈ ಬಗ್ಗೆ ಸಮಗ್ರ ವರದಿ ನೀಡುವಂತೆ ತಿಳಿಸಿದ ಅವರು, ಅಲೆಮಾರಿ ಜನಾಂಗದವರಿಗೆ ವಸತಿ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೃಷ್ಣಮೂರ್ತಿ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಉಮೇಶ ವೈ. ಕೆ., ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಸಮಿತಿ ಸದಸ್ಯರು ಮತ್ತಿತರರು ಇದ್ದರು.

# ಜಗತ್ತಿಗೆ ಮಹಾವೀರರ ತತ್ವ ಸರ್ವಕಾಲಕ್ಕೂ ಪ್ರಸ್ತುತ: ಕರ್ಣಕುಮಾರ

• ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ




ಸಂಘರ್ಷಮಯ ವಾತಾವರಣದ ಜಗತ್ತಿಗೆ ಮಹಾವೀರರ ತತ್ವಗಳು ಸರ್ವಕಾಲಕ್ಕೂ ಪ್ರಸ್ತುತವಾಗಿವೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕರ್ಣಕುಮಾರ ಅಭಿಪ್ರಾಯ ವ್ಯಕ್ತಪಡಿಸಿದರು.


ಅವರು ಮಂಗಳವಾರ ಕೊಪ್ಪಳ ನಗರದ ಅಶೋಕ ವೃತ್ತದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ನಗರಸಭೆ ಸಹಯೋಗದಲ್ಲಿ ಭಗವಾನ್ ಮಹಾವೀರರ ಜಯಂತಿಯ ಪ್ರಯುಕ್ತ ಹಮ್ಮಿಕೊಂಡಿದ್ದ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದರು.

ಸಾಮಾಜಿಕವಾಗಿ ಕಾಡುತ್ತಿರುವ ಅನೇಕ ಸವಾಲುಗಳು ನಿವಾರಣೆಯಾಗಲು ದಾರ್ಶನಿಕರ ಚಿಂತನೆ, ಸಂದೇಶಗಳಿಂದ ಸಾಧ್ಯವಿದೆ. ಭಗವಾನ್ ಮಹಾವೀರರ ಸಂದೇಶ, ಸತ್ಯ ಮತ್ತು ಅಹಿಂಸಾ ಪಾಲನೆಯಿಂದ ಸಾಮರಸ್ಯದ ಸಮಾಜ ಕಟ್ಟುವ ಅಗತ್ಯತೆ ಹಿಂದೆಂದಿಗಿಂತಲೂ ಈಗ ಇದೆ. ಜೈನರ 24ನೇ ತೀರ್ಥಂಕರರಾಗಿದ್ದ ಮಹಾವೀರರ ತತ್ವ ಹಾಗೂ ಶಾಂತಿಯ ಪರಮೋಚ್ಚ ಸಂದೇಶಗಳು ಇಂದಿನ ವಿಶ್ವಕ್ಕೆ ದಾರಿ ದೀಪವಾಗಿವೆ ಎಂದರು.

ಈ ಸಂದರ್ಭದಲ್ಲಿ ಜೈನ ಸಮಾಜದ ಅಧ್ಯಕ್ಷರಾದ ಮಹೀಂದ್ರ ಚೋಪ್ರಾ ಹಾಗೂ ಸಮಾಜ ಬಾಂಧವರು ಉಪಸ್ಥಿತರಿದ್ದರು.

**ಅರ್ಥಪೂರ್ಣ ಮೆರವಣಿಗೆ:** ಭಗವಾನ್ ಮಹಾವೀರ ಜಯಂತಿ ಅಂಗವಾಗಿ ಮಹಾವೀರರ ಭಾವಚಿತ್ರದ ಮೆರವಣಿಗೆ ನಗರದ ಅಶೋಕ ವೃತ್ತದಿಂದ ಪ್ರಾರಂಭಗೊಂಡು ಜವಾಹರ ರಸ್ತೆ, ಗಡಿಯಾರ ಕಂಬದ ಮಾರ್ಗವಾಗಿ ಕೋಟೆ ರಸ್ತೆಯ ಜೈನ್ ಬಸದಿವರೆಗೆ ಸಾಗಿ, ಅಲ್ಲಿ ಪೂಜಾ ಕಾರ್ಯಕ್ರಮ ಜರುಗಿತು. ನಂತರ ಅಲ್ಲಿಂದ ಪುನಃ ಗಡಿಯಾರ ಕಂಬದ ಮಾರ್ಗವಾಗಿ ಗೋಶಾಲೆ ರಸ್ತೆಯ ಜೈನ್ ಮಂದಿರದ ವರೆಗೆ ಶಾಂತಿ ಸಂದೇಶಗಳ ಘೋಷಣೆಯೊಂದಿಗೆ ಸಾಗುವ ಮೂಲಕ ಅರ್ಥಪೂರ್ಣವಾಗಿ ಜರುಗಿತು. ಮೆರವಣಿಗೆಯಲ್ಲಿ ಸಮಾಜದ ಮುಖಂಡರು, ಮಹಿಳೆಯರು, ಮಕ್ಕಳು ಭಾಗವಹಿಸಿದ್ದರು.

# ಅಯ್ಯಪ್ಪ ಸ್ವಾಮಿ ಜನ್ಮದಿನ ಪ್ರಸಾದ ವಿತರಣೆ



• **ಮಲ್ಲಮ್ಮ ನುಡಿ ವಾರ್ತೆ ಮುದಗಲ್**

ಪಟ್ಟಣದ ಡಾ! ಬಾಬಾ ಸಾಹೇಬ್ ಅಂಬೇಡ್ಕರ್ ವೃತ್ತದಲ್ಲಿ ಅಯ್ಯಪ್ಪ ಸ್ವಾಮಿ ಜನ್ಮದಿನ ಹಾಗೂ ತುಮಕೂರು ಸಿದ್ದಗಂಗಾ ಮಹಾಸ್ವಾಮಿಗಳ ಜನ್ಮದಿನ ನಿಮಿತ್ಯ ಬುಧವಾರ ಸಾರ್ವಜನಿಕರಿಗೆ ಪ್ರಸಾದ ವಿತರಣೆ ಮಾಡಲಾಯಿತು.

ಶಬರಿಮಲೈ ಅಯ್ಯಪ್ಪ ಸ್ವಾಮಿ ಹಾಗೂ ತುಮಕೂರು ಸಿದ್ದಗಂಗಾ ಮಹಾಸ್ವಾಮಿಗಳ ಭಾವಚಿತ್ರಕ್ಕೆ ಸ್ಥಳೀಯ ಮಸಾಲೆ ವ್ಯಾಪಾರಸ್ಥ ಬಿಟ್ಟು ಬಾ ಯಾರಿಗೆ ಹಳೆಪೇಟೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿದರು.

ವೆಂಕಟೇಶ್ ಹಿರೇಮನಿ,ಕಾಂತ ಕುಮಾರ ಪತ್ತಾರ, ಕೆಇಬಿ ಅಪ್ಪಣ್ಣ ಬಿಸೇ, ಮಂಜುನಾಥ್ ಕೊಳ್ಳಿ, ಸುರೇಶ್, ವೆಂಕಣ್ಣ ದೇಶಪಾಂಡೆ, ಅಮರೇಶ,ಆಂಜನೇಯ ದೇವಸ್ಥಾನದ ಅರ್ಚಕ,ಅಮರೇಶ ಕುಂಬಾರ, ಶಿವು, ಸಂಗಮೇಶ್ ಕೊಡೆಕಲ್, ನಾಗರಾಜ, ಪ್ರೀತಮ್, ಸೇರಿದಂತೆ ಅಯ್ಯಪ್ಪ ಸ್ವಾಮಿ ಮಾಲದಾರಿಗಳು, ಇತರರಿದ್ದರು.

# ರಾಜಶೇಖರ ಪಾಟೀಲ್ ಅವರಿಗೆ ಜನ್ಮ ದಿನದ ಶುಭ ಕೋರಿದ ಮಾಣಿಕ ಹಿಪರ್ಗಿ



• **ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ**

ಕರ್ನಾಟಕ ಸರ್ಕಾರದ ಮಾಜಿ ಸಚಿವ ರಾಜಶೇಖರ ಬಿ. ಪಾಟೀಲ್ ರವರ 60ನೇ ವರ್ಷದ ಹುಟ್ಟು ಹಬ್ಬ ಆಚರಣೆಯಲ್ಲಿ ತಾಲೂಕಿನ ಬೆಳಕೇರಾ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಮಾಣಿಕ ಹಿಪರ್ಗಿ ಅವರು ಶಾಲು ಹೊದಿಸಿ ಸನ್ಮಾನಿಸಿ ಜನ್ಮ ದಿನದ ಶುಭಾಶಯಗಳು ಕೋರಿದರು. ಈ ಸಂದರ್ಭದಲ್ಲಿ ಸತೀಶ ರಾಂಪುರೇ, ಸಂಜು ವಡನಕೇರಾ, ಅನೀಲ ಮಲಕ್ಕಾಪುರ್ ವಾಡಿ, ರಾಜು ತಾಳಮಡಗಿ, ಸತೀಶ ಕೋಡಂಬಲ್, ರಾಘವೇಂದ್ರ ವಡನಕೇರಾ ವೈಜಿನಾಥ ಕುಮಾರ್ ಚಿಂಚೋಳಿ ಸೇರಿದಂತೆ ಅನೇಕ ಅಭಿಮಾನಿಗಳು ಶುಭ ಕೋರಿದರು.

# ಶಿವಕುಮಾರ ಸ್ವಾಮಿರವರ ಜಯಂತಿ:ಅನ್ನದಾಸೋಹ ಯಶಸ್ವಿ

ಕಲಬುರಗಿ: ನಗರದ ಶಾಂತಿನಗರ ಬಡಾವಣೆಯಲ್ಲಿ ನಡೆದಾಡುವ ದೇವರು, ಶ್ರೀಮಠದ ಆದ್ಯ ದಾಸೋಹಿ, ತಪೋಮೂರ್ತಿ ಹಾಗೂ ರತ್ನ ಪದ್ಮಭೂಷಣರಾದ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರ 119ನೇ ವರ್ಷದ ಜನ್ಮದಿನದ ಅಂಗವಾಗಿ ಸಮಾಜ ಸೇವಕ ಅಣ್ಣಾರಾಯ ಹಿರೇಗೌಡರು ಅವರ ನೇತೃತ್ವದಲ್ಲಿ ಅನ್ನದಾಸೋಹ ಕಾರ್ಯಕ್ರಮಕ್ಕೆ ದಕ್ಷಿಣ ಮತಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ್, ಮಹಾನಗರ ಪಾಲಿಕೆ ಸದಸ್ಯ ಸಚಿನ್ ಶಿರವಾಳ ಅವರು ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖಂಡರಾದ ವೀರೇಶ್ ಟೈಲರ್,ಅಶೋಕ್ ಹೌದೆ, ಶಿವಶರಣಪ್ಪ ಕಕ್ಕಳಮೇಲಿ, ರಾಜಶೇಖರ್ ಹಿರೇಮಠ್, ಬಾನುಕುಮಾರ್ ಗಿರಿಗೋಳ್, ಶ್ರೀಶೈಲ್, ಧನರಾಜ್, ಅಮೃತ ಬಿರಾದಾರ್, ವಂದನ್ ಟೈಲರ್ ಹಾಗೂ ಅಮರ್ ಶಿರವಾಳ ಉಪಸ್ಥಿತರಿದ್ದರು.ಶ್ರೀ ಶಿವಕುಮಾರ ಸ್ವಾಮಿಗಳವರ ಜನ್ಮದಿನದ ನಿಮಿತ್ತವಾಗಿ ಆಯೋಜಿಸಲಾದ ಅನ್ನದಾಸೋಹ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಬಡಾವಣೆಯ ಹಿರಿಯರು, ಯುವಕರು ಹಾಗೂ ಸ್ನೇಹಿತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಕಂಗೊಳ ತಂದರು.

# ಹಾಲುಮತ ಸಮಾಜ ಅಭಿವೃದ್ಧಿಗೆ ಕಾಂಗ್ರೆಸ್ ಕೊಡುಗೆ ಶೂನ್ಯ

• **ಮಲ್ಲಮ್ಮ ನುಡಿ ವಾರ್ತೆಬಾಗಲಕೋಟೆ**



ಹಾಲುಮತಸಮಾಜದವ್ಯಕ್ತಿಯೇ ಮುಖ್ಯಮಂತ್ರಿಯಾಗಿದ್ದರೂ ಆ ಸಮಾಜದಅಭಿವೃದ್ಧಿಗಾಗಿ ಕಾಂಗ್ರೆಸ್ ಸರ್ಕಾರದ ಕೊಡುಗೆ ಶೂನ್ಯ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರಹೇಳಿದರು.

ಬಾಗಲಕೋಟೆ ವಿಧಾನಸಭಾ ಉಪಚುನಾವಣೆಯ ಪಕ್ಷದ ಅಭ್ಯರ್ಥಿ ವೀರಣ್ಣ ಚರಂತಿಮಠ ಪರವಾಗಿ ನಾಯನೇಗಲಿ ಗ್ರಾಮದಲ್ಲಿ ಮಂಗಳವಾರ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು,

ಸಮಾಜದ ಹೆಸರು ಬಳಸಿಕೊಂಡು ಅಧಿಕಾರದ ಗದ್ದುಗೆ ಏರಿದ ಕಾಂಗ್ರೆಸ್ ಮೂರು ವರ್ಷಗಳ ಅವಧಿಯಲ್ಲಿ ಹಾಲುಮತ ಸಮುದಾಯದ ಅಭಿವೃದ್ಧಿಗೆ ಯಾವುದೇ ಕಾರ್ಯಕ್ರಮ ಕೊಡಲಿಲ್ಲ ಎಂದರು.

ಎಲ್ಲ ಸಮಾಜಗಳ ಅಭಿವೃದ್ಧಿಯ ಜೊತೆ ಇಡೀ ರಾಜ್ಯದ ಸಮಗ್ರ ಅಭಿವೃದ್ಧಿಗೆ ಮತದಾರರು ಭಾರತೀಯ ಜನತಾ ಪಕ್ಷವನ್ನು ಬೆಂಬಲಿಸಿ, ಬಾಗಲಕೋಟೆ ಉಪ ಚುನಾವಣೆಯಲ್ಲಿ ಅಭಿವೃದ್ಧಿಯ ಹರಿಕಾರ ವೀರಣ್ಣ ಚರಂತಿಮಠ ಅವರನ್ನು ಗೆಲ್ಲಿಸಬೇಕು ಎಂದು ವಿಜಯೇಂದ್ರ ಮನವಿ ಮಾಡಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಈ ಭಾಗಕ್ಕೆ ಹಲವಾರು ಅಭಿವೃದ್ಧಿ ಯೋಜನೆಗಳನ್ನು ನೀಡಿದ್ದರು. ಜೊತೆಗೆ ಹೆಣ್ಣು ಮಕ್ಕಳಿಗೆ ಭಾಗ್ಯಲಕ್ಷ್ಮೀ ಕಾರ್ಯಕ್ರಮ ನೀಡಿದ್ದರಲ್ಲದೆ ರೈತರಿಗಾಗಿ ಪ್ರತ್ಯೇಕ ಬಜೆಟ್ ನೀಡಿ ಬಿಜೆಪಿ ರೈತರ ಪಕ್ಷ, ಬಡವರ ಪರವಾಗಿ ಕೆಲಸ ಮಾಡುವ ಪಕ್ಷ ಎಂಬುದನ್ನು ತೋರಿಸಿಕೊಟ್ಟಿದ್ದಾರೆ ಎಂದ ವಿಜಯೇಂದ್ರ, ಈ ಉಪಚುನಾವಣೆಯಲ್ಲಿ ಬಿಜೆಪಿ ಗೆಲ್ಲಿಸಿ 2028ರ ಚುನಾವಣೆಯಲ್ಲಿ ಬಿಜೆಪಿ ಗೆಲುವಿಗೆ ಮುನ್ನುಡಿ ಬರೆಯುವಂತೆ ಕರೆಯಿತ್ತರು.

ಮಾಜಿ ಸಚಿವ ರಾಜುಗೌಡ ಮಾತನಾಡಿ, ಪ್ರಚಾರದ ಸಂದರ್ಭದಲ್ಲಿಯೇ ಬಿಜೆಪಿ ಕಾರ್ಯಕರ್ತರಲ್ಲಿ ವಿಜಯೋತ್ಸವದ ಉತ್ಸಾಹ ಕಾಣುತ್ತಿದೆ. ಆದ್ದರಿಂದ ಮತದಾರರು ವೀರಣ್ಣ ಚರಂತಿಮಠ ಅವರನ್ನು ಗೆಲ್ಲಿಸುವುದು ಸತ್ಯ ಎಂದರು.

ವಿಧಾನ ಪರಿಷತ್ ಶಾಸಕ ಪಿ.ಎಚ್ ಪೂಜಾರ, ಮಾಜಿ ಸಚಿವ ಮುರುಗೇಶ ನಿರಾಣಿ ಮಾತನಾಡಿ, ಇಡೀ ರಾಜ್ಯ ಸರ್ಕಾರವೇ ಬಂದು ನಿಂತರೂ ಬಿಜೆಪಿ ಅಭ್ಯರ್ಥಿ ಚರಂತಿಮಠ ಗೆಲುವನ್ನು ತಡೆಯಲು ಸಾಧ್ಯವಿಲ್ಲ ಎಂದರು. ಸಂಸದ ಗೋವಿಂದ ಕಾರಜೋಳ, ರಾಜ್ಯ ಬಿಜೆಪಿ ಕಾರ್ಯದರ್ಶಿ ಶರಣು ತಳ್ಳಿಕೇರಿ, ಮಾಜಿ ಶಾಸಕ ಎ.ಎಸ್.ಪಾಟೀಲ ನಡಹಳ್ಳಿ, ಅಭ್ಯರ್ಥಿ ವೀರಣ್ಣ ಚರಂತಿಮಠ ಮಾತನಾಡಿದರು. ಸಭೆಗೂ ಮುನ್ನ ಬೃಹತ್ ಶೋಭಾಯಾತ್ರೆ ಜರುಗಿತು.

# ಗ್ಯಾರಂಟಿಗಳಿಂದ ಜನ ಸೋಮಾರಿಗಳಾಗಿಲ್ಲ: ಯತೀಂದ್ರ



• **ಮಲ್ಲಮ್ಮ ನುಡಿ ವಾರ್ತೆ ವಾರ್ತೆ, ಬಾಗಲಕೋಟೆ**

ಗ್ಯಾರಂಟಿ ಸೌಲಭ್ಯಗಳಿಂದ ಜನ ಅದರಲ್ಲೂ ದುಡಿಯುವ ವರ್ಗ ಸೋಮಾರಿಗಳಾಗಿದ್ದಾರೆ ಎನ್ನುವ ಬಿಜೆಪಿ ನಾಯಕರ ಹೇಳಿಕೆ ಅರ್ಥವಿಲ್ಲದ್ದು ಎಂದು ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ಧರಾಮಯ್ಯ ಹೇಳಿದರು.

ಬಾಗಲಕೋಟೆ ಉಪ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರವಾಗಿ ಸಂಗಾಪುರ, ಬಿಲ್ ಕೆರೂರ, ರಾಂಪುರ, ಆಲೂರು, ಮಾಸ್ತಿಹಾಳ ಮತ್ತಿತರ ಗ್ರಾಮಗಳಲ್ಲಿ ಮತಯಾಚಿಸಿ,ಬಿಜೆಪಿಯವರು ಈ ಹೇಳಿಕೆ ನೀಡುವ ಮೂಲಕ ತಮ್ಮ ಪಕ್ಷ ಬಡವರ ಪರ ಅಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾರೆ ಎಂದರು.

ಗ್ಯಾರಂಟಿ ಯೋಜನೆಗಳು ಬಿಟ್ಟಿ ಭಾಗ್ಯ ಎನ್ನುತ್ತಾರೆ. ಬಡವರಿಗೆ ಕಾಂಗ್ರೆಸ್ ಸರ್ಕಾರ ನೀಡುವ ಸಹಾಯವನ್ನು ಬಿಜೆಪಿಗರಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ ಎಂದ ಯತೀಂದ್ರ, ಇವು ಬಿಟ್ಟಿ ಅಲ್ಲ ಬಡವರ ಹಕ್ಕು ಎಂದು ಹೇಳಿದರು.

ಬಡವರು, ರೈತರು ಸೇರಿ ಎಲ್ಲ ಸಮಾಜದವರ ಆಶೋತ್ತರಗಳಿಗೆ ಸ್ಪಂದಿಸಿ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದ ಎಚ್.ವೈ.ಮೇಟಿ ಅವರ ಪುತ್ರ ಉಮೇಶ ಮೇಟಿಗೆ ಮತ ನೀಡಿ ಗೆಲ್ಲಿಸಿ ಅವರ ಆತ್ಮಕ್ಕೆ ಶಾಂತಿ ದೊರಕುವಂತೆ ಮಾಡಬೇಕು ಎಂದು ಮತದಾರರಲ್ಲಿ ಮನವಿ ಮಾಡಿದರು.

ಮಹೇಶ ಹೊಡಗೌಡರ, ಶಶಿಕಾಂತ ಪೂಜಾರಿ, ಮಲ್ಲಣ್ಣ ಐಕೂರ, ಅಶ್ವಿನಿ ಪಾಟೀಲ, ರುಕ್ಮಿಣಿ ಮೇಟಿ, ಶ್ರೀಕರ ದೇಸಾಯಿ, ನಿಂಗಣ್ಣ ಕೋಟಿ ಮತ್ತಿತರ ಮುಖಂಡರು, ಕಾರ್ಯಕರ್ತರು ಇದ್ದರು.

# 16ನೇ ಮಾಸಿಕ ಶರಣ ಸಂಗಮ

• **ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್**

ಪಟ್ಟಣದ ಖಾಸಮಠದ ಆವರಣದಲ್ಲಿ ನಡೆದ 16 ನೇಯ ಮಾಸಿಕ ಶರಣ ಸಂಗಮ ಕಾರ್ಯಕ್ರಮ ಬುಧವಾರ ಜರುಗಿತು.

ಶರಣ ಸಂಗಮ ಕಾರ್ಯಕ್ರಮದಲ್ಲಿ ಕಡಕೊಳ್ ಮಡಿವಾಳಪ್ಪ ಅವರ ಜೀವನ ಚರಿತ್ರೆ ಹಾಗೂ ತತ್ವಪದಗಳ ಕುರಿತು ವಿಶೇಷ ಉಪನ್ಯಾಸವನ್ನು ಶ್ರೀ ಅಖಂಡೇಶ್ವರ ಹಿರೇಮಠ ಅವರು ನೀಡಿದರು.

ಕಡಕೊಳ್ ಮಡಿವಾಳಪ್ಪ ಅವರು ಶರಣ ಸಂಪ್ರದಾಯದ ಮಹಾನ್ ಚಿಂತಕರಾಗಿದ್ದು, ಅವರ ತತ್ವಪದಗಳು ಮಾನವ ಜೀವನಕ್ಕೆ ಮಾರ್ಗದರ್ಶನ ನೀಡುವಂತಿವೆ ಎಂದು ಹೇಳಿದರು.

ಅವರ ಪದಗಳಲ್ಲಿ ಭಕ್ತಿ, ಸತ್ಯನಿಷ್ಠೆ, ಸರಳತೆ ಹಾಗೂ ಸಮಾನತೆ ಎಂಬ ಮೌಲ್ಯಗಳು ಸ್ಪಷ್ಟವಾಗಿ ಪ್ರತಿಫಲಿಸುತ್ತವೆ ಎಂದು ವಿವರಿಸಿದರು.

ಮುಖ್ಯವಾಗಿ, ಅವರ ತತ್ವಪದಗಳು ಕೇವಲ ಭಕ್ತಿಗೆ ಸೀಮಿತವಾಗಿಲ್ಲದೆ,

ಸಮಾಜದಲ್ಲಿ ಅಂಧಶ್ರದ್ಧೆ ನಿವಾರಣೆ, ಮಾನವೀಯ ಮೌಲ್ಯಗಳ ಸ್ಥಾಪನೆ ಹಾಗೂ ಶ್ರಮದ ಮಹತ್ವವನ್ನು ಸಾರುವಂತಿವೆ.

"ಕಾಯಕವೇ ಕೈಲಾಸ" ಎಂಬ ಶರಣ ಪರಂಪರೆಯ ಸಂದೇಶವನ್ನು ಅವರು ತಮ್ಮ ಪದಗಳ ಮೂಲಕ ಜನರಿಗೆ ತಲುಪಿಸಿದ ರೀತಿ ವಿಶೇಷವಾಗಿದೆ ಎಂದು ಹೇಳಿದರು.

ಇಂದಿನ ಯುವ ಪೀಳಿಗೆ ಮೌಲ್ಯಾಧಾರಿತ ಜೀವನವನ್ನು

ಅಳವಡಿಸಿಕೊಳ್ಳಲು ಕಡಕೊಳ್ ಮಡಿವಾಳಪ್ಪ ಅವರ ತತ್ವಗಳು ಪ್ರೇರಣೆಯಾಗಬೇಕು ಎಂದು ಅವರು ಕರೆ ನೀಡಿದರು.

ಕಾರ್ಯಕ್ರಮದ ಅತಿಥಿಗಳಾಗಿ ಹುಸೆನಪ್ಪ ಸಕ್ರಿ ಶಿಕ್ಷಕರು ವಹಿಸಿದರು, ಶ್ರೀಮಠದ ಭಕ್ತರಾದ ನಾಗಭೂಷಣ ಅವಂಟಿ, ಸಿದ್ದಣ್ಣ ಜಾಡರ್, ಆನಂದಶೇಖರ ಹಿರೇಮಠ, ರವಿ ಕುಮಾರ್ ವಾರದ, ಶಿಕ್ಷಕರಾದ ಸಂತೋಷ ನೀರೆಟಿ, ನಾರಾಯಣ ರೆಡ್ಡಿ, ಮಾಣಿಕಪ್ಪ, ಮಲ್ಲೇಶಪ್ಪ ಸೇರಿದಂತೆ ಅನೇಕ ಭಕ್ತರು,

ಸ್ಥಳೀಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಉಪನ್ಯಾಸವನ್ನು ಆಸಕ್ತಿಯಿಂದ ಆಲಿಸಿದರು.




# ಜೆಸ್ಕಾಂ ಕಚೆರಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕರಿಂದ ಭೂಮಿಪೂಜೆ



• **ಮಲ್ಲಮ್ಮ ನುಡಿ ವಾರ್ತೆ ಕುರುಗೋಡು**

ಪಟ್ಟಣದ ಜೆಸ್ಕಾಂ ಕಛೇರಿ ಆವರಣದಲ್ಲಿ 2025–2026ನೇ ಸಾಲಿನ ಜೆಸ್ಕಾಂ ಯೋಜನೆ ಅಡಿಯಲ್ಲಿ ರೂ. 1.5ಕೋಟಿ ವೆಚ್ಚದಿಂದ ನಿರ್ಮಾಣವಾಗುವ ಕುರುಗೋಡು ಜೆಸ್ಕಾಂ ಎಇಇ ಕಛೇರಿ[ಉಪವಿಭಾಗೀಯ ಕಛೇರಿ] ಯ ನೂತನ ಕಟ್ಟಡಕ್ಕೆ ಕಂಪ್ಲಿಕ್ಷೇತ್ರದ ಶಾಸಕ ಜೆಎನ್.ಗಣೇಶ ಅವರು ಭೂಮಿಪೂಜೆ ನೆರವೇರಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಜೆಎನ್.ಗಣೇಶ ಅವರು, ಕುರುಗೋಡು ಪಟ್ಟಣದಲ್ಲಿ ಜೆಸ್ಕಾಂ ಎಇಇ ಕಛೇರಿ ಪ್ರಾರಂಭವಾಗುವುದರಿಂದ ಕುರುಗೋಡು ತಾಲೂಕಿನ ಜನತೆಗೆ ಆಡಳಿತಾತ್ಮಕವಾಗಿ ಬಹಳ ಅನುಕೂಲವಾಗಲಿದೆ ಎಂದು ನುಡಿದರು. ಎಇಇ ಅಧಿಕಾರಿಗಳ ಬೇಟಿಗಾಗಿ ಬಳ್ಳಾರಿಗೆ ಹೋಗಬೇಕಾಗಿತ್ತು. ಈಗ ಆ ಸಮಸ್ಯೆ ತಪ್ಪಿದೆ. ಟಿಸಿ.ವೈಪಲ್ಯ ಮತ್ತು ಲೈನ್ ದೋಷಗಳ ಬಗ್ಗೆ ಇಲ್ಲಿಯೇ ರೈತರು ದೂರುನೀಡಬಹುದು. ಆದ್ದರಿಂದ ಇದರಿಂದಾಗಿ ರೈತರಿಗೆ ಹಣ ಮತ್ತು ಸಮಯ ಉಳಿತಾಯವಾಗಲಿದ್ದು, ಈ ಕಛೇರಿಯ ಉಪಯೋಗವನ್ನು ತಾಲೂಕಿನ ರೈತರು ಸದುಪಯೋಗಪಡೆಯಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಬಳ್ಳಾರಿಯ ಜೆಸ್ಕಾಂ ಇಲಾಖೆಯ ಇಇ ಅಧಿಕಾರಿ ಹುಸೇನ್‌ಸಾಬ್, ಕುರುಗೋಡು ಜೆಸ್ಕಾಂ ಕಛೇರಿಯ ಎಇಇ. ರಾಜೇಂಧ್ರಪ್ರಸಾದ್, ಕಂಪ್ಲಿಜೆಸ್ಕಾಂ ಇಎ. ಶೆಕ್ಷಾವಲಿ, ಸಿವಿಲ್ ಇಇ ಅಧಿಕಾರಿಯಾದ ಮೊಹಿನುದ್ದೀನ್, ಕುರುಗೋಡು ಸೆಕ್ಷನ್‌ಅಧಿಕಾರಿ ಅನೀಪ್, ಸಹಾಯಕ ಅಧಿಕಾರಿ ಸದ್ದಾಂ, ಶೆಕ್ಷಾವಲಿ, ಸೇರಿದಂತೆ ಇತರೆ ಜೆಸ್ಕಾಂ ಇಲಾಖೆಯ ಸಿಬ್ಬಂದಿವರ್ಗದವರು,ಲೈನ್‌ಮೆನ್‌ಗಳು ಇದ್ದರ

## ಗೆಣಿಕೆಹಾಳು: ಡಾಂಬರೀಕರಣ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ

# ಡಾಂಬರ್ ರಸ್ತೆ ಮೇಲೆ ರೈತರು ಕೆಜಿವೀಲ್ಸ್ ಹೊಡೆಯಬೇಡಿ: ಗಣೇಶ



• **ಮಲ್ಲಮ್ಮ ನುಡಿ ವಾರ್ತೆ ಕುರುಗೋಡು**

ಗ್ರಾಮೀಣ ಪ್ರದೇಶಗಳಲ್ಲಿ ರೈತರಿಗೆ ಅನುಕೂಲವಾಗಲೆಂದು ಸರ್ಕಾರ ಕೊಟ್ಯಾಂತರ ರೂಗಳನ್ನು ವೆಚ್ಚಮಾಡಿ ರಸ್ತೆನಿರ್ಮಾಣ ಮಾಡುತ್ತೇವೆ. ಆದರೆ ರೈತರು ಆ ಸಂದರವಾದ ರಸ್ತೆಮೇಲೆ ಟ್ಯಾಕ್ಟರ್‌ಗಳ ಕೆಜಿವೀಲ್ಸ್ ಹೊಡೆದು ರಸ್ತೆಯನ್ನು ಹಾಳುಮಾಡುವುದು ನೋವಿನಸಂಗತಿ. ಆದ್ದರಿಂದ ರೈತರು ಡಾಂಬರ್‌ರಸ್ತೆಮೇಲೆ ಕೆಜಿವೀಲ್ಸ್ ಹೊಡೆಯಬೇಡಿರಿ ಎಂದು ಕಂಪ್ಲಿಕ್ಷೇತ್ರದ ಶಾಸಕ ಜೆಎನ್. ಗಣೇಶ ಅವರು ರೈತರಲ್ಲಿ ಮನವಿ ಮಾಡಿದರು.

ಅವರು ಸಮೀಪದ ಗೆಣಿಕೆಹಾಳು ಗ್ರಾಮದಲ್ಲಿ 2025–26ನೇ ಸಾಲಿನ 4059 ಸಿಎಂಐಡಿಕ್ಯೂ ಯೋಜನೆಅಡಿಯಲ್ಲಿ ರೂ.3 ಕೋಟಿ ವೆಚ್ಚದ ಗೆಣಿಕೆಹಾಳು ಗ್ರಾಮದಿಂದ ಕ್ಯಾದಿಗೆಹಾಳು ಕ್ರಾಸ್‌ವರೆಗೆಡಾಂಬರೀಕರಣರಸ್ತೆನಿರ್ಮಾಣ ಅಭಿವೃದ್ಧಿಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ಯಾರಂಟಿಯೋಜೆನೆಗಳಿಂದ ಕ್ಷೇತ್ರದ ಅಭಿವೃದ್ಧಿ ಅನುದಾನ ಬರುವುದು ಸ್ವಲ್ಪ ಕಷ್ಟಕರವಾದ ಸಂಗತಿ. ಆದರೂ ಸರ್ಕಾರ ಮಟ್ಟದಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಸದಾಬದ್ದನಾಗಿದ್ದೇನೆ. ಅದು ಎಷ್ಟೇಕಷ್ಟವಾದರೂ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ ತಂದು ಅಭಿವೃದ್ಧಿಕಾರ್ಯಗಳನ್ನು ಮಾಡುತ್ತೇನೆ. ಇಂಥಹ ಸಂದಿಗ್ದಪರಿಸ್ಥಿತಿಯಲ್ಲಿ ಬಂದ ಅನುದಾನದಿಂದ ರಸ್ತೆನಿರ್ಮಾಣ ಮಾಡಿದರೆ ರೈತರು ಮಾತ್ರ ಕೆಜಿವೀಲ್ಹೊಡೆದು ರಸ್ತೆಗಳನ್ನು ಹಾಳುಮಾಡುತ್ತಾರೆ. ಯಾವೊಬ್ಬ ರೈತರು ಕೂಡ ರಸ್ತೆಮೇಲೆ ಕೆಜಿವೀಲ್ಸ್ ಹೊಡೆಯಬಾರದು, ಬದಲಾಗಿ ಟ್ಯಾಕ್ಟರ್‌ಮೂಲಕ ವೀಲ್ಸ್‌ಗಳನ್ನು ತೆಗೆದುಕೊಂಡು ಹೋಗಬೇಕೆಂದು ರೈತರಿಗೆ ಮನವರಿಕೆ ಮಾಡಿದರು.

ಗೆಣಿಕೆಹಾಳು ಗ್ರಾಮದ ಮುಖಂಡ ಎ.ಅರಿವಿಶರಣಬಸವ ತಮ್ಮ ಅನಿಸಿಕೆ ವ್ಯಕ್ತಪಡಿಸಿ ಮಾತನಾಡಿದ ಅವರು, ಕಂಪ್ಲಕ್ಷೇತ್ರದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆನಿರ್ಮಾಣ, ಬೈಪಾಸ್ ರಸ್ತೆನಿರ್ಮಾಣ, ಚರಂಡಿವ್ಯವಸ್ಥೆ, ಕುಡಿಯುವನೀರು ಸೇರಿದಂತೆ ಇತರೆ ಅಭಿವೃದ್ಧಿ ಕಾರ್ಯಗಳನ್ನು ಕ್ಷೇತ್ರದ ಶಾಸಕ ಜೆಎನ್.ಗಣೇಶ ಅವರು ಮಾಡಿ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ ಎಂದು ಅವರ ಕಾರ್ಯವೈಖರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಲೋಕೋಪಯೋಗಿ ಇಲಾಖೆಯ ಇಂಜಿನಿಯರ್ ಸುರೇಶ, ಮುಖಂಡ ಎನ್.ಕರೆಪ್ಪ, ಕೆ.ದೊಡ್ಡನಗೌಡ, ಜಿ.ಬಸವನಗೌಡ, ಎನ್.ದೊಡ್ಡಬಸಪ್ಪ, ಎನ್‌ಎಸ್.ವೀರೇಶ, ಎನ್.ಜಡೆಪ್ಪ, ದ್ಯಾವಣ್ಣ, ಅಗಸರಜಡೆಪ್ಪ, ಗುತ್ತಿಗೆದಾರ ಶ್ರೀ ಸಿದ್ದರಾಮೇಶ್ವರ ಕನ್ಸಟ್ರಕ್ಷನ್ ಮಾಲಿಕ ಪ್ರವೀಣ್, ಬಸವನಗೌಡ ಸೇರಿದಂತೆ ಊರಿನ ರೈತ ಮುಖಂಡರು ಭಾಗವಹಿಸಿದ್ದರು. ಇದೇ ಮಾದರಿಯಲ್ಲಿ ಹೊಸಗೆಣಿಕೆಹಾಳು ಗ್ರಾಮದಲ್ಲಿ ರಸ್ತೆನಿರ್ಮಾಣಕಾಮಗಾರಿಗೆ ಭೂಮಿಪೂಜೆ, ಕುರುಗೋಡು–ಬೈಲೂರು ರಸ್ತೆನಿರ್ಮಾಣ ಕಾಮಗಾರಿಗೆ ಭೂಮಿಪೂಜೆ, ಕಾರ್ಯಕ್ರಮಗಳನ್ನು ಶಾಸಕ ಜೆಎನ್. ಗಣೇಶ ಅವರು ಭೂಮಿಪೂಜೆ ನೆರವೇರಿಸಿದರು.

# ಹಿಂದಿ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಗ್ರೇಡ್ ಸದಿರುವದನ್ನು ಖಂಡಿಸಿ ಮನವಿ




• **ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ**

ಹಿಂದಿ(ತೃ ತೀಯ ಭಾಷೆ) ವಿಷಯವನ್ನು ಎಸ್. ಎಸ್. ಎಲ್. ಸಿ ಪರೀಕ್ಷೆಯಲ್ಲಿ ಬರಿ ಗ್ರೇಡ್ ಪರಿಗಣಿಸುವುದನ್ನು ಖಂಡಿಸಿ ಅದನ್ನು ಪುನಃ ಅಂಕಧಾರಿತ ಪರಿಕ್ಷೆಯನ್ನಾಗಿ ಬದಲಾವಣೆ ಮಾಡಬೇಕೆಂದು ತಹಸೀಲ್ದಾರ ಹಾಗೂ ಶಿಕ್ಷಣ ಇಲಾಖೆ ಮುಖಾಂತರ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು. ಉತ್ತರ ಕರ್ನಾಟಕ ಹಿಂಧಿ ಉಪ ನ್ಯಾಸಕರ ಸಂಘದ ಅಧ್ಯಕ್ಷರಾದ ನರಸಿಂಗರೆಡ್ಡಿ ಗದಲೇಗಾವ ಮಾತನಾಡಿ ಗ್ರೇಡಿಂಗ ಪದ್ಧತಿ ಅವ್ಯಜ್ಞಾನಿಕ ವಾಗಿದೆ. ಇದರಿಂದ ವಿದ್ಯಾರ್ಥಿ ಗಳಿಗೆ ಅನ್ಯಾಯ ವಾಗಿದೆ. ಅಲ್ಲದೆ ಏಕಾ ಏಕಿ ಇಂಥ ನಿರ್ಧಾರ ಕೈಗೊಂಡಿರುವುದು ಪಾಲಕರಲ್ಲಿ ಶಿಕ್ಷಕರಲ್ಲಿ ವಿದ್ಯಾರ್ಥಿಗಳಿಗೆ ತೀವ್ರ ಆತಕಂಕ್ಕೆ ಕಾರಣ ವಾಗಿದೆ ಎಂದರು.ತಾಲೂಕ ಹಾಗೂ ಹುಲಸೂರ್ ಕ.ರಾ.ಪ್ರೌ.ಶಾ.ಸ.ಶಿ. ಸಂಘ ಅಲ್ಲದೆ ಹಿಂಧಿ ಪ್ರೌಢ ಶಾಲಾ ಶಿಕ್ಷಕರ ಸಂಘದಿಂದ ಹಾಗೂ ತಾಲೂಕು ಅಧ್ಯಕ್ಷರಾದ ವಿಜಯಕುಮಾರ್ ಮಾನೆ. ಹಾಗೂ ಪದಾಧಿಕಾರಿಗಳು. ಹುಲಸೂರ್ ಅಧ್ಯಕ್ಷರು ರಾದ ಸೂರ್ಯಕಾಂತ ಅಡಕೆ ಕಾರ್ಯರ್ಶಿ ಮದನ ಪಾಟೀಲ ಹಾಗೂ ಪದಾ ಧಿಕಾರಿಗಳು.ಹಿಂಧಿ ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ನಾಗಪ್ಪ ನಿಣ್ಣೆ. ಉಪಾಧ್ಯಕ್ಷರಾದ ಹಣಮಂತಪ್ಪಾ ಬಿರಾದಾರ್.ಪ್ರಧಾನ ಕಾರ್ಯದ ರ್ಶಿ ರಾಮ ಮೂಳೆ. ಖಜಾಂಚಿ ಪರಶುರಾಮ್ ಕುಂಬಾರ್.ಅಲ್ಲದೆ ಪುಷ್ಪ ಬಂದೆ. ದಮಯಂತಿ ಮೈಸೆ. ಉದ್ದವರಾವ್ ಉಪಾಸೆ.ಮಾಧವ ಗಣೇಶ. ವೀರೇಶ್ ಹೆಗ್ಗೆ. ಸಿದ್ದೋಧನ ಸಾಕ್ರೆ.ವೆಂಕಟ್ ಚಿಟ್ಟಂಪಲ್ಲಿ. ಪ್ರತಿಭಾ ಕಠಾ ರೆ. ರಾಧಿಖಾ ತಾಂದಳೆ. ಉಷಾ ಬಂದೆ. ಜೋತಿ ಪಾಟೀಲ. ಉಷಾ ಜಾಧವ. ವಿನಾಯಕ್ ತಾಂದಳೆ. ಪವಾರ ಉಜ್ವಲಾ. ಸುನೀತಾ ರೆಡ್ಡಿ. ಸೇರಿದಂತೆ ಅನೇಕರು ಮನವಿ ಪತ್ರ ಮೂಲಕ ಒತ್ತಾಯಿಸಿದ್ದಾರೆ.

## ಯತ್ನಾಳ್ ಬೆಂಬಲಿಗ ಬಿಜೆಪಿಗೆ ಸೇರ್ಪಡೆ..!



**ವಿಜಯಪುರ:** ನಗರ ಶಾಸಕ ಬಸನಗೌಡ ಪಾಟೀಲ್ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಯುವ ಮುಖಂಡ ನಂದು ಗಡಗಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೆಂದ್ರ ಅವರ ನಾಯಕತ್ವವನ್ನ ಒಪ್ಪಿಕೊಂಡು ಹಾಗೂ ಮಾಜಿ ಸಚಿವ ಅಪ್ಪಾಸಾಹೇಬ್ ಪಟ್ಟಣಶೆಟ್ಟಿ ಹಾಗೂ ವಿಜಯಪುರ ನಗರ ಮಂಡಲ ಅಧ್ಯಕ್ಷರಾದ ಸಂದೀಪ್ ಪಾಟೀಲ್ ಸಮ್ಮುಖದಲ್ಲಿ ಬಾಗಲಕೋಟೆ ಬಿಜೆಪಿ ಕಾರ್ಯಾಲಯದಲ್ಲಿ ಬಿಜೆಪಿ ಪಕ್ಷಕ್ಕೆ ಅಧಿಕೃತವಾಗಿ ಸೇರ್ಪಡೆಗೊಂಡಿದ್ದಾರೆ. ಈ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಹಿರಿಯ ನಾಯಕರು ಪಕ್ಷದ ಧ್ವಜ ನೀಡಿ ಪಕ್ಷಕ್ಕೆ ಬರ ಮಾಡಿಕೊಂಡಿದ್ದಾರೆ...ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವ ಹಾಗೂ ವಿಜಯೆಂದ್ರ ಅವರ ನಾಯಕತ್ವ ಹಾಗೂ ಪಕ್ಷದ ತತ್ವ ಸಿದ್ಧಾಂತಗಳನ್ನು ಮೆಚ್ಚಿ ಪಕ್ಷಕ್ಕೆ ಬಂದಿದ್ದೇನೆ , ಜಿಲ್ಲೆಯಲ್ಲಿ ಪಕ್ಷದ ಬೆಳೆವಣಿಗೆಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ನಂದು ಗಡಗಿ ತಿಳಿಸಿದ್ದಾರೆ.

## ಪ್ರಜಾಕೀಯ: ಹೊಸ ಆಪ್ ಲಾಂಚ್

**ಬೆಂಗಳುರು:** ರಿಯಲ್ ಸ್ಟಾರ್ ಉಪೇಂದ್ರ ಅವರು ಇಂದು (ಏಪ್ರಿಲ್ ಫಸ್ಟ್) ಪ್ರಜಾಕೀಯ ಪಕ್ಷದ ಹೊಸ ಆಪ್ ಲಾಂಚ್ ಮಾಡಿದ್ದಾರೆ.



ದಿ ರಿಯಲ್ ಪ್ರಜಾಕೀಯ ಎಂದು ಆಪ್ ಲಾಂಚ್ ಮಾಡಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ಉಪೇಂದ್ರ, "ಏಪ್ರಿಲ್ 1ನ್ನ ಮೂರ್ಖರ ದಿನ ಎಂದು ಕರೆಯುವ ಬದಲು ಅದನ್ನ ?ಬುದ್ಧಿವಂತರ ದಿನ? ಎಂದು ಆಚರಿಸಬೇಕು" ಎಂಬ ಆಸಕ್ತಿದಾಯಕ ವಿಚಾರವನ್ನ ಹಂಚಿಕೊಂಡಿದ್ದಾರೆ. "ಇಷ್ಟು ವರ್ಷ ಏಪ್ರಿಲ್ ಫಸ್ಟ್ ಫೂಲ್ಸ್ ಡೇ.. ಫೂಲ್ಸ್ ಡೇ.. ಅಂದುಕೊಂಡೆ ಬಂದುಬಿಟ್ವೆವು. ಫೂಲ್ಸ್ ಡೇಯನ್ನ ಒಂದು ಇಂಟೆಲಿಜೆನ್ಸ್ ಡೇ ಮಾಡೋಣ ಅನ್ನೋ ಯೋಚನೆ. ಫೂಲ್ಸ್ ಡೇಯನ್ನ ವೈಸ್ ಪೀಪಲ್ ಡೇ ಮಾಡೋಣ ಅಂತ ಅಂದುಕೊಂಡೆವು. ಹಾಗಾಗಿ ಇವತ್ತು, ಈ ಆಪ್ನ ಲಾಂಚ್ ಮಾಡಿದ್ದೇವೆ. ಏನಂದ್ರೆ, ಏನ್ ಮಾಡಿದ್ರು ಕೂಡ ಕಷ್ಟ ಆಗಿಬಿಟ್ಟಿದೆ. ನೇರವಾಗಿ ಮಾತಾಡಿದ್ರು ಕೂಡ ಲೆಫ್ಟ್, ರೈಟ್ ಅಂತ ಯೋಚನೆ ಮಾಡೋ ತರಹ ಆಗಿಬಿಟ್ಟಿದೆ. ಸ್ವಲ್ಪ ಭಯ ಆಗ್ತಾ ಇದೆ ಮಾತಾಡೋದಕ್ಕೆ. ಯಾಕೆಂದರೆ, ಲೆಫ್ಟ್ ಇರೋನು ಕೂಡ ಡಿಪೆಂಡ್ ಆಗಿರ್ತಾನೆ, ವಾಲಿಕೊಂಡು ಇರ್ತಾನೆ ಇನ್ನೊಬ್ಬರ ಮೇಲೆ. ರೈಟ್ ಇರೋನು ಕೂಡ ಇನ್ನೊಬ್ಬರ ಮೇಲೆ ವಾಲಿಕೊಂಡು ಇರ್ತಾನೆ. ನಾನು ಸ್ಟ್ರೈಟ್ ಆಗಿ ನಿಂತಿದ್ದೇನೆ ಸೆಂಟರ್ ಅಲ್ಲಿ. ಹಾಗಾಗಿ, ಇಂಡಿಪೆಂಡೆಂಟ್ ಆಗಿ ಯೋಚನೆ ಮಾಡ್ತೀನಿ ಅಂತ ಅಂದುಕೊಂಡಿದ್ದೇನೆ. ಈ ಐಡಿಯಾ ಮಾಡಿರೋದು ಕೂಡ ಇಂಡಿಪೆಂಡೆಂಟ್ ಆಗಿ, ಸ್ವತಂತ್ರವಾಗಿ ಯೋಚನೆ ಮಾಡೋರಿಗೆ ಮಾಡಿರೋದು ಇದು" ಎಂದಿದ್ದಾರೆ ಉಪೇಂದ್ರ.

# ಅನುಭವ ಮಂಟಪಕ್ಕೆ ಮತ್ತೆ 55 ಕೋಟಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಪ್ರಜಾಪ್ರಭುತ್ವ ಮತ್ತು ಸಂಸತ್ತಿನ ಮೂಲ ನೆಲೆಯಾದ ಬೀದರ್ ಜಿಲ್ಲೆ ಬಸವ ಕಲ್ಯಾಣದಲ್ಲಿ ನಿರ್ಮಾಣವಾಗುತ್ತಿರುವ ಆಧುನಿಕ ಅನುಭವ ಮಂಟಪಕ್ಕೆ ಹಣಕಾಸು ಸಚಿವರೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿ ಮತ್ತೆ 55 ಕೋಟಿ ರೂ. ಬಿಡುಗಡೆ ಮಾಡಿಸಿರುವುದಾಗಿ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದ್ದಾರೆ.

ಅನುಭವ ಮಂಟಪ ಕಾಮಗಾರಿಯನ್ನು ಮುಂದಿನ ವರ್ಷದೊಳಗೆ ಪೂರ್ಣಗೊಳಿಸಿ ಲೋಕಾರ್ಪಣೆ ಮಾಡಲು ಸಂಕಲ್ಪಿಸಿದ್ದು, ಬಸವ ತತ್ವ ಅನುಯಾಯಿಗಳಾದ ಮುಖ್ಯಮಂತ್ರಿಗಳು ತಮ್ಮ ಕೋರಿಕೆಯ ಮೇರೆಗೆ 2023ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಈವರೆಗೆ ಒಟ್ಟು 280 ಕೋಟಿ ರೂ. ಬಿಡುಗಡೆ ಮಾಡಿದ್ದು, ಎಲ್ಲ ಬಸವಭಕ್ತರ ಮತ್ತು ಬೀದರ್ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಅನುಭವ ಮಂಟಪ ಕಾಮಗಾರಿಗೆ ವೇಗ ನೀಡಲು ಹಣ ಬಿಡುಗಡೆ ಮಾಡುವಂತೆ ತಾವು ಮಾಡಿಕೊಂಡ ಮನವಿಯ ಮೇರೆಗೆ ಮಾರ್ಚ್ 20ರಂದು 50 ಕೋಟಿ ರೂ. ಬಿಡುಗಡೆ ಮಾಡಿದ್ದ ಮುಖ್ಯಮಂತ್ರಿಗಳು ಈಗ ಮತ್ತೆ 55 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ ಎಂದೂ ಈಶ್ವರ ಖಂಡ್ರೆ ತಿಳಿಸಿದ್ದಾರೆ. 12ನೇ ಶತಮಾನದಲ್ಲಿ ಬಸವಾದಿ ಶರಣರು ಯಾವುದೇ ಜಾತಿ ಭೇದ, ಲಿಂಗಭೇದವಿಲ್ಲದೆ ಸರ್ವರಿಗೂ ಸಮಾನ ಅವಕಾಶ ನೀಡಿ ಸಮಾಜದ ಹಿತಕ್ಕಾಗಿ ಚಿಂತನ ಮಂಥನ ನಡೆಸುತ್ತಿದ್ದ ಧರ್ಮ ಸಂಸತ್ತು ಅನುಭವ ಮಂಟಪವಿದ್ದ ಬಸವ ಕಲ್ಯಾಣದಲ್ಲಿ ಆಧುನಿಕ ಅನುಭವ ಮಂಟಪ ನಿರ್ಮಾಣ ಮಾಡಬೇಕು ಎಂಬ ತಮ್ಮ ನೇತೃತ್ವದ ನಿಯೋಗದ ಮನವಿಗೆ ಸಮ್ಮತಿಸಿ, 2013ರಿಂದ 2018ರವರೆಗೆ ಪ್ರಥಮ ಬಾರಿಗೆ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಅನುಮೋದನೆ ನೀಡಿ, ಬಜೆಟ್ ಘೋಷಣೆ ಮಾಡಿದ್ದ ಸಿದ್ದರಾಮಯ್ಯನವರು ಈಗ ಕಾಮಗಾರಿ ತ್ವರಿತಗತಿಯಲ್ಲಿ ನಡೆಯಲು ಅಗತ್ಯ ಹಣ ಬಿಡುಗಡೆ ಮಾಡುತ್ತಿದ್ದಾರೆ ಎಂದು ಈಶ್ವರ ಖಂಡ್ರೆ ತಿಳಿಸಿದರು.

ಬಸವ ಕಲ್ಯಾಣದಲ್ಲಿ ಅನುಭವ ಮಂಟಪದ ಶೇ. 70ರಷ್ಟು ಕಾಮಗಾರಿ ಮುಗಿದಿದ್ದು, ಉಳಿಕೆ ಕಾಮಗಾರಿ ಪ್ರಗತಿಯಲ್ಲಿದೆ ಮುಖ್ಯಮಂತ್ರಿಗಳು 2024ರ ಮಾರ್ಚ್ 6ರಂದು 100 ಕೋಟಿ, 2025ರ ಫೆ.25ರಂದು 10 ಕೋಟಿ, ಮಾರ್ಚ್ 17ರಂದು 15 ಕೋಟಿ, 2025ರ ಅಕ್ಟೋಬರ್ ನಲ್ಲಿ 50 ಕೋಟಿ ಕಳೆದ ತಿಂಗಳ 20ರಂದು ಮತ್ತೆ 50 ಕೋಟಿ ಬಿಡುಗಡೆ ಮಾಡಿದ್ದರು. ಈಗ ಆರ್ಥಿಕ ವರ್ಷದ ಕೊನೆಯ ದಿನ ಅದರೆ ಮಾರ್ಚ್ 31ರಂದು ಮತ್ತೆ 55 ಕೋಟಿ ಬಿಡುಗಡೆ ಮಾಡಿದ್ದು, ಒಟ್ಟಾರೆ 280 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ ಎಂದು ವಿವರ ನೀಡಿದ್ದಾರೆ.

## ಭೀಮ ನಾಯಕ್ ಹುಟ್ಟು ಹಬ್ಬದ ಅಂಗವಾಗಿ ಅನಾಥಾಶ್ರಮದಲ್ಲಿ ಅನ್ನದಾನ



**ಹಗರಿಬೊಮ್ಮನಹಳ್ಳಿ:** ಕೆಎಂಎಫ್ ಮಾಜಿ ಅಧ್ಯಕ್ಷ, ಹಗರಿಬೊಮ್ಮನಹಳ್ಳಿ ಮಾಜಿ ಶಾಸಕರಾದ ಭೀಮ ನಾಯಕ್ ಅವರ ಹುಟ್ಟು ಹಬ್ಬದ ಅಂಗವಾಗಿ ಕೊಟ್ಟೂರಿನ ಅನಾಥಾಶ್ರಮದಲ್ಲಿ ಅವರ ಅಭಿಮಾನಿಗಳಿಂದ ಅನ್ನದಾನ ಕಾರ್ಯಕ್ರಮ ನಡೆಯಿತು. ಅನಾಥಶ್ರಮದಲ್ಲಿ ವಯೋ ವೃದ್ಧರಿಗೆ ಹೋಳಿಗೆ ಊಟ ಮಾಡಿಸಲಾಯಿತು ಈ ಕಾರ್ಯಕ್ರಮದಲ್ಲಿ ಹಗರಿಬೊಮ್ಮನಹಳ್ಳಿ ಪುರಸಭೆ ಅಧ್ಯಕ್ಷರು ಎಂ. ಮರಿ ರಾಮಪ್ಪ, ಮಾಜಿ ಉಪಾಧ್ಯಕ್ಷರಾದ ಚಿಂತ್ರಪಳ್ಳಿ ದೇವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕೋರಿ ಗೋಣಿಬಸಪ್ಪ, ಪುರಸಭೆ ಸದಸ್ಯರಾದ ತ್ಯಾವಣಿಗಿ ಕೊಟ್ರೇಶ್, ಉಪ್ಪಾರ ಬಾಳಪ್ಪ ಕಾಂಗ್ರೆಸ್ ಮುಖಂಡರಾದ ಹೆಗ್ಡಾಳ್ ರಾಮಣ್ಣ, ನೂರಿಸಾಬ್ ಗ್ಯಾರಂಟಿ ಸದಸ್ಯರಾದ ಪರಶುರಾಮ, ಲಿಂಗರಾಜ ಮಾರುತಿ ಮೋಹನ್ ಮುಂತಾದ ಹಿರಿಯ ನಾಯಕರು ಇದ್ದರು.

## ಕೇರಳ ಲೀಡರ್ ಶಿಪ್ ಪ್ರಶಸ್ತಿ–2026

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ನಿಗಮದಲ್ಲಿ ಹಮ್ಮಿಕೊಂಡಿರುವ ಉತ್ತಮ ತರಬೇತಿ ಕಾರ್ಯಕ್ರಮಗಳಿಗೆ Best in Training and Organisation Development ವರ್ಗದಲ್ಲಿ ಕ ಎಸ್ ಆರ್ ಟಿ ಸಿ ಯ ವ್ಯಾಪ್ತಿಯಲ್ಲಿನ 05 ತರಬೇತಿ ಕೇಂದ್ರಗಳಲ್ಲಿ ವಿವಿಧ ಮಾದರಿಯ ತರಬೇತಿ ಕಾರ್ಯಕ್ರಮಗಳನ್ನು (ಇಂಧನ ಕ್ಷಮತೆ, ಪುನಃಶ್ಚೇತನ, ಅಪಘಾತ ರಹಿತ ಚಾಲನಾ ತರಬೇತಿ, ರಸ್ತೆ ಸುರಕ್ಷತೆ, ಸಿಮ್ಯುಲೇಟರ್, ಪಿ.ಎಂ.ಅಜಯ್ ಯೋಜನೆ ಅಡಿ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಭಾರಿ ವಾಹನದ ತರಬೇತಿಯೊಂದಿಗೆ ಸಾರಿಗೆ ಇಲಾಖೆಯ ಸಹಯೋಗದೊಂದಿಗೆ ಉಚಿತ ಚಾಲನಾ ಪರವಾನಗಿ ವಿತರಣೆ, ಅಲ್ಪಸಂಖ್ಯಾತ ನಿರ್ದೇಶನಾಲಯದ ಸಹಯೋಗದೊಂದಿಗೆ ಅಲ್ಪ ಸಂಖ್ಯಾತ ಸಮುದಾಯದ ಅಭ್ಯರ್ಥಿಗಳಿಗೆ ಲಘು/ಭಾರಿ ವಾಹನ ಚಾಲನಾ ತರಬೇತಿ ಉಚಿತ ಚಾಲನಾ ಪರವಾನಗಿ ವಿತರಣೆ, ಖಾಸಗಿ ಅಭ್ಯರ್ಥಿಗಳಿಗೆ ಚಾಲನಾ ತರಬೇತಿ, ಹೊಸದಾಗಿ ಆಯ್ಕೆಗೊಂಡ ಚಾಲಕ–ಕಂ–ನಿರ್ವಾಹಕರಿಗೆ, ಕರಾಸಾ ಪೇದೆಗಳಿಗೆ, ಕಿರಿಯ ಸಹಾಯಕರುಗಳಿಗೆ ವೃತ್ತಿ ಪರಿಚಯ ಹಾಗು ಕರ್ತವ್ಯ ಮತ್ತು ಜವಾಬ್ದಾರಿ ತರಬೇತಿ, ಮೇಲ್ವಿಚಾರಕ ಸಿಬ್ಬಂದಿಗಳಿಗೆ ವಿಶೇಷ ತರಬೇತಿ, ಚಾಲಕ ಬೋಧಕರನ್ನು ಘಟಕಗಳಿಗೆ ನಿಯೋಜಿಸಿ ಚಾಲನಾ ಸಿಬ್ಬಂದಿಗಳಿಗೆ ತರಬೇತಿ, ಆಡಳಿತ ಸಿಬ್ಬಂದಿಗಳಿಗೆ ಪುನಃಶ್ಚೇತನ ತರಬೇತಿ ಮತ್ತು ಇತರೆ ತರಬೇತಿ) ಹೀಗೆ 12000 ಕ್ಕೂ ಹೆಚ್ಚು ಸಿಬ್ಬಂದಿಗಳಿಗೆ ಕಳೆದ 6 ತಿಂಗಳ ಅವಧಿಯಲ್ಲಿ



ನಿಗಮದ ಅಭಿವೃದ್ಧಿಯಲ್ಲಿನ ಪರಿಣಾಮಕಾರಿ ತರಬೇತಿ ಸೂಚ್ಯಂಕವನ್ನು ಪರಿಗಣಿಸಿ ಪ್ರತಿಷ್ಠಿತ World HRD Congress Award-2026 Best in Class Training and Development ಪ್ರಶಸ್ತಿಗೆ ಆಯ್ಕೆ ಮಾಡಿರುತ್ತಾರೆ.

ಕೊಚ್ಚಿನ್ ನಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕ್ಯಾಪ್ಟನ್ ಎಸ್ .ಟಿ ಶ್ರೀಧರನ್ ನಿರ್ದೇಶಕರು, ಅಂಟಟಜರಜ ಠಜಿ ಖುಠಿ ಖಿಜಛಿಟಿಠಟಂಥಿ ರವರು, ನಿಗಮಕ್ಕೆ ಪ್ರಶಸ್ತಿ ಪ್ರದಾನ ಮಾಡಿದರು. ಡಾ॥ ಲತಾ ಟಿ. ಎಸ್. ಮಂಡಳಿ ಕಾರ್ಯದರ್ಶಿ/ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಹಾಗೂ ಶ್ರೀಮತಿ ಎ. ಎಸ್. ಗೀತಾಂಜಲಿ, ಪ್ರಾಂಶುಪಾಲರು, ಪ್ರಾದೇಶಿಕ ತರಬೇತಿ ಕೇಂದ್ರ, ಹಾಸನ ರವರು ನಿಗಮದ ಪರವಾಗಿ ಪ್ರಶಸ್ತಿಯನ್ನು ಸ್ವೀಕರಿಸಿದರು.

## ಜಿಲ್ಲಾಧ್ಯಕ್ಷರಾಗಿ ಸುರೇಶ ಆಯ್ಕೆ: ಅಭಿನಂದನೆ



• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ಕರ್ನಾಟಕ ರಾಜ್ಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ (ರಿ)ಕ್ಕೆ ಕೊಪ್ಪಳ ಜಿಲ್ಲಾದ್ಯಕ್ಷರಾಗಿ ವಡ್ಡರಹಟ್ಟಿ ಗ್ರಾ.ಪಂ ಅಭಿವೃದ್ಧಿ ಅಧಿಕಾರಿಯಾದ ಸುರೇಶ ಚಲುವಾದಿ ಅವರು ಆಯ್ಕೆಯಾಗಿರುವುದಕ್ಕೆ ಧೀರ ಕನ್ನಡಿಗರ ಕರವೇ ಸಂಘಟನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ವಿರುಪಾಕ್ಷಿಗೌಡ ನಾಯಕ ಸಂತಸ ವ್ಯಕ್ತಪಡಿಸಿದರು.

ಅವರು ಏ.1 ರಂದು ಸುರೇಶ ಚಲುವಾದಿ ಅವರಿಗೆ ಅಭಿನಂದನೆ ಸಲ್ಲಿಸಿ ಮಾತನಾಡಿದರು. ಸುರೇಶ ಚಲುವಾದಿ ಅವರು ಕಳೆದ ಮಾರ್ಚ್–26 ರಂದು, ಚುನಾವಣಾ ಅಧಿಕಾರಿಯಾಗಿದ್ದ ರಾಜಾಸಾಬ ನದಾಫ್ ಅವರ ನೇತೃತ್ವದಲ್ಲಿ ನಡೆದ ಸಂಘದ ಚುನಾವಣೆಯಲ್ಲಿ ಆಯ್ಕೆಯಾಗಿದ್ದು, ಸದರಿಯವರು ಗ್ರಾ.ಪಂ ಆಡಳಿತ ವ್ಯವಸ್ಥೆಯಲ್ಲಿ ಮಾತ್ರವಲ್ಲದೇ ಸಂಘದ ಚಟವಟಿಕೆಗಳಲ್ಲೂ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಲಿ ಎಂದು ಆಶಿಸಿ ಅಭಿನಂದಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಧೀರ ಕನ್ನಡಿಗರ ಕರವೇ ಸಂಘಟನೆಯ ಕೊಪ್ಪಳ ಜಿಲ್ಲಾ ಯುವ ಘಟಕದ ಅಧ್ಯಕ್ಷರಾದ ಶಿವಕುಮಾರ ಹಾಗೂ ವಡ್ಡರಹಟ್ಟಿ ಗ್ರಾ.ಪಂ ಯ ಎಲ್ಲಾ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ದಾಸೋಹ ಮೂರ್ತಿ, ಶತಮಾನದ ಸಂತನಿಗೆ ಭಾರತ ರತ್ನ ಬಂದಿದ್ರೆ..!



**ವರ್ತಮಾನ–ಅವಲೋಕನ**

• ಡಾ.ಎಂ.ಮಹ್ಮದ್ ಬಾಷ ಗೂಳ್ಯಂ

ಪ್ರಧಾನ ಸಂಪಾದಕ, ಬೆಂಗಳೂರು

ದೇವರು ಹೆಸರೇ ರೋಮಾಂಚಕ. ಈ ಸೃಷ್ಟಿ ಆರಂಭವಾದಾಗಿನಿಂದ ಆತ ಇದ್ದಾನೋ, ಇಲ್ಲವೋ ಎನ್ನುವ ಬಗ್ಗೆ ಚರ್ಚೆ, ಮೀಮಾಂಸೆ, ತರ್ಕ ನಡೆಯುತ್ತಲೇ ಇದೆ. ಉತ್ತರ ಇನ್ನೂ ಅಸ್ಪಷ್ಟ. ಆದರೆ ನಮ್ಮ ಸುದೈವ..! ನಾವು ನಡೆದಾಡುವ ದೇವರು ಡಾ. ಶಿವಕುಮಾರಶ್ರೀಗಳನ್ನು ಕಂಡಿದ್ದೆವು. ಅವರ ಆಶೀರ್ವಾದ ಪಡೆದಿದ್ದವು. ಮಠಕ್ಕೆ ಹೋದಾಗಲೆಲ್ಲಾ, ಘಮ್ಮೆನ್ನುವ ಸಾಂಬಾರ್, ಮೃದು ಅನ್ನ, ಮಧುರ ಮುದ್ದೆ, ಸ್ವಾದಿಷ್ಟಹಾಗೂ ರುಚಿಕರ ಉಪ್ಪಿಟ್ಟು ಮನಸಾರೆ ಸೇವಿಸಿದ್ದೆವು. ಅದೇನೇ ಇರಲಿ, ಆದರೆ ಕರ್ನಾಟಕದ ಕೀರ್ತಿ ಕಲಶ, ಭಾರತದ ಹೆಮ್ಮೆಯ ಸಂತ, ಲೋಕ ಜಂಗಮ, ಶತಮಾನಕ್ಕೇ ದಾಸೋಹದ ರುಚಿಯ ಉಣಬಡಿಸಿದ ಮಹಾ ದಾಸೋಹ ಮೂರ್ತಿ, ಶತಾಯುಷಿ..ಹೀಗೆ ಅದೆಷ್ಟೋ ಬಿರುದಾವಳಿಗಳನ್ನು ಅವರ ಹೆಸರಿನ ಜತೆ ಇಟ್ಟು ನೋಡಿದರೂ ಅವೆಲ್ಲವೂ ಆ ಮಹಾ ಯೋಗಿಯ ಮುಂದೆ ಕುಬ್ಜವಾಗಿಬಿಡುತ್ತವೆ..! ಯಾಕೆಂದರೆ ಶ್ರೀಗಳು ಅಭಿನವ ಬಸವಣ್ಣರಾಗಿದ್ದರು. ಪರಮಪೂಜ್ಯರ ಆಶ್ರಯದಲ್ಲಿ ಬೆಳೆದ ಲಕ್ಷೆಪ ಲಕ್ಷ ಮಕ್ಕಳು, ಮಂತ್ರಿ, ಶಾಸಕ, ಇಂಜಿನಿಯರ್, ರಾಜಕಾರಣಿ, ಸಾಹಿತಿ, ವಿಮರ್ಶಕ, ವೈದ್ಯರಾಗಿ ಇಂದು ವಿಶ್ವವ್ಯಾಪಿಯಲ್ಲಿದ್ದಾರೆ. ಇದಕ್ಕೆಲ್ಲಾ ಮುಖ್ಯ ಕಾರಣ ಶ್ರೀಗಳು, ಅವರ ತ್ರಿವಿಧ ದಾಸೋಹ ಪರಂಪರೆ. ಅವರು ಸರ್ವಧರ್ಮ ಸಮಾನತೆಯ ಜ್ಯೋತಿಯಾಗಿ ಬೆಳಗಿದ ಪರಿ ಅಚ್ಚರಿ, ಅನನ್ಯ ಕೂಡ.

**ಸಿದ್ಧಗಂಗಾ ಶ್ರೀಗಳ 119ನೇ ಜನ್ಮದಿನೋತ್ಸ ಪ್ರಯುಕ್ತ ಶ್ರೀಗಳ ಸ್ಮರಣೆ**

ಜನನ, ಬೆಳವಣಿಗೆ: ಮಾಗಡಿ ತಾಲೂಕಿನ ವೀರಾಪುರದ ಶ್ರೀಯುತ ಹೊನ್ನಪ್ಪ ಮತ್ತು ತಾಯಿ ಗಂಗಮ್ಮನವರಿಗೆ ಏಪ್ರಿಲ್ 1, 1908 ರಲ್ಲಿ 13ನೇ ಮಗು ಶಿವಣ್ಣನವರಾಗಿ ಜನಿಸಿದರು. 1913ರಲ್ಲಿ ಪ್ರಾಥಮಿಕ ಮತ್ತು 1921ರಲ್ಲಿ ಮಾಧ್ಯಮಿಕ ವಿದ್ಯಾಭ್ಯಾಸವನ್ನು ನಾಗವಲ್ಲಿಯಲ್ಲಿ ಮುಗಿಸಿ, 1922 ರಲ್ಲಿ ತುಮಕೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಕಲೆತು , 1926ರಲ್ಲಿ ಮೆಟ್ರಿಕ್ಯುಲೇಷನ್ ಗಳಿಸಿದರು. 1927ರಲ್ಲಿ ಆಗಿನ ಸಿದ್ಧಗಂಗಾ ಮಠಾಧಿಪತಿಗಳಾಗಿದ್ದ ಶ್ರೀ ಉದ್ದಾನ ಶಿವಯೋಗಿಗಳವರೊಡನಾಟವಾಗುತ್ತದೆ. ಇದೇ ವರ್ಷ ಎಂಟ್ರೆನ್ಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಸೇರುತ್ತಾರೆ. ಸೆಂಟ್ರಲ್ ಕಾಲೇಜ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಾ ಶಿವಣ್ಣನವರು ಶಿಸ್ತುಬದ್ಧವಾದ ಕಟ್ಟು ನಿಟ್ಟಾದ ವಿದ್ಯಾರ್ಥಿ ಜೀವನ ನಡೆಸುತ್ತಾರೆ. ವಿದ್ಯಾಭ್ಯಾಸದೊಂದಿಗೆ ಸಿದ್ಧಗಂಗಾ ಮಠದ ಒಡನಾಟ ಇದ್ದೇಇತ್ತು.

ಮಠಾಧಿಪತಿಯಾಗಿ ಪಟ್ಟಾಧಿಕಾರ: ಶ್ರೀರಕ್ಷೆಯಿಂದ ಉತ್ತಮವಾಗಿ ನಡೆಯುತ್ತಿದ್ದ ಸಿದ್ಧಗಂಗಾ ಮಠಕ್ಕೆ 1930ರಲ್ಲಿ ಉದ್ದಾನ ಶಿವಯೋಗಿಗಳ ಕಿರಿಯ ಶ್ರೀಗಳಾಗಿದ್ದ ಮರುಳಾರಾಧ್ಯರು ಆಕಸ್ಮಿಕವಾಗಿ ಶಿವೈಕ್ಯರಾಗುತ್ತಾರೆ. ಆಗ ಅವರ ಕ್ರಿಯಾ ಸಮಾಧಿ ಕಾರ್ಯಕ್ಕೆ ಆಗಮಿಸಿದ್ದ ಶಿವಣ್ಣನವರ ಕಡೆ ಉದ್ದಾನ ಸ್ವಾಮಿಜಿಗಳ ದೃಷ್ಟಿ ಹರಿಯುತ್ತದೆ. ಶಿವಣ್ಣನವರ ಹಿನ್ನೆಲೆಯ ಅರಿವಿದ್ದ ಉದ್ದಾನ ಶ್ರೀಗಳು ಯಾರ ಹೇಳಿಕೆಗೂ ಕಾಯದೆ ಎಲ್ಲರ ಸಮ್ಮುಖದಲ್ಲಿ ಶಿವಣ್ಣನೇ ಈ ಮಠದ ಉತ್ತರಾಧಿಕಾರಿ ಎಂದು ಘೋಷಿಸಿ ಬಿಡುತ್ತಾರೆ..! ಸನ್ಯಾಸತ್ವಸ್ವೀಕಾರದ ಬಳಿಕವೂ ವಿದ್ಯಾಭ್ಯಾಸ ಮುಂದುವರಿಸಿದ ಶ್ರೀಗಳು ಮತ್ತೆ ಬೆಂಗಳೂರಿಗೆ ಬಂದು ಸನ್ಯಾಸತ್ವದ ರೀತಿ ರಿವಾಜುಗಳನ್ನು ಸಂಪ್ರದಾಯಬದ್ಧವಾಗಿ ಪಾಲಿಸುತ್ತ, ಶಿಸ್ತುಬದ್ಧ ವಿದ್ಯಾರ್ಥಿಯಾಗಿಯೂ ತಮ್ಮ ಒಡನಾಡಿಗಳ ಮನ ಗೆಲ್ಲುವಲ್ಲಿ ಯಶಸ್ವಿಯಾಗುತ್ತಾರೆ. ವಿದ್ಯಾಭ್ಯಾಸ ಮುಗಿದು ಸ್ವಾಮೀಜಿಯವರು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿ ಸಿದ್ದಗಂಗಾ ಮಠಕ್ಕೆ ಹಿಂದಿರುಗಿ, ಅಂದಿನಿಂದ ತಮ್ಮ ಪೂರ್ಣ ಸಮಯವನ್ನು ಮಠದ ಏಳಿಗೆಗಾಗಿ ಮೀಸಲಿಡುತ್ತಾರೆ. ಇದಾಗಿ ಮುಂದೆ ಶ್ರೀ ಉದ್ದಾನ ಶಿವಯೋಗಿಗಳು ಶಿವೈಕ್ಯರಾದಾಗ ಮಠದ ಸಕಲ ಆಡಳಿತವೂ, ಮಠದ ವಿದ್ಯಾರ್ಥಿಗಳ, ಶಿಕ್ಷಣ ಸಂಸ್ಥೆಗಳ ಯೋಗ ಕ್ಷೇಮದ ಜವಾಬ್ದಾರಿಯೂ ಶ್ರೀಗಳವರಿಗೆ ಹಸ್ತಾಂತರವಾಗುತ್ತದೆ.

ಶ್ರೀಗಳು ಮಠದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡಾಗ ಮಠದ ಆದಾಯ ತುಂಬಾ ಕಡಿಮೆ ಇದ್ದುದನ್ನು ಅರಿತ ಶ್ರೀಗಳು ಭಕ್ತರ ಮನೆಗೆ ಭಿನ್ನಹ ಮುಂತಾದ ಆದ್ಯತೆಗಳ ಮೇರೆಗೆ ನಡೆದುಕೊಂಡೇ ಹೋಗಿ ಅಲ್ಲಿಂದ ದವಸ ಧಾನ್ಯಗಳನ್ನು ತಂದು ದಾಸೋಹ ನಡೆಸಿದ್ದು, ಆನಂತರ ಅದೇ ಮಠ ವಿಶ್ವಮಾನ್ಯವಾಗಿ ಬೆಳೆದ್ದೇ ಒಂದು ಅಮರ ಚರಿತೆ..!ಶಿಕ್ಷಣದ ಮಹತ್ವ ಸಾರಿದರು: ಬರೀ ದಾಸೋಹ ಮಾತ್ರವಲ್ಲ, ತ್ರಿವಿಧ ದಾಸೋಹಿಗಳಾಗಿ ಖ್ಯಾತರಾದ ಶ್ರೀಗಳು, ಮುಖ್ಯವಾಗಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವಕೊಟ್ಟರು. ತ್ರಿಕರಣ ಶುದ್ಧಿಯಿಂದ ಎಲ್ಲಾ ಧರ್ಮದ ಮಕ್ಕಳಿಗೂ ಗುರುಗಳಾದರು. ವಿದ್ಯಾವಂತರನ್ನು ಮಾಡಿ ಮಕ್ಕಳನ್ನು ದೇಶದೆಲ್ಲೆಡೆ ಪಸರಿಸಲು ಕಾರಣರಾದರು.



### ಶ್ರೀಗಳ ಅರಸಿ ಬಂದ ಅನೇಕ ಪ್ರಶಸ್ತಿಗಳು

**ಶ್ರೀಗಳ ಜಾತ್ಯಾತೀತ, ಧರ್ಮಾತೀತ ಶಿಕ್ಷಣ ಸೇವೆಯನ್ನು ಪರಿಗಣಿಸಿ ಕರ್ನಾಟಕ ವಿವಿ ಶ್ರೀಗಳಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. 100ನೆಯ ವರ್ಷದ ಹುಟ್ಟು ಹಬ್ಬ ಮತ್ತು ಕರ್ನಾಟಕ ಸುವರ್ಣ ಮಹೋತ್ಸವದಲ್ಲಿ ಕರ್ನಾಟಕ ಸರ್ಕಾರ ಪ್ರತಿಷ್ಠಿತ "ಕರ್ನಾಟಕ ರತ್ನ" ಪ್ರಶಸ್ತಿಯನ್ನು ಶ್ರೀಗಳಿಗೆ ನೀಡಿ ಗೌರವಿಸಿದೆ. 2015 ರಲ್ಲಿ ಭಾರತ ಸರ್ಕಾರ "ಪದ್ಮಭೂಷಣ" ಪ್ರಶಸ್ತಿಯನ್ನು ನೀಡಿದೆ. ಆದರೆ ಒಂದು ರಾಜ್ಯ, ರಾಷ್ಟ್ರ ಮಾಡದ ತ್ರಿವಿಧ ಸೇವೆ ಮಾಡಿದ ಶತಮಾನದ ಸಂತನಿಗೆ ಕೇಂದ್ರ ಸರ್ಕಾರ ಶ್ರೀಗಳಿಗೆ ಭಾರತ ರತ್ನವ ನೀಡಿದ್ದರೆ ಆ ಪ್ರಶಸ್ತಿಗೆ ಘನತೆ ಹೆಚ್ಚಾಗುತ್ತಿತ್ತು. ಆದರೆ ಆಂತರ್ಯದ ರಾಜಕೀಯ ತೊಡುಕಗಳಿಗೆ ಉತ್ತರಿಸುವುದು ಕಷ್ಟ. ಅದೇನೇ ಇರಲಿ, ವಯೋ ಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ನಡೆದಾಡುವ ದೇವರು, ಜನವರಿ 21, 2019 ರಂದು ಲಿಂಗೈಕ್ಯರಾದರು. ಅವರಿಗೆ ಆಗ 111 ವರ್ಷ..!**

### ಶ್ರೀಗಳ ಅದ್ಭುತ ದಿನಚರಿ

**ಪ್ರತಿದಿನವೂ ಶ್ರೀಗಳು ಬೆಳಗಿನ ನಾಲ್ಕುಗಂಟೆಗೆ ಎದ್ದು ಸ್ನಾನಮಾಡಿ, ಪೂಜಾಕೋಣೆಯಲ್ಲಿ ಒಂದು ತಾಸಿಗೂ ಹೆಚ್ಚು ಸಮಯ ಧ್ಯಾನದಲ್ಲಿ ತಲ್ಲೀನರಾಗುತ್ತಾರೆ. ಬಳಿಕ ಇಷ್ಟಲಿಂಗ ಪೂಜೆ. ದೂರದಿಂದ ಶ್ರೀಗಳ ದರ್ಶನಕ್ಕಾಗಿ ಬರುವ ಭಕ್ತರಿಗೆ ತ್ರಿಪುಂಡ್ರ ಭಸ್ಮವನ್ನು ಕೊಟ್ಟು ತಾವೂ ಧರಿಸಿ, ಪೂಜೆಯನ್ನು ಮುಗಿಸುತ್ತಾರೆ. ಮುಂಜಾನೆ ಆರೂವರೆಗಂಟೆಗೆ ಆಹಾರ ಸೇವನೆ. ಒಂದು ಅಕ್ಕಿ–ಇಡ್ಲಿ, ಸ್ವಲ್ಪ ಹೆಸರುಬೇಳೆ–ತೊವ್ವೆ, ಸಿಹಿ ಹಾಗೂ ಖಾರ ಚಟ್ನಿ ಸೇವನೆ. ಎರಡು ತುಂಡು ಹಣ್ಣು. ಇದರ ಬಳಿಕ, ಬೇವಿನ–ಚಕ್ಕೆ ಕಷಾಯ ಸೇವನೆ ಇದ್ದೇ ಇರುತ್ತಿತ್ತು. ಮಕ್ಕಳ ಸಾಮೂಹಿಕ ಪ್ರಾರ್ಥನೆಯಲ್ಲಿ ಅವರೂ ಪಾಲ್ಗೊಳ್ಳುವುದು, ಕಚೇರಿಗೆ ಧಾವಿಸಿ ಅಲ್ಲಿ, ಪತ್ರಿಕೆಗಳ ವಾಚನ, ಬಂದ ಭಕ್ತರಿಗೆ, ದರ್ಶನಾರ್ಥಿಗಳಿಗೆ ದರ್ಶನ ಇರುತ್ತಿತ್ತು. ಇದು ಒಂದೆರಡು ವರ್ಷವಲ್ಲ, ನೂರುವರ್ಷಗಳಾಗಿ ಶತಾಯುಷಿಗಳಾಗಿರುವವರೆಗೂ ಇತ್ತು.**

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927 (RNINO:KARKAN/2011/48371)